# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಮಂಗಳವಾರ, ಫೆಬ್ರವರಿ 4, 2025

ಸಂಪುಟ : 51 ಸಂಚಿಕೆ : 263 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


# ಕೊನೆ ಭಾಗಕ್ಕೆ ಹರಿಯದ ಭದ್ರಾ ನೀರು ಮಲೇಬೆನ್ನೂರಿನಲ್ಲಿ ರೈತರ ಪ್ರತಿಭಟನೆ




**ನಂದಿಗಾವಿ ಶ್ರೀನಿವಾಸ್ ನೇತೃತ್ವದಲ್ಲಿ ಡಿಸಿ ಭೇಟಿ : ಟಾಸ್ಕ್‌ಫೋರ್ಸ್ ರಚನೆಗೆ ಒತ್ತಾಯ**

ಮಲೇಬೆನ್ನೂರು, ಫೆ.3- ಭದ್ರಾ ಜಲಾಶಯದಿಂದ ನಾಲೆಗಳಿಗೆ ನೀರು ಬಿಟ್ಟು ತಿಂಗಳು ಸಮೀಪಿಸುತ್ತಿದ್ದರೂ ಅಚ್ಚುಕಟ್ಟಿನ ಕೊನೆ ಭಾಗಕ್ಕೆ ಇದುವರೆಗೆ ಕನಿಷ್ಟ ನೀರು ಹರಿದು ಬರುತ್ತಿಲ್ಲ ಎಂದು ಕೊನೆ ಭಾಗದ ರೈತರು ಮಲೇಬೆನ್ನೂರಿನ ನೀರಾವರಿ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

ಜಲಾಶಯದಿಂದ ಬಲದಂಡೆ ನಾಲೆಗೆ 2650 ಕ್ಯೂಸೆಕ್ಸ್ ನೀರು ಹರಿಸುತ್ತಿದ್ದರೂ ಕೊನೆ ಭಾಗಕ್ಕೆ ಮಾತ್ರ ನೀರು ಹರಿಯುತ್ತಿಲ್ಲ. ಭದ್ರಾವತಿ, ಚನ್ನಗಿರಿ ತಾಲ್ಲೂಕುಗಳಲ್ಲಿ ನಾಲೆಗೆ ಅಳವಡಿಸಿರುವ ಸಾವಿರಾರು ಅಕ್ರಮ ಪಂಪ್‌ಸೆಟ್‌ಗಳು ನಾಲೆಯಲ್ಲಿ ಹರಿಯುವ ಅರ್ಧದಷ್ಟು ನೀರನ್ನು ಎತ್ತುತ್ತಿವೆ. ಈ ಬಗ್ಗೆ ಅಧಿಕಾರಿಗಳು ಗಮನ ಹರಿಸುತ್ತಿಲ್ಲ ಎಂದು ಹೊಳೆಸಿರಿಗೆರೆ, ಭಾನುವಳ್ಳಿ, ಪಾಳ್ಯ, ಕೆ.ಎನ್.ಹಳ್ಳಿ, ಕಮಲಾಪುರ, ಯಲವಟ್ಟಿ, ಜಿಗಳಿ ರೈತರು ಆಕ್ರೋಶ ವ್ಯಕ್ತಪಡಿಸಿದರು.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಅವರು, ರೈತರ ಸಮಸ್ಯೆ ಆಲಿಸಿ, ಭದ್ರಾ ಮುಖ್ಯ ಇಂಜಿನಿಯರ್ ಮತ್ತು ದಾವಣಗೆರೆ ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿ, ಸಮಸ್ಯೆ ವಿವರಿಸಿ, ಪರಿಹಾರಕ್ಕೆ ಆಗ್ರಹಿಸಿದರು.

ಮಲೇಬೆನ್ನೂರಿನ ನೀರಾವರಿ ಕಚೇರಿಯಲ್ಲಿ ಇಂಜಿನಿಯರ್‌ಗಳು ಹಾಗೂ ಸಿಬ್ಬಂದಿ ಕೊರತೆ ಸಾಕಷ್ಟು ಇದೆ. ಕಾಲುವೆಗಳ ಮೇಲೆ ಸುತ್ತಾಡಿ ನೀರಿನ ನಿರ್ವಹಣೆ ಮಾಡುವವರು ಯಾರೆಂದು ನಂದಿಗಾವಿ ಶ್ರೀನಿವಾಸ್ ಭದ್ರಾ ಅಧೀಕ್ಷಕ ಇಂಜಿನಿಯರ್ ಅವರನ್ನು ಪ್ರಶ್ನಿಸಿದರು.

ದಿನಗೂಲಿ ನೌಕರರಿಗೆ ಸರಿಯಾಗಿ ಸಂಬಳ ನೀಡುತ್ತಿಲ್ಲ. ಹೀಗಾದರೆ ಅವರಿಂದ ಕೆಲಸ ನಿರೀಕ್ಷೆ ಮಾಡಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ರೈತರು ವ್ಯಕ್ತಪಡಿಸಿ, ಬಸವಾಪಟ್ಟಣ ಬಳಿ ಆರ್ 2 ನಲ್ಲಿ ನೀರಿನ ಮಟ್ಟ ಕಡಿಮೆ ಇದ್ದು, ಇದಕ್ಕೆ ಯಾರು ಹೊಣೆ ? ಎಂದು ಪ್ರಶ್ನಿಸಿದರು.

ಅಕ್ರಮ ಪಂಪ್‌ಸೆಟ್‌ಗಳನ್ನು ಬಂದ್ ಮಾಡದ ಹೊರತು ಕೆಳಭಾಗಕ್ಕೆ ನೀರು ಬರುವುದು ಅಸಾಧ್ಯ ಎಂದು ರೈತರು ಹೇಳಿದಾಗ, ಶ್ರೀನಿವಾಸ್ ಅವರು ರೈತರೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿದರು.

**ಟಾಸ್ಕ್‌ಫೋರ್ಸ್ ರಚನೆ :** ಭದ್ರಾ ಅಚ್ಚುಕಟ್ಟಿನ ಕೊನೆ ಭಾಗಕ್ಕೆ ನೀರು ಬರುತ್ತಿಲ್ಲ. ಇದರಿಂದ ರೈತರಿಗೆ ಬಹಳ ತೊಂದರೆ ಆಗುತ್ತಿದೆ. ನೀರಿಲ್ಲದೇ ತೋಟಗಳು ಒಣಗುತ್ತಿವೆ. ನಾಟಿ ಮಾಡಲು ನೀರಿಲ್ಲ ಎಂಬ ಅಂಶವನ್ನು ನಂದಿಗಾವಿ ಶ್ರೀನಿವಾಸ್ ಮತ್ತು ಭದ್ರಾ ಅಚ್ಚುಕಟ್ಟು ಪ್ರದೇಶ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾ ಮಂಡಳದ ಅಧ್ಯಕ್ಷ ವೈ.ದ್ಯಾವಪ್ಪರೆಡ್ಡಿ ಅವರು, ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಅವರ ಗಮನಕ್ಕೆ ತಂದು ಕೂಡಲೇ ಟಾಸ್ಕ್‌ಫೋರ್ಸ್ ಕಾರ್ಯಾಚರಣೆಗೆ ಒತ್ತಾಯಿಸಿದರು. (4ನೇ ಪುಟಕ್ಕೆ)

# ಸಿಡಿದೆದ್ದ ಪರಿಶಿಷ್ಟ ಸಚಿವರು

## ಡಿಕೆಶಿ ವಿರುದ್ಧ ಮತ್ತೆ ಸಭೆ, ಮಠಾಧೀಶರ ನೇತೃತ್ವದಲ್ಲಿ ಸಮಾವೇಶಕ್ಕೆ ನಿರ್ಧಾರ

**ಗೃಹ ಸಚಿವ ಡಾ.ಪರಮೇಶ್ವರ್ ಕೊಠಡಿಯಲ್ಲಿ ನಡೆದ ಸಭೆಯಲ್ಲಿ ಕೆಲವು ಪೀಠಾಧೀಶರಲ್ಲದೆ, ಸಚಿವರಾದ ಸತೀಶ್ ಜಾರಕಿಹೊಳಿ, ಕೆ.ಎನ್.ರಾಜಣ್ಣ, ಡಾ.ಎಚ್.ಸಿ.ಮಹದೇವಪ್ಪ ಮತ್ತಿತರರು ಭಾಗಿ.**

ಬೆಂಗಳೂರು,ಫೆ.3- ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ವಿರುದ್ಧ ಬಂಡೆದ್ದಿರುವ ಪರಿಶಿಷ್ಟ ಜಾತಿ ಮತ್ತು ವರ್ಗದ ಸಚಿವರು ಅಹಿಂದ ಸಭೆಯನ್ನು ಬೃಹತ್ ಮಟ್ಟದಲ್ಲಿ ನಡೆಸಲು ತೀರ್ಮಾನಿಸಿದ್ದಾರೆ.

ಅಹಿಂದ ಸಭೆಯನ್ನು ನಾವು ಆಯೋಜಿಸಿದರೆ, ಶಿವಕುಮಾರ್ ವರಿಷ್ಠರ ಮೇಲೆ ಒತ್ತಡ ತಂದು ಅದನ್ನು ತಡೆಯುವ ಪ್ರಯತ್ನ ಮಾಡುತ್ತಾರೆ.

ಇದರ ಬದಲು, ಅಹಿಂದದ ವಿವಿಧ ಸಮಾಜಗಳ ಮಠಾಧೀಶರ ಮೂಲಕ ಬೃಹತ್ ಸಮಾವೇಶವನ್ನು ಮಧ್ಯ ಕರ್ನಾಟಕದಲ್ಲಿ ಆಯೋಜಿಸಲು ತೀರ್ಮಾನಿಸಿದ್ದಾರೆ.

ಸಮಾವೇಶ ನಡೆಸುವ ಉದ್ದೇಶದಿಂದಲೇ ಕೆಲವು ಮಠಾಧೀಶರನ್ನು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರ ವಿಧಾನಸೌಧದ ಕೊಠಡಿಗೆ ಕರೆಸಿಕೊಂಡ ಈ ಸಚಿವರುಗಳು ಅವರ ಮನವೊಲಿಸಿ ಅಹಿಂದ ಸಮಾವೇಶದ ನೇತೃತ್ವ ವಹಿಸಿಕೊಳ್ಳುವಂತೆ ಮನವಿ ಮಾಡಿದ್ದಾರೆ.

ಸಮಾವೇಶದ ಉಸ್ತುವಾರಿ ಎಲ್ಲವನ್ನೂ ನಾವು ಮಾಡುತ್ತೇವೆ, ಆದರೆ, ನಿಮ್ಮ ನಾಯಕತ್ವದಲ್ಲಿ ಸಭೆ ನಡೆಯುತ್ತದೆ, ಆ ಸಭೆಗೆ ಅಹಿಂದ ವರ್ಗಗಳಿಗೆ ಸೇರಿದ ಮುಖಂಡರುಗಳಿಗೆ ಮಾತ್ರ ಆಹ್ವಾನ ನೀಡಿ. ಸಭೆಯಲ್ಲಿ ಸಮಾಜಕ್ಕೆ ಆಗುತ್ತಿರುವ ಅನ್ಯಾಯವನ್ನು ನೀವೇ ಬಿಡಿಸಿಡಿ, ಅಷ್ಟೇ ಅಲ್ಲ, ಸರ್ಕಾರದಿಂದ ಏನಾಗಬೇಕೆಂದು ಹಕ್ಕೊತ್ತಾಯ ಮಾಡಿ.

ಸ್ವಾಮೀಜಿಗಳು ಈ ರೀತಿ ಮಾಡುವುದರಿಂದ ಅಹಿಂದ ವರ್ಗದ ಜನರಿಗೆ ಸರ್ಕಾರದ ಒಂದಷ್ಟು ಸವಲತ್ತು ದೊರೆಯುವ ಜೊತೆಗೆ ನಮ್ಮ ಒಗ್ಗಟ್ಟು ಬಲಗೊಳ್ಳುತ್ತದೆ.

ಮುಂದಿನ ದಿನಗಳಲ್ಲಿ ಸರ್ಕಾರದ ನಾಯಕತ್ವದಲ್ಲೂ ಬದಲಾವಣೆ ತಳ್ಳಿಹಾಕುವಂತಿಲ್ಲ, ಇಂತಹ ಸನ್ನಿವೇಶದಲ್ಲಿ ಪರಿಶಿಷ್ಟ ಸಮುದಾಯಕ್ಕೆ ಸೇರಿದವರು ಮುಖ್ಯಮಂತ್ರಿ ಆಗಲು ಸಭೆ ಸಹಕಾರಿಯಾಗುತ್ತದೆ ಎಂದಿದ್ದಾರೆ.

ಡಾ.ಪರಮೇಶ್ವರ್ ಕೊಠಡಿಯಲ್ಲಿ ನಡೆದ ಸಭೆಗೆ ಕೆಲವು ಪೀಠಾಧೀಶರಲ್ಲದೆ, ಸಚಿವರಾದ ಸತೀಶ್ ಜಾರಕಿಹೊಳಿ, ಕೆ.ಎನ್.ರಾಜಣ್ಣ, (2ನೇ ಪುಟಕ್ಕೆ)

# ಮೈಕ್ರೋ ಫೈನಾನ್ಸ್ ಕಿರುಕುಳ ಪೊಲೀಸರಿಗೆ ಹೆಚ್ಚಿನ ಅಧಿಕಾರ

**ಒಂದೆರಡು ದಿನಗಳಲ್ಲೇ ಸುಗ್ರೀವಾಜ್ಞೆ ಜಾರಿ: ಡಿಕೆಶಿ**


ಬೆಂಗಳೂರು,ಫೆ.3- ಮೈಕ್ರೋ ಫೈನಾನ್ಸ್ ಕಂಪನಿಗಳಿಂದ ಸಾಲಗಾರರಿಗೆ ಆಗುತ್ತಿರುವ ಕಿರುಕುಳ ತಪ್ಪಿಸಲು ಪೊಲೀಸರಿಗೆ ಹೆಚ್ಚಿನ ಅಧಿಕಾರ ನೀಡಿ ಒಂದೆರಡು ದಿನಗಳಲ್ಲೇ ಸುಗ್ರೀವಾಜ್ಞೆ ಜಾರಿಗೊಳಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಸುಗ್ರೀವಾಜ್ಞೆ ಜಾರಿಗೊಳಿಸುವುದಕ್ಕೂ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ, ಹಿರಿಯ ಪೊಲೀಸ್ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳ ಜೊತೆ ಸಭೆ ನಡೆಸಲಿದ್ದಾರೆ.

ಸುಗ್ರೀವಾಜ್ಞೆ ಜಾರಿಗೊಳಿಸಲು ಸಂಪುಟ ಈಗಾಗಲೇ ಅನುಮತಿ ನೀಡಿದೆ, ಆದರೆ, ಪೊಲೀಸ್ ಮತ್ತು ಆರ್ಥಿಕ ಇಲಾಖೆ ನೀಡಿರುವ ಕೆಲವು ಸಲಹೆಗಳನ್ನು ಸೇರ್ಪಡಿಸುವ ಅಧಿಕಾರವನ್ನು ಸಂಪುಟ ಸಭೆ ಮುಖ್ಯಮಂತ್ರಿ ಅವರಿಗೆ ನೀಡಿದೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, (2ನೇ ಪುಟಕ್ಕೆ)

# ಮಾಯಕೊಂಡ ಕ್ಷೇತ್ರಕ್ಕೆ 750 ಮನೆ ಮಂಜೂರು



**ಪಾರದರ್ಶಕ ಮನೆ ಹಂಚಿಕೆಗೆ ಶಾಸಕರ ತಾಕೀತು**

ದಾವಣಗೆರೆ, ಫೆ. 3 - ಮಾಯಕೊಂಡ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ದಾವಣಗೆರೆ ತಾಲ್ಲೂಕಿಗೆ 506, ಚನ್ನಗಿರಿ ತಾಲ್ಲೂಕಿಗೆ 244 ಸೇರಿ ಕ್ಷೇತ್ರಕ್ಕೆ ಒಟ್ಟು 750 ಮನೆಗಳು ಮಂಜೂರಾಗಿವೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ತಿಳಿಸಿದ್ದಾರೆ.

ನಿರ್ಗತಿಕರು, ಬಡವರಿಗೆ ಸೂರು ಕಲ್ಪಿಸಲು ಸರ್ಕಾರ ಮತ್ತು ವಸತಿ ಸಚಿವರ ಮೇಲೆ ಒತ್ತಡ ಹಾಕಿ ಮನೆಗಳನ್ನು ಮಂಜೂರು ಮಾಡಿಸಲಾಗಿದೆ. ಕ್ಷೇತ್ರದ ವ್ಯಾಪ್ತಿಯ ದಾವಣಗೆರೆ ತಾಲ್ಲೂಕಿನ ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯಿತಿಗಳಿಗೆ 2022-23ನೇ ಸಾಲಿನ ಡಾ. ಬಿ.ಆರ್. (4ನೇ ಪುಟಕ್ಕೆ)

# ಮಹಿಳಾ ಕೇಂದ್ರಿತ ಕಾಯ್ದೆಗಳ ದುರ್ಬಳಕೆ ಅರ್ಜಿ ತಳ್ಳಿ ಹಾಕಿದ ಸುಪ್ರೀಂ

ನವದೆಹಲಿ, ಫೆ. 3 - ವರದಕ್ಷಿಣೆ ನಿಷೇಧ ಕಾಯ್ದೆ ಸೇರಿದಂತೆ ಮಹಿಳಾ ಕೇಂದ್ರಿತ ಕಾಯ್ದೆಗಳ ದುರ್ಬಳಕೆ ಆಗುತ್ತಿದೆ ಎಂದು ಈ ಕಾಯ್ದೆಗಳನ್ನು ಪ್ರಶ್ನಿಸುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ಈ ವಿಷಯವನ್ನು ನೀವು ಸಂಸತ್ತಿಗೆ ಹೋಗಿ ಪ್ರಸ್ತಾಪಿಸಬಹುದು ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಕೆ. ವಿನೋದ್ ಚಂದ್ರನ್ ಅವರನ್ನು ಒಳಗೊಂಡ ಪೀಠ ಅರ್ಜಿದಾರರ ಪರವಾಗಿ ಹಾಜರಿದ್ದ ವಕೀಲರಿಗೆ ತಿಳಿಸಿದೆ.

1961ರ ವರದಕ್ಷಿಣೆ ನಿಷೇಧ ಕಾಯ್ದೆಯ ಕೆಲ ಅಂಶಗಳನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ವರದಕ್ಷಿಣೆ ನಿಷೇಧ ಕಾಯ್ದೆ, ಗೃಹ ಹಿಂಸಾಚಾರದಿಂದ ಮಹಿಳೆಯರ (4ನೇ ಪುಟಕ್ಕೆ)

# ಸಾಲಗಾರರಿಗೆ ಕಿರುಕುಳ ನೀಡಿದರೆ ಗಡಿಪಾರು



**ಫೈನಾನ್ಸರ್‌ಗಳಿಗೆ ಶಾಸಕ ಪ್ರಕಾಶ ಕೋಳಿವಾಡ ಎಚ್ಚರಿಕೆ**

ರಾಣೇಬೆನ್ನೂರು, ಫೆ.3 - ಸಾಲಗಾರರಿಗೆ ಅಥವಾ ಅವರ ಕುಟುಂಬದ ಸದಸ್ಯರ ಮೇಲೆ ಒತ್ತಡ ಹೇರುವುದು, ಅಸಹ್ಯಪಡಿಸುವುದು ಅಥವಾ ಹಿಂಸಿಸು ವುದು, ಇಂತಹ ಯಾವುದೇ ರೀತಿಯ ಘಟನೆಗಳು ಮೈಕ್ರೋ ಫೈನಾನ್ಸ್ ನವರಿಂದ ಎರಡನೇ ಬಾರಿ ನಡೆದರೆ ಅವರನ್ನು ಗಡಿಪಾರು ಮಾಡಲಾಗುವುದು ಎಂದು ಶಾಸಕ ಪ್ರಕಾಶ ಕೋಳಿವಾಡ ಎಚ್ಚರಿಕೆ ನೀಡಿದರು. (4ನೇ ಪುಟಕ್ಕೆ)


# ವಸಂತ ಪಂಚಮಿ ಕುಂಭ ಸ್ನಾನ ಸುಸೂತ್ರ

ಮಹಾಕುಂಭ ನಗರ, ಫೆ. 3 - ಮಹಾ ಕುಂಭಮೇಳದಲ್ಲಿ ಮೂರನೇ ಅಮೃತ ಸ್ನಾನದ ದಿನವಾದ ವಸಂತ ಪಂಚಮಿಯಂದು ಎರಡು ಕೋಟಿ ಜನರು ಪವಿತ್ರ ಸ್ನಾನ ಮಾಡಿದ್ದಾರೆ.

ಸಂಜೆ 4 ಗಂಟೆವರೆಗೆ ಸುಮಾರು 2 ಕೋಟಿ ಜನರು ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ ಎಂದು ಉತ್ತರ ಪ್ರದೇಶ ಸರ್ಕಾರ ತಿಳಿಸಿದೆ.

ಕಳೆದ ಮೌನಿ ಅಮಾವಾಸ್ಯೆ ದಿನದ ಪವಿತ್ರ ಸ್ನಾನದ ವೇಳೆ ಕಾಲ್ತುಳಿತ ಸಂಭವಿಸಿ 30 ಜನರು ಸಾವನ್ನಪ್ಪಿದ್ದರು. ಈ ಹಿನ್ನೆಲೆಯಲ್ಲಿ ಸೋಮವಾರದ ಅಮೃತ (3ನೇ ಪುಟಕ್ಕೆ)

# ರಾಷ್ಟ್ರೀಯ ಹೆದ್ದಾರಿ ಟೋಲ್‌ಗೆ ಏಕರೂಪ ನೀತಿ



ನವದೆಹಲಿ, ಫೆ. 3 - ಗ್ರಾಹಕರಿಗೆ ಅನುಕೂಲ ಮಾಡಿಕೊಡಲು ರಾಷ್ಟ್ರೀಯ ಹೆದ್ದಾರಿ ಟೋಲ್ ಗಳಲ್ಲಿ ಏಕರೂಪದ ರಾಷ್ಟ್ರೀಯ ನೀತಿ ಜಾರಿಗೆ ತರಲು ಕಾರ್ಯನಿರ್ವಹಿಸಲಾಗುತ್ತಿದೆ ಎಂದು ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಇದು ಗ್ರಾಹಕರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ನೀಡಲಿದೆ ಎಂದು ಖಾಸಗಿ ಸುದ್ದಿ ಸಂಸ್ಥೆಯೊಂದರ ಜೊತೆ ಮಾತನಾಡುತ್ತಿದ್ದ ಗಡ್ಕರಿ ತಿಳಿಸಿದ್ದಾರೆ.

ಹೆದ್ದಾರಿಯಲ್ಲಿ ಹೆಚ್ಚಿನ ಟೋಲ್ ದರ ನಿಗದಿಪಡಿಸಿರುವುದು ಹಾಗೂ ಹೆದ್ದಾರಿ ಬಳಕೆ ಅನುಭವ ನಿರೀಕ್ಷೆಯ ಮಟ್ಟದಲ್ಲಿ ಇರದೇ ಇರುವ ಕುರಿತು ಕೇಳಿದ ಪ್ರಶ್ನೆಗೆ ಗಡ್ಕರಿ ಈ ಉತ್ತರ ನೀಡಿದ್ದಾರೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಗ್ಲೋಬಲ್ ನ್ಯಾವಿಗೇಶನ್ ಸೆಟಲೈಟ್ ಸಿಸ್ಟಮ್ (ಜಿ.ಎನ್.ಎಸ್.ಎಸ್.) ಜಾರಿಗೆ ತರಲು ಹೆದ್ದಾರಿ ಸಚಿವಾ ಲಯ ಮೊದಲು ನಿರ್ಧರಿಸಿತ್ತು. ಇದರಿಂದಾಗಿ ಹೆದ್ದಾರಿಗಳಲ್ಲಿ ಸಂಚಾರ ಸುಗಮವಾಗುವ ನಿರೀಕ್ಷೆ ಇದೆ.

ಹೆದ್ದಾರಿಗಳ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಗ್ರಾಹಕರು ವ್ಯಕ್ತಪಡಿಸುವ ದೂರುಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತಿದೆ. ಸಂಬಂಧಿಸಿದ ಗುತ್ತಿಗೆದಾರರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಸಚಿವ ಗಡ್ಕರಿ ಹೇಳಿದ್ದಾರೆ.


ಪ್ರಸಕ್ತ ಹೆದ್ದಾರಿಗಳಲ್ಲಿ ಸಂಚರಿಸುವ ವಾಹನಗಳ ಪೈಕಿ ಖಾಸಗಿ ಕಾರುಗಳ ಪ್ರಮಾಣ ಶೇ. 60ರಷ್ಟಿದೆ. ಇವುಗಳಿಂದ ಶೇ. 20 ರಿಂದ 26ರಷ್ಟು ಆದಾಯ ಬರುತ್ತಿದೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ದರ ಹೆಚ್ಚಿಸಲಾಗುತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ ಸಾಕಷ್ಟು ಮಾರ್ಗಗಳು ಟೋಲ್ ವ್ಯಾಪ್ತಿಗೆ ಬಂದಿವೆ. ಇದು ಸಾರ್ವಜನಿಕರ ಆಕ್ಷೇಪಕ್ಕೆ ಕಾರಣವಾಗುತ್ತಿದೆ.

2023 - 24ರಲ್ಲಿ ಭಾರತದಲ್ಲಿ 64,809.86 ಕೋಟಿ ರೂ. ಟೋಲ್ ಸಂಗ್ರಹಿಸಲಾಗಿತ್ತು. ಹಿಂದಿನ ವರ್ಷಕ್ಕೆ ಹೋಲಿಸಿದರೆ ಇದು ಶೇ.35 ರಷ್ಟು ಹೆಚ್ಚಾಗಿದೆ. 2019 - 20 ರಲ್ಲಿ 27,503 ಕೋಟಿ ರೂ. ಟೋಲ್ ಸಂಗ್ರಹಿಸಲಾಗಿತ್ತು. 2020 - 21ರ ಹಣಕಾಸು ವರ್ಷದಲ್ಲಿ ಸರಾಸರಿ ಪ್ರತಿ ದಿನಕ್ಕೆ 37 ಕಿಲೋಮೀಟರ್ (4ನೇ ಪುಟಕ್ಕೆ)

# ಅತ್ಯಾಚಾರ: ಶಿಕ್ಷೆಗೆ ಆಗ್ರಹಿಸಿ ಚನ್ನಗಿರಿ ಬಂದ್ ಯಶಸ್ವಿ

ದಾವಣಗೆರೆ, ಫೆ.3- ಬಾಲಕಿಯರು ಸೇರಿ ಹಲವು ಮಹಿಳೆಯರ ಮೇಲೆ ಅತ್ಯಾಚಾರ ಎಸಗಿದ್ದಲ್ಲದೇ ಆ ದೃಶ್ಯಗಳನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿ, ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟ ಪ್ರಕರಣದ ಆರೋಪಿ ಅಮ್ಜದ್‌ನ ಕೃತ್ಯ ಖಂಡಿಸಿ ಸೋಮವಾರ ಕರೆ ನೀಡಿದ್ದ ಚನ್ನಗಿರಿ ಬಂದ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಸಂಘ ಪರಿವಾರ, ಕನ್ನಡಪರ, ದಲಿತ ಹಾಗೂ ರೈತ ಸಂಘಟನೆಗಳು ಒಗ್ಗೂಡಿ ಕರೆ ನೀಡಿದ್ದ ಬಂದ್‌ಗೆ ಪಟ್ಟಣದ ಜನರು ಸ್ಪಂದಿಸಿದರು. ಸ್ವಯಂ ಪ್ರೇರಿತವಾಗಿ (4ನೇ ಪುಟಕ್ಕೆ)




॥ ಶ್ರೀ ಬಸವೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ತಾಲ್ಲೂಕು ಅಗಸನಕಟ್ಟೆ ಗ್ರಾಮದ ವಾಸಿ
ಶಿವಪ್ಪರ ದಿ|| ಸಿದ್ದಲಿಂಗಪ್ಪನವರ ಮಕ್ಕಳಾದ
ಶ್ರೀ ಎಸ್. ರೇವಣಸಿದ್ದಪ್ಪ ಮತ್ತು ಶ್ರೀ ಎಸ್. ಶಿವಮೂರ್ತಿ, ಮಾಜಿ ಪ್ರಧಾನರು ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 26.01.2025ನೇ ಭಾನುವಾರ ರಾತ್ರಿ 8.45ಕ್ಕೆ ನಮ್ಮ ಪೂಜ್ಯ ತಾಯಿಯವರಾದ

**ಶತಾಯುಷಿ ಶಿವಪ್ಪರ ಶ್ರೀಮತಿ ಬಸಮ್ಮನವರು**

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **'ಕೈಲಾಸ ಶಿವಗಣಾರಾಧನೆ'ಯನ್ನು**

ದಿನಾಂಕ : 05.02.2025ನೇ ಬುಧವಾರ ಬೆಳಿಗ್ಗೆ 10.30 ಗಂಟೆಗೆ ದಾವಣಗೆರೆ ತಾಲ್ಲೂಕು ಅಗಸನಕಟ್ಟೆ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ದಾಕ್ಷಾಯಣಮ್ಮ, ಶ್ರೀ ಎಸ್. ರೇವಣಸಿದ್ದಪ್ಪ ಮತ್ತು ಮಕ್ಕಳು, ಅಗಸನಕಟ್ಟೆ
ಶ್ರೀಮತಿ ಪಾರ್ವತಮ್ಮ, ಶ್ರೀ ಎಸ್. ಶಿವಮೂರ್ತಿ, ಮಾಜಿ ಪ್ರಧಾನರು ಮತ್ತು ಮಕ್ಕಳು, ಅಗಸನಕಟ್ಟೆ
ಶ್ರೀಮತಿ ಗಂಗಮ್ಮ, ದಿ|| ಶ್ರೀ ಎಸ್. ಬಸಪ್ಪ ಮತ್ತು ಮಕ್ಕಳು, ಅಗಸನಕಟ್ಟೆ.
ಶ್ರೀಮತಿ ಗುರುಸಿದ್ದಮ್ಮ, ದಿ|| ಶ್ರೀ ಕೆ.ಬಿ. ಸಿದ್ದಬಸಪ್ಪ ಮತ್ತು ಮಕ್ಕಳು, ಬೆಳವನೂರು.
ಶ್ರೀಮತಿ ಅನುಸೂಯಮ್ಮ, ದಿ|| ಶ್ರೀ ಚಂದ್ರಪ್ಪ ಮತ್ತು ಮಕ್ಕಳು, ಸೀಗೇಹಳ್ಳಿ.
ಶ್ರೀಮತಿ ಚನ್ನಬಸಮ್ಮ, ಕೆ.ಎಂ. ವಿಶ್ವನಾಥ್ ಮತ್ತು ಮಕ್ಕಳು, ಬಿ. ಕಲಪನಹಳ್ಳಿ.
ದಿ|| ಶ್ರೀಮತಿ ಶಾರದಮ್ಮ, ದಿ|| ಸಿದ್ದಬಸಪ್ಪ ಮತ್ತು ಮಕ್ಕಳು, ಆನಗೋಡು.
ಶ್ರೀಮತಿ ಪಾರ್ವತಮ್ಮ, ಶ್ರೀ ಪರಮೇಶ್ವರಪ್ಪ ಮತ್ತು ಮಕ್ಕಳು, ಈಚಘಟ್ಟ.
ಶ್ರೀಮತಿ ನಾಗರತ್ನಮ್ಮ, ಶ್ರೀ ಬಿಷ್ಟನಗೌಡ ಮತ್ತು ಮಕ್ಕಳು, ಬಳಿಗಾನೂರು.
ಶಿವಪ್ಪರ ವಂಶಸ್ಥರು ಮತ್ತು ಅಗಸನಕಟ್ಟೆ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.

ಶ್ರೀ ನಂದಿ ಆಗ್ರೋ ಸೀಡ್ಸ್ ಕಾರ್ಪೊರೇಷನ್, ಎ.ಪಿ.ಎಂ.ಸಿ. ಯಾರ್ಡ್, ಫೋ. : 94481 14352
ಶ್ರೀ ವೆಂಕಟೇಶ್ವರ ಆಗ್ರೋ ಏಜೆನ್ಸೀಸ್, ಎ ಬ್ಲಾಕ್, ದಾವಣಗೆರೆ. ಫೋ. : 91086 20568
ಶ್ರೀ ಗುರುಬಸವ ಆಗ್ರೋ ಏಜೆನ್ಸೀಸ್, ನರಸರಾಜ ರಸ್ತೆ, ದಾವಣಗೆರೆ. ಫೋ. : 85536 21050

**ಪುರಾಣ ಮತ್ತು ಭಜನೆ** ದಿನಾಂಕ 04.02.2025ರ ಮಂಗಳವಾರ ರಾತ್ರಿ 8.30ಕ್ಕೆ ಶ್ರೀ ತರಳಬಾಳು ಭಜನಾ ಮಂಡಳಿ ಇವರಿಂದ ಪುರಾಣ ಮತ್ತು ಭಜನೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

ವಿ.ಸೂ. : ಆತ್ಮೀಯರೇ, ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# ಒಳ್ಳೆಯ ಆಲೋಚನೆಯಿಂದ ಉತ್ತಮ ಜೀವನ ರೂಪಿಸಿಕೊಳ್ಳಿ



## ಪ್ರಾಣ ಪ್ರತಿಷ್ಠಾಪನೆ, ಕಳಸಾರೋಹಣ, ಧರ್ಮ ಸಭೆಯಲ್ಲಿ ಹಿರೇಕಲ್ಮಠದ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಶ್ರೀ

ನ್ಯಾಮತಿ, ಜ.3- ಪರಮಾತ್ಮ ಸರ್ವವ್ಯಾಪಿಯಾಗಿದ್ದಾನೆ. ಹಾಗಾಗಿ ಮನುಷ್ಯ ಸದಾ ಒಳಿತನ್ನೇ ಯೋಚಿಸುತ್ತಾ ಒಳ್ಳೆಯ ಜೀವನ ರೂಪಿಸಿಕೊಳ್ಳಬೇಕು ಎಂದು ಹಿರೇಕಲ್ಮಠದ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ತಾಲ್ಲೂಕಿನ ಕುರುವ ಗ್ರಾಮದ ಆಂಜನೇಯ ಸ್ವಾಮಿ ಹಾಗೂ ಬಸವೇಶ್ವರ ಸ್ವಾಮಿಗಳ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಧರ್ಮ ಸಭೆಯಲ್ಲಿ ಸಾನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ದೇವರ ಸಮಕ್ಷಮದಲ್ಲಿ ಬದುಕು ಕಟ್ಟಿಕೊಳ್ಳುವ ಸದುದ್ದೇಶದಿಂದ ದೇವಸ್ಥಾನಗಳು ನಿರ್ಮಾಣ ಆಗುತ್ತಿವೆ. ಪ್ರಸ್ತುತ ಮಹಿಳೆಯರ ಸಬಲೀಕರಣಕ್ಕಾಗಿ ಸರ್ಕಾರ ಹೆಚ್ಚಿನ ಸವಲತ್ತನ್ನು ನಾರಿಯರಿಗೆ ನೀಡುತ್ತಿರುವುದು ಶ್ಲಾಘನೀಯ ಎಂದರು.

ಪಾಲಕರು, ಹೆಣ್ಣು ಮಕ್ಕಳ ಬಗ್ಗೆ ಅಷ್ಟೇ ಹೆಚ್ಚಿನ ಕಾಳಜಿ ವಹಿಸದೇ, ಗಂಡು ಮಕ್ಕಳ ಬಗ್ಗೆಯೂ ಹೆಚ್ಚಿನ ಗಮನ ಹರಿಸಬೇಕು. ಅವರ ಶೈಕ್ಷಣಿಕ ಪ್ರಗತಿಗೆ ಪ್ರೋತ್ಸಾಹ ಮತ್ತು ಮಾರ್ಗದರ್ಶನ ನೀಡಬೇಕು ಎಂದು ಕಿವಿ ಮಾತು ಹೇಳಿದರು.

ಗೋವಿನಕೋವಿ ಹಿರೇಮಠದ ಶಿವಯೋಗಿ ಮಹಾಲಿಂಗ ಸ್ವಾಮೀಜಿ ಮಾತನಾಡಿ, ಪಟ್ಟಾಧಿಕಾರವಾಗಿ ಒಂದು ವರ್ಷವಾಗಿದ್ದು, ಪಟ್ಟಾಧಿಕಾರದ ನಂತರ ಕಳಸಾರೋಹಣ ನೋಡಬೇಕೆಂಬ ಪ್ರತೀತಿಯಿದೆ. ಮೊದಲು ರಾಂಪುರ ಬೃಹನ್ಮಠದ ರಥೋತ್ಸವದ ಕಳಸ ದರ್ಶನದ ಭಾಗ್ಯ ಒದಗಿತ್ತು. ಇದೀಗ ಈ ಗ್ರಾಮದ ಕಳಸಾರೋಹಣ ಕಣ್ತುಂಬಿ ಕೊಳ್ಳುವಂತಾಯಿತು ಎಂದು ಧನ್ಯತಾಭಾವ ವ್ಯಕ್ತಪಡಿಸಿದರು.

ಶಾಸಕ ಡಿ.ಜಿ. ಶಾಂತನಗೌಡ ಮಾತನಾಡಿ, ತುಂಗಭದ್ರಾ ನದಿಯ ಕೃಪೆಯಿಂದಾಗಿ ಎಂತಹ ಬರಗಾಲ ಬಂದರೂ ರಾಜ್ಯದ ಎಲ್ಲಾ ತಾಲ್ಲೂಕುಗಳಿಗಿಂತ ಹೊನ್ನಾಳಿ-ನ್ಯಾಮತಿ ತಾಲ್ಲೂಕಿನಲ್ಲಿ ನೆಮ್ಮದಿ ಜೀವನ ನಡೆಸುವ ನಾವುಗಳೇ ಪುಣ್ಯವಂತರು ಎಂದರು.

ಈ ವರೆಗೂ 150 ಕೆರೆಗಳಿಗೆ ನೀರು ತುಂಬಿಸುವ ವ್ಯವಸ್ಥೆಯಾಗಿದ್ದಲ್ಲದೇ, ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಬಹುತೇಕ ಹಳ್ಳಿಗಳಿಗೆ ಕುಡಿಯುವ ನೀರನ್ನು ಪೂರೈಸಲಾಗಿದೆ ಎಂದು ತಿಳಿಸಿದರು.

ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಮಾತನಾಡಿ, ಪ್ರತಿಯೊಬ್ಬರ ಬದುಕಿನಲ್ಲೂ ಧರ್ಮ ಬಹಳ ಮುಖ್ಯ. ಧರ್ಮದ ತಳಹದಿಯ ಮೇಲೆ ಜೀವನ ರೂಪಿಸಿಕೊಂಡಾಗ ಏನನ್ನಾದರೂ ಸಾಧಿಸಲು ಸಾಧ್ಯವಿದೆ ಎಂದು ತಿಳಿಸಿದರು.

ಕುರುವ ಪರಮೇಶ್ವರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ,ದೇವಸ್ಥಾನದ ನಿರ್ಮಾಣ ಕಾರ್ಯಕ್ಕೆ ಶಾಸಕ ಡಿ.ಜಿ. ಶಾಂತನಗೌಡ ಮತ್ತು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಅವರು ಸರ್ಕಾರದಿಂದ ಅನುದಾನ ಕೊಡಿಸಿದ್ದನ್ನು ಸ್ಮರಿಸಿದರು.

ಈ ವೇಳೆ ರಾಂಪುರ ಬೃಹನ್ಮಠದ ಶಿವಕುಮಾರ ಶಿವಾಚಾರ್ಯ ಶ್ರೀಗಳು, ದಿಡಗೂರಿನ ಅಣ್ಣಪ್ಪಸ್ವಾಮಿ, ಆಂಜನೇಯ ಸ್ವಾಮಿ ದೇವಸ್ಥಾನದ ಕಾರ್ಯದರ್ಶಿ ಹೆಚ್.ವಿ. ಸತೀಶ್, ಮಹೇಶ್ವರಪ್ಪ, ಪಾಲಾಕ್ಷಪ್ಪ, ಸುರೇಶಪ್ಪ, ಲಿಂಗಮೂರ್ತಪ್ಪ, ಗ್ರಾ.ಪಂ. ಸದಸ್ಯ ದಾನೇಶ್ ಮತ್ತು ಇತರರು ಉಪಸ್ಥಿತರಿದ್ದರು.

# ಸಿಡಿದೆದ್ದ ಪರಿಶಿಷ್ಟ ಸಚಿವರು

(1ನೇ ಪುಟದಿಂದ) ಡಾ.ಎಚ್.ಸಿ. ಮಹದೇವಪ್ಪ ಭಾಗವಹಿಸಿದ್ದರು.

ಪರಿಶಿಷ್ಟ ಜಾತಿ, ವರ್ಗಕ್ಕೆ ಸೇರಿದ ಸಚಿವರು, ಶಾಸಕರು, ಮುಖಂಡರ ಸಭೆಯನ್ನು ಗೃಹ ಸಚಿವ ಡಾ.ಪರಮೇಶ್ವರ್ ಈ ಹಿಂದೆ ಕರೆಯಲು ಮುಂದಾಗಿದ್ದರಾದರೂ ಹೈಕಮಾಂಡ್ ಅವಕಾಶ ಕೊಟ್ಟಿರಲಿಲ್ಲ.

ಅಷ್ಟೇ ಅಲ್ಲ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಭೆಗಳ ಬಗ್ಗೆ ಗರಂ ಆಗಿ, ಸಚಿವರಿಗೆ ಬಾಯಿ ಮುಚ್ಚಿಕೊಂಡು ನಿಮಗೆ ನೀಡಿರುವ ಕೆಲಸ ಮಾಡಿ ಎಂದು ಗುಡುಗಿದ್ದರು.

ಮತ್ತೆ ನಾವು ಇಂತಹ ಸಭೆ ಮಾಡಲು ಹೊರಟರೆ ಶಿವಕುಮಾರ್, ತೆರೆಮರೆಯಲ್ಲಿ ಅಡ್ಡಿ ಮಾಡುತ್ತಾರೆ.

ನಾವು ಮುಂಚೂಣಿಯಲ್ಲಿ ನಿಂತು ಮಾಡುವ ಬದಲು ನಮ್ಮ ಸಮಾಜ ಗಳಿಗೆ ಸೇರಿದ ಮಠಾಧಿಪತಿಗಳಿಂದ ಸಭೆ ನಡೆಸಿದರೆ, ಇದಕ್ಕೆ ತಕರಾರು ಎತ್ತುವುದಿಲ್ಲ ಎಂಬ ಕಾರಣಕ್ಕಾಗಿ ಈ ಸಮಾವೇಶ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

# ಗ್ರಾಮ ನೈರ್ಮಲ್ಯ ಕಾಪಾಡಲು ಒತ್ತು ನೀಡಬೇಕು



## ಗ್ರಾ.ಪಂ ಅಧಿಕಾರಿಗಳಿಗೆ ಶಾಸಕ ಬಸವಂತಪ್ಪ ಸೂಚನೆ

ದಾವಣಗೆರೆ, ಫೆ. 3- ಆರೋಗ್ಯ ಮತ್ತು ಸ್ವಚ್ಛತೆ ಒಂದೇ ನಾಣ್ಯದ ಎರಡು ಮುಖಗಳು. ಸ್ವಚ್ಛತೆ ಹೊರತಾಗಿ ಆರೋಗ್ಯ ಇರಲು ಸಾಧ್ಯವಿಲ್ಲ. ಆದ್ದರಿಂದ ಗ್ರಾಮ ನೈರ್ಮಲ್ಯಕ್ಕೆ ಹೆಚ್ಚು ಆದ್ಯತೆ ನೀಡಬೇಕೆಂದು ಶಾಸಕ ಕೆ.ಎಸ್. ಬಸವಂತಪ್ಪ ಗ್ರಾಮಸ್ಥರಿಗೆ ಕಿವಿಮಾತು ಹೇಳಿದರು.

ಮಾಯಕೊಂಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕುರ್ಕಿ ಗ್ರಾಮ ಪಂಚಾಯಿತಿಯ ಹಿರೇತೊಗಲೇರಿ ಗ್ರಾಮದಲ್ಲಿ ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ 2023-24ನೇ ಸಾಲಿನ ಎಸ್‌ಬಿಎಂಜಿ ಯೋಜನೆಯಡಿ ಮಂಜೂರಾಗಿರುವ 2.48 ಕೋಟಿ ರೂ. ವೆಚ್ಚದ ತಾಲ್ಲೂಕು ಮಟ್ಟದ ಕಸ ವಿಲೇವಾರಿ ಘಟಕ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಗ್ರಾಮೀಣ ಭಾಗದಲ್ಲಿ ಜನರಿಗೆ ನೈರ್ಮಲ್ಯ ಮತ್ತು ಆರೋಗ್ಯ ಸದೃಢವಾಗಿರಬೇಕಾದರೆ ಪ್ರತಿನಿತ್ಯ ಗ್ರಾಮದಲ್ಲಿ ಸ್ವಚ್ಛತೆ ಕಾಪಾಡಿದಾಗ ಮಾತ್ರ ಗ್ರಾಮದ ಜನರು ಆರೋಗ್ಯಪೂರ್ಣ ಜೀವನ ನಡೆಸಲು ಸಾಧ್ಯ ಎಂದರು.

ಹಿರೇತೊಗಲೇರಿ ಗ್ರಾಮದ ಎರಡು ಎಕರೆ ಪ್ರದೇಶದಲ್ಲಿ ಕಸ ವಿಲೇವಾರಿ ಘಟಕ ನಿರ್ಮಿಸುತ್ತಿದ್ದು, ತಾಲ್ಲೂಕಿನ ಒಣ ಕಸ ಸಂಗ್ರಹಿಸಿ ಇಲ್ಲಿನ ಒಣ ಕಸ ನಿರ್ವಹಣೆ ಘಟಕದ ಮೂಲಕ ಪ್ಲಾಸ್ಟಿಕ್, ಕಬ್ಬಿಣ, ಗಾಜು ಇತ್ಯಾದಿಗಳನ್ನು ವಿಂಗಡಿಸಿ ಪುನರ್ ಉತ್ಪಾದನೆ ಮಾಡುವ ಉದ್ದಿಮೆದಾರರಿಗೆ ಕಳುಹಿಸಲಾಗುತ್ತದೆ. ಇದನ್ನು ಸದುಪಯೋಗ ಮಾಡಿಕೊಳ್ಳಬೇಕೆಂದರು.

ಕ್ಷೇತ್ರದ ಬಹುತೇಕ ಗ್ರಾಪಂಗಳಲ್ಲಿ ಘಟಕಗಳು ನೆನಗುದಿಗೆ ಬಿದ್ದಿವೆ. ಕೆಲವೊಂದು ಗ್ರಾಪಂಗಳಲ್ಲಿ ಕಸ ವಿಲೇವಾರಿ ಘಟಕಗಳು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ. ಕಸ ಸಂಗ್ರಹಿಸುವ ಆಟೋಗಳು ಮೂಲೆ ಸೇರಿ ತುಕ್ಕು ಹಿಡಿಯುತ್ತಿವೆ. ಕುರ್ಕಿ ಗ್ರಾಮದ ಕಸ ವಿಲೇವಾರಿ ಘಟಕವನ್ನು ಇಲ್ಲಿನ ಗ್ರಾಪಂ ಪಿಡಿಒ, ಅಧ್ಯಕ್ಷರು, ಸದಸ್ಯರು ಮತ್ತು ಅಧಿಕಾರಿಗಳ ವರ್ಗ ಸುಸ್ಥಿತಿಯಲ್ಲಿ ಇಟ್ಟುಕೊಂಡು ಉತ್ತಮವಾಗಿ ನಿರ್ವಹಿಸುತ್ತಿದ್ದಾರೆ. ಕುರ್ಕಿ ಗ್ರಾಪಂ ಇತರೆ ಗ್ರಾಪಂಗಳಿಗೆ ಮಾದರಿಯಾಗಿದ್ದು, ಇದನ್ನು ಎಲ್ಲಾ ಗ್ರಾಪಂ ಪಿಡಿಒಗಳು, ಅಧ್ಯಕ್ಷರು, ಸದಸ್ಯರು, ಅಳವಡಿಸಿಕೊಳ್ಳಬೇಕು. ಸಂಬಂಧಪಟ್ಟ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಆಗಾಗ ಭೇಟಿ ನೀಡಿ ಘಟಕಗಳುಸ ಸಮರ್ಪಕ ನಿರ್ವಹಣೆಗೆ ಕ್ರಮ ತೆಗೆದುಕೊಳ್ಳಬೇಕೆಂದರು.

ಗ್ರಾಮ ಸ್ವಚ್ಛತೆಗಾಗಿ ಸರ್ಕಾರ ಪ್ರತ್ಯೇಕ ಅನುದಾನ ನೀಡುತ್ತಿದ್ದು, ಇದನ್ನು ಗ್ರಾಪಂಗಳು ಸಮರ್ಪಕವಾಗಿ ಬಳಸಿಕೊಂಡು ಗ್ರಾಮಗಳ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಸ್ವಚ್ಛತೆ ಮಾಡಲು ನಗರ ಪ್ರದೇಶದಲ್ಲಿ ಪೌರಕಾರ್ಮಿಕರನ್ನು ನೇಮಿಸುವಂತೆ ಗ್ರಾಮೀಣ ಪ್ರದೇಶದಲ್ಲೂ ಪ್ರತಿನಿತ್ಯ ಸ್ವಚ್ಛತೆ ಮಾಡಲು ಪೌರಕಾರ್ಮಿಕರನ್ನು ನೇಮಿಸಬೇಕೆಂದು ಈ ಹಿಂದೆ ನಡೆದ ಅಧಿವೇಶನದಲ್ಲಿ ಚರ್ಚೆ ಮಾಡಿ ಸರ್ಕಾರದ ಮೇಲೆ ಒತ್ತಡ ಹಾಕಿದ್ದೇನೆ. ಪ್ರತಿದಿನ ಸ್ವಚ್ಛತೆ ಮಾಡಿ ನಗರ ಸೌಂದರ್ಯ ಕಾಪಾಡುವಂತೆ ಗ್ರಾಮೀಣ ಪ್ರದೇಶದಲ್ಲೂ ಕೂಡ ಗ್ರಾಮದ ಸೌಂದರ್ಯ ಕಾಪಾಡುವ ಕೆಲಸ ಆಗಬೇಕಾಗಿದೆ ಎಂದರು.

ಈ ಸಂದರ್ಭದಲ್ಲಿ ಪಂಚಾಯತ್ ರಾಜ್ ಇಲಾಖೆ ಇಇ ಟಾಟಾ ಶಿವನ್, ಎಇಇ ಶಿವಮೂರ್ತಿ, ಗ್ರಾಪಂ ಅಧ್ಯಕ್ಷರಾದ ನಾಗಮ್ಮ, ಗ್ರಾಪಂ ಪಿಡಿಒ ಸುರೇಖಾ, ಗ್ರಾಪಂ ಸದಸ್ಯರು, ಮುಖಂಡರಾದ ನಿಂಗಪ್ಪ, ಬಸವರಾಜಪ್ಪ, ರಾಜಪ್ಪ, ವಾಸು ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

# ಹರಿಹರ ಪಿಎಲ್‌ಡಿ ಬ್ಯಾಂಕಿನ 4 ಸ್ಥಾನಗಳ ಪೈಕಿ 3 ಸ್ಥಾನಗಳ ಫಲಿತಾಂಶ ಪ್ರಕಟ

ಹರಿಹರ, ಫೆ. 3- ಹರಿಹರ ಪಿಎಲ್‌ಡಿ ಬ್ಯಾಂಕಿನ ಆಡಳಿತ ಮಂಡಳಿಯ 4 ನಿರ್ದೇಶಕ ಸ್ಥಾನಗಳಿಗೆ ನಿನ್ನೆ ಚುನಾವಣೆ ನಡೆಯಿತು. 10 ಸ್ಥಾನಗಳು ಅವಿರೋಧ ಆಯ್ಕೆಯಾಗಿದ್ದವು.

ಹರಿಹರ ಸಾಲಗಾರರ ಕ್ಷೇತ್ರದಿಂದ ಎಂ. ಪ್ರಭುದೇವ್ 16 ಮತಗಳನ್ನು ಪಡೆದು ಆಯ್ಕೆಯಾದರು. ಪ್ರತಿಸ್ಪರ್ಧಿ ಗೋಪಾಲ್ ಪವಾರ್ 6 ಮತಗಳನ್ನು ಪಡೆದರು. ನಿಟ್ಟೂರು ಸಾಲಗಾರರ ಕ್ಷೇತ್ರದಿಂದ ಗುಳದಹಳ್ಳಿಯ ನಾಗರಾಜ್ ಅವರು 22 ಮತಗಳನ್ನು ಪಡೆದು ಆಯ್ಕೆಯಾದರು. ಪ್ರತಿಸ್ಪರ್ಧಿ ನಿಟ್ಟೂರಿನ ಉಮಾಪತಿ ಅವರು 10 ಮತಗಳನ್ನು ಪಡೆದರು.

ಮಲೇಬೆನ್ನೂರು ಸಾಲಗಾರರಲ್ಲದ ಕ್ಷೇತ್ರದಿಂದ ಕೊಕ್ಕನೂರಿನ ನಂದಿಗೌಡ 26 ಮತಗಳನ್ನು ಪಡೆದು ಆಯ್ಕೆಯಾದರು. ಪ್ರತಿಸ್ಪರ್ಧಿ ಓಂಕಾರಪ್ಪ ಅವರು 16 ಮತಗಳನ್ನು ಪಡೆದರು. ತಾಂತ್ರಿಕ ಕಾರಣದಿಂದ ಬಿಳಸನೂರು ಕ್ಷೇತ್ರದ ಮತ ಎಣಿಕೆ ನಡೆದಿಲ್ಲ ಎನ್ನಲಾಗಿದೆ. ಸಹಕಾರ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಸುನೀತಾ ಚುನಾವಣಾಧಿಕಾರಿಯಾಗಿದ್ದರು.

# ಹರಪನಹಳ್ಳಿ : ಸಹಕಾರಿ ಕೃಷಿ - ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿ ಬಿ. ರಾಜಕುಮಾರ್ ಆಯ್ಕೆ



ಹರಪನಹಳ್ಳಿ, ಫೆ.3- ತಾಲ್ಲೂಕು ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ (ಪಿಕಾರ್ಡ್) ಅಧ್ಯಕ್ಷರಾಗಿ ಉಚ್ಚಂಗಿದುರ್ಗ ಕ್ಷೇತ್ರದ ಬಿ. ರಾಜಕುಮಾರ್ ಹಾಗೂ ಉಪಾಧ್ಯಕ್ಷರಾಗಿ ಹರಪನಹಳ್ಳಿಯ ಗೊಂಗಡಿ ನಾಗರಾಜ್ ಅವರು ಸೋಮವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಒಬ್ಬೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿಯಾಗಿದ್ದ ತಹಶೀಲ್ದಾರ್ ಬಿ.ವಿ. ಗಿರೀಶಬಾಬು ಅವಿರೋಧ ಆಯ್ಕೆ ಘೋಷಿಸಿದರು.

ಮತ್ತಿಹಳ್ಳಿ ಕ್ಷೇತ್ರದ ಮಂಜುನಾಥ ಕಮ್ಮಾರ ಮಾತ್ರ ಗೈರು ಆಗಿದ್ದು, ಉಳಿದ 14 ಜನ ಸದಸ್ಯರು ಚುನಾವಣಾ ಪ್ರಕ್ರಿಯೆಯಲ್ಲಿ ಹಾಜರಿದ್ದರು.

ಸಹಾಯಕ ಚುನಾವಣಾಧಿಕಾರಿ ಗಿರಜ್ಜಿ ಮಂಜುನಾಥ, ಬ್ಯಾಂಕ್ ಕಾರ್ಯದರ್ಶಿ ಎಂ. ಶಾಹೀದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಕೆ. ಕುಬೇರಗೌಡ, ವಕೀಲರ ಸಂಘದ ಅಧ್ಯಕ್ಷ ಟಿ. ವೆಂಕಟೇಶ್, ಕಾಂಗ್ರೆಸ್ ಮುಖಂಡ ಬಸವರಾಜ ಸಂಗಪ್ಪನವರ, ಹೆಚ್. ದೇವೇಂದ್ರಗೌಡ, ಮೈದೂರು ರಾಮಣ್ಣ, ಅಗ್ರಹಾರ ಅಶೋಕ, ಚಿಕ್ಕೇರಿ ಬಸಪ್ಪ, ಮುತ್ತಿಗಿ ಜಂಬಣ್ಣ, ಲಾಟಿ ದಾದಾಪೀರ್, ರೆಡ್ಡಿ ಶಾಂತಕುಮಾರ, ಪಿ.ಬಿ. ಗೌಡ, ಬೇಲೂರು ಸಿದ್ದೇಶ, ಪಿ.ಎಲ್. ಪೋಮ್ಯಾನಾಯ್ಕ, ಜಗದೀಶ್ ಇತರರಿದ್ದರು.

# ಪೊಲೀಸರಿಗೆ ಹೆಚ್ಚಿನ ಅಧಿಕಾರ

(1ನೇ ಪುಟದಿಂದ) ಮುಖ್ಯಮಂತ್ರಿ ಅವರು ಸಭೆ ಕರೆದು ನಂತರ ಸುಗ್ರೀವಾಜ್ಞೆ ಜಾರಿಗೊಳಿಸಲಿದ್ದಾರೆ.

ಸಾಲ ವಸೂಲಿ ಮಾಡಲು ಮೈಕ್ರೋ ಫೈನಾನ್ಸ್ ಸಂಸ್ಥೆಗಳು ರೌಡಿಗಳ ಮೂಲಕ ಬೆದರಿಸಿ ಕಾನೂನು ಕೈಗೆ ತೆಗೆದುಕೊಂಡು ಬಡವರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದು, ಇದನ್ನು ತಪ್ಪಿಸಲು ಪೊಲೀಸರಿಗೆ ಹೆಚ್ಚಿನ ಅಧಿಕಾರ ಕೊಡುತ್ತಿದ್ದೇವೆ ಎಂದರು.

ಜೆಡಿಎಸ್‌ನ ಯಾವ ಶಾಸಕರನ್ನೂ ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳುವ ಚಿಂತನೆ ಇಲ್ಲ, ಮುಂದೆ ಸಮಯ ಬಂದಾಗ ನೋಡೋಣ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಆ ಪಕ್ಷದ ಕಾರ್ಯಕರ್ತರಿಗೆ ರಾಜಕೀಯ ಭವಿಷ್ಯವಿಲ್ಲ, ಹೀಗಾಗಿ ರಾಷ್ಟ್ರೀಯ ಪಕ್ಷದ ಜೊತೆ ಕೈಜೋಡಿಸಿ ಎಂಬುದಾಗಿ ಕರೆ ನೀಡಿದ್ದೇನೆ, ಈಗಾಗಲೇ ಕೆಲವರು ಈ ದಿಕ್ಕಿನಲ್ಲಿ ಪಕ್ಷಕ್ಕೆ ಸೇರ್ಪಡೆಗೊಳ್ಳುತ್ತಿದ್ದಾರೆ.

ನಾವು ಯಾವುದೇ ಶಾಸಕರಿಗೆ ಆಹ್ವಾನ ನೀಡಿಲ್ಲ, ಮಾನ್ಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಯಾವಾಗಿನಿಂದ ಜ್ಯೋತಿಷ್ಯ ಹೇಳಲು ಕಲಿತರೋ ತಿಳಿಯದು. ಜ್ಯೋತಿಷ್ಯದ ಬಗ್ಗೆ ನನಗೆ ನಂಬಿಕೆ ಇದೆ, ಅವರು ಹೇಳುವುದಾದರೆ ನಾನೇ ಹೋಗಿ ಅವರ ಬಳಿ ಭವಿಷ್ಯ ಕೇಳುತ್ತೇನೆ ಎಂದು ವ್ಯಂಗ್ಯವಾಡಿದರು.

# ದೇವರಬೆಳಕೆರೆ, ಕುಣೆಬೆಳಕೆರೆ ಮಾರ್ಗವಾಗಿ ಹರಿಹರ, ದಾವಣಗೆರೆಗೆ ಬಸ್ ಸಂಚಾರ



ಮಲೇಬೆನ್ನೂರು, ಫೆ, 3- ದಾವಣಗೆರೆಯಿಂದ ದೇವರಬೆಳಕೆರೆ, ಕುಣೆಬೆಳಕೆರೆ, ನಂದಿತಾವರೆ ಮಾರ್ಗವಾಗಿ ಹರಿಹರಕ್ಕೆ ಮತ್ತು ಹರಿಹರದಿಂದ ನಂದಿತಾವರೆ, ದೇವರಬೆಳಕೆರೆ, ಕುಣೆಬೆಳಕೆರೆ ಮಾರ್ಗವಾಗಿ ದಾವಣಗೆರೆ ತಲುಪುವ ಕೆಎಸ್ಸಾರ್ಟಿಸಿಯ ಹೊಸ ಬಸ್ ಸಂಚಾರ ಭಾನುವಾರದಿಂದ ಆರಂಭವಾಗಿದ್ದು, ಕುಣೆಬೆಳಕೆರೆಯಲ್ಲಿ ಗ್ರಾಮಸ್ಥರು ಬಸ್‌ಗೆ ಪೂಜೆ ಸಲ್ಲಿಸಿ ಸ್ವಾಗತಿಸಿದರು.

# ನಗರಕ್ಕೆ 7ರಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಭೇಟಿ

ದಾವಣಗೆರೆ, ಫೆ.3- ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರು ಇದೇ ದಿನಾಂಕ 7ರಂದು ಭೇಟಿ ನೀಡಲಿದ್ದಾರೆ.

ಇದೇ ದಿನಾಂಕ 6ರಂದು ನಗರಕ್ಕೆ ಆಗಮಿಸಿ ವಾಸ್ತವ್ಯ ಮಾಡುವ ಅವರು, ದಿನಾಂಕ 7ರ ಬೆಳಗ್ಗೆ 10 ಗಂಟೆಗೆ ತೋಳಹುಣಸೆಯ ವಿವಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಿ, 3 ಗಂಟೆಗೆ ಬೆಂಗಳೂರಿಗೆ ಪ್ರಯಾಣಿಸುವರು.

# ಅಕ್ರಮ ಮರಳು ಅಡ್ಡೆಗಳ ಮೇಲೆ ದಾಳಿ : 340 ಮೆಟ್ರಿಕ್ ಟನ್ ಮರಳು ಜಪ್ತಿ

**ಹರಿಹರ**

ಹರಿಹರ,ಫೆ.3- ತಾಲ್ಲೂಕಿನ ಮಳಲಹಳ್ಳಿ ಮತ್ತು ನಂದಿಗುಡಿ ಗ್ರಾಮದ ತುಂಗಭದ್ರಾ ನದಿ ದಡದಲ್ಲಿ 340 ಮೆಟ್ರಿಕ್ ಟನ್ ಅಕ್ರಮವಾಗಿ ಮರಳನ್ನು ದಾಸ್ತಾನು ಮಾಡಿದ ಅಡ್ಡೆಗಳ ಮೇಲೆ ದಿಢೀರ್ ದಾಳಿ ನಡೆಸಿದ ಉಪ ವಿಭಾಗಾಧಿಕಾರಿ ಸಂತೋಷ್ ಕುಮಾರ್, ತಹಶೀಲ್ದಾರ್ ಗುರುಬಸವರಾಜ್ ಮತ್ತು ಗಣಿ ಮತ್ತು ಭೂ ವಿಜ್ಞಾನಿ ತಂಡಗಳೊಂದಿಗೆ ಸೋಮವಾರ ಜಪ್ತಿ ಮಾಡಲಾಯಿತು. ನಂತರ ಉಪ ವಿಭಾಗಾಧಿಕಾರಿಗಳು ಸಂತೋಷ್ ಮಾತನಾಡಿ ನಂದಿಗುಡಿ, ಮಳಲಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಸಂಗ್ರಹಿಸಿರುವ ಮರಳನ್ನು, ಜಪ್ತಿ ಮಾಡಿದ ಮರಳನ್ನು ಸ್ಟಾಕ್ ಯಾರ್ಡ್ ಅಥವಾ ಯಾವುದಾದರೂ ಸರ್ಕಾರಿ ಕಾಮಗಾರಿಗೆ ರಾಯಲ್ಟಿಯೊಂದಿಗೆ ಸರಿಪಡಿಸಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರಿಗೆ ತಿಳಿಸಲಾಗಿದ್ದು ಮತ್ತು ಪೊಲೀಸ್ ಇಲಾಖೆಯೊಂದಿಗೆ ತಂಡ ರಚನೆ ಮಾಡಿ ಬೀಟ್ ಮಾಡಲು ತಿಳಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಗುರುಬಸವರಾಜ್, ಕಂದಾಯ ನಿರೀಕ್ಷಕ ಆನಂದ, ಗಣಿ ಮತ್ತು ಭೂ ವಿಜ್ಞಾನ ಅಧಿಕಾರಿ ಕವಿತಾ ಹಾಗೂ ಮಲೇಬೆನ್ನೂರು ಪೊಲೀಸ್ ಠಾಣೆ ಸಿಬ್ಬಂದಿ ವರ್ಗದವರು ಇದ್ದರು.


## ಎಂ.ಜಿ. ಪ್ರಕಾಶ್‌ರಾವ್ ನಿಧನ



ದಾವಣಗೆರೆ ಶ್ರೀ ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್, 1ನೇ ಮುಖ್ಯ ರಸ್ತೆ, 5ನೇ ತಿರುವು (ನ್ಯಾಯಾಲಯ ಸಂಕೀರ್ಣದ ಹಿಂಭಾಗ) ವಾಸಿ

**ಶ್ರೀ ಎಂ.ಜಿ. ಪ್ರಕಾಶ್ ರಾವ್**

ಅವರು ದಿನಾಂಕ 03.02.2025ರ ಸೋಮವಾರ ರಾತ್ರಿ 10 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 74 ವರ್ಷ ವಯಸ್ಸಾಗಿತ್ತು. ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04.02.2025ರ ಮಂಗಳವಾರ ಬೆಳಿಗ್ಗೆ 11.30ಕ್ಕೆ ಬೂದಾಳ್ ರಸ್ತೆಯಲ್ಲಿರುವ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**-ದುಃಖತಪ್ತ ಕುಟುಂಬ ವರ್ಗ**


# ಕಾಲ್ತುಳಿತ : ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಗೆ ಸುಪ್ರೀಂ ನಕಾರ

ನವದೆಹಲಿ, ಫೆ. 3 - ಕುಂಭಮೇಳದಲ್ಲಿ ಪಾಲ್ಗೊಂಡಿರುವ ಭಕ್ತರ ಸುರಕ್ಷತೆ ಗಾಗಿ ಮಾರ್ಗಸೂಚಿ ರೂಪಿಸಬೇಕು ಎಂಬ ಅರ್ಜಿಯನ್ನು ತಳ್ಳಿ ಹಾಕಿರುವ ಸುಪ್ರೀಂಕೋರ್ಟ್, ಈ ಬಗ್ಗೆ ಅಲಹಾಬಾದ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುವಂತೆ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರ ಪೀಠದ ಎದುರು ಹಾಜರಾದ ಉತ್ತರ ಪ್ರದೇಶ ಸರ್ಕಾರ, ಅಲಹಾಬಾದ್ ಹೈಕೋರ್ಟ್ ಈಗಾಗಲೇ ಈ ವಿಷಯದ ಬಗ್ಗೆ ಪರಿಶೀಲನೆ ನಡೆಸುತ್ತಿದೆ. ಹೀಗಾಗಿ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಸಬಾರದು ಎಂದು ಮನವಿ ಮಾಡಿಕೊಂಡಿತು.

ಕಾಲ್ತುಳಿತ ಘಟನೆ ದುರಾದೃಷ್ಟಕರ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಅರ್ಜಿದಾರರಾದ ವಕೀಲ ವಿಶಾಲ್ ತಿವಾರಿ ಅವರು ಅಲಹಾಬಾದ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದೆ.

# ಹೊನ್ನಾಳಿ : ಇಂದಿನಿಂದ ನಾಟಕ ಪ್ರದರ್ಶನ



ಹೊನ್ನಾಳಿ ಅಭಿವ್ಯಕ್ತಿ ಮತ್ತು ಯುವಶಕ್ತಿ, ಹಿರೇಕಲ್ಮಠ ಚನ್ನಪ್ಪಸ್ವಾಮಿ ಜನ ಕಲ್ಯಾಣ ಸೇವಾ ಟ್ರಸ್ಟ್ ಆಶ್ರಯದಲ್ಲಿ ಇಂದಿನಿಂದ ಮೂರು ದಿನ 3 ಪ್ರತ್ಯೇಕ ನಾಟಕಗಳ ಉಚಿತ ಪ್ರದರ್ಶನ ಪ್ರತಿದಿನ ಸಂಜೆ 7 ಗಂಟೆಗೆ ಕನಕದಾಸ ರಂಗ ಮಂದಿರದಲ್ಲಿ ನಡೆಯಲಿದೆ ಎಂದು ಅಭಿವ್ಯಕ್ತಿ ಕಲಾ ಸಂಘದ ಕಾರ್ಯದರ್ಶಿ ಕತ್ತಿಗೆ ಲೋಕೇಶ್ ತಿಳಿಸಿದರು.

ಬಳ್ಳಾರಿ ಜಿಲ್ಲಾ ಸಿರುಗುಪ್ಪ ತಾಲ್ಲೂಕಿನ ಸಿರಿಗೆರೆ ದಾತ್ರಿ ರಂಗ ಸಂಸ್ಥೆಯಿಂದ ಇಂದು ಶ್ರೀ ಕೃಷ್ಣ ಸಂಧಾನ ನಗೆ ನಾಟಕ ಪ್ರದರ್ಶನ, ನಾಳೆ ಬುಧವಾರ ಮೋಳಿಗೆ ಮಾರಯ್ಯ ನಾಟಕ ಪ್ರದರ್ಶನ, ಗುರುವಾರ ಸರಸತಿಯಾಗಲೊಲ್ಲೆ ಎಂಬ ಪ್ರತ್ಯೇಕ 3 ನಾಟಕಗಳ ಪ್ರದರ್ಶನ ನಡೆಯಲಿದೆ. ಅಭಿವ್ಯಕ್ತಿ ಸಂಸ್ಥಾಪಕ ಸದಸ್ಯರಾದ ಪ್ರೇಮ್ ಕುಮಾರ ಬಂಡಿಗಡಿ, ಯುವಶಕ್ತಿ ಒಕ್ಕೂಟದ ಪಿ.ವಿ. ಚನ್ನಪ್ಪ, ಲಾಯರ್ ಚಂದ್ರಪ್ಪ, ನಾಗರಾಜ್, ಭೋಜ ಇನ್ನಿತರರಿದ್ದರು.

# ರಾಣೇಬೆನ್ನೂರಿನಲ್ಲಿ ಇಂದು ಮೌನೇಶ್ವರ ಜಯಂತಿ - ಸಾಮೂಹಿಕ ವಿವಾಹ

ಮೌನೇಶ್ವರ ದೇವಸ್ಥಾನ, ವಿಶ್ವಕರ್ಮ ಸಮಾಜ, ಕಾಳಿಕಾದೇವಿ ಮಹಿಳಾ ಮಂಡಳ ಹಾಗೂ ನೌಕರರ ಸಂಘದಿಂದ ಜಗದ್ಗುರು ಮೌನೇಶ್ವರ ಜಯಂತಿಯನ್ನು ಇಂದು ಆಚರಿಸಲಾಗುವುದು ಎಂದು ಸಮಾಜದ ಗೌರವ ಸಮಿತಿ ಅಧ್ಯಕ್ಷ ಬಸವರಾಜ ಬಡಿಗೇರ ತಿಳಿಸಿದರು.

ಅಂತರವಳ್ಳಿ ಮೂರುಜಾವೇಶ್ವರ ಮಠದ ನಿರಂಜನ ಸ್ವಾಮೀಜಿ, ವಡ್ನಾಳ ಸಾವಿತ್ರಿ ಪೀಠದ ಶಂಕರಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಪರಮೇಶ್ವರಾಚಾರ್ ಬಡಿಗೇರ ಅಧ್ಯಕ್ಷತೆ ವಹಿಸುವರು. ಶಾಸಕ ಪ್ರಕಾಶ ಕೋಳಿವಾಡ, ಮಾಜಿ ಶಾಸಕ ಅರುಣ ಪೂಜಾರ, ಜೆಡಿಎಸ್ ಅಧ್ಯಕ್ಷ ಮಂಜುನಾಥ ಗೌಡಶಿವಣ್ಣವರ ಆಗಮಿಸುವರು.

# ಉತ್ತರ ಸಿರಿಯಾದಲ್ಲಿ ಕಾರ್ ಬಾಂಬ್ ಸ್ಫೋಟ : 19 ಸಾವು

ಡಮಸ್ಕಸ್, ಫೆ. 3 - ಸಿರಿಯಾದ ಉತ್ತರ ನಗರವಾದ ಮಾನ್ಬಿಜ್ ಎಂಬಲ್ಲಿ ಕಾರ್ ಬಾಂಬ್ ಸ್ಫೋಟಗೊಂಡು 19 ಜನ ಸಾವನ್ನಪ್ಪಿದ್ದಾರೆ ಹಾಗೂ ಹಲವರು ಗಾಯಗೊಂಡಿದ್ದಾರೆ.

ಕಾರ್ ಬಾಂಬ್ ಸ್ಫೋಟಗೊಂಡಾಗ ಅದರ ಸಮೀಪ ಸಾಗುತ್ತಿದ್ದ ವಾಹನದಲ್ಲಿದ್ದ 18 ಮಹಿಳೆಯರು ಹಾಗೂ ಓರ್ವ ಪುರುಷ ಸಾವನ್ನಪ್ಪಿದ್ದಾರೆ. ಇವರು ಕೃಷಿ ಕಾರ್ಮಿಕರಾಗಿದ್ದರು ಎಂದು ಸ್ಥಳೀಯ ವರದಿಗಳು ತಿಳಿಸಿವೆ.

ಸ್ಫೋಟದಲ್ಲಿ 15 ಮಹಿಳೆಯರು ಗಾಯಗೊಂಡಿದ್ದು ಅವರಲ್ಲಿ ಹಲವರ ಪರಿಸ್ಥಿತಿ ಗಂಭೀರವಾಗಿದೆ.


## ಶ್ರೀ ಕೆ.ಎಸ್. ಭೀಮಲ್ ನಿಧನ



ದಾವಣಗೆರೆ ಜಿಲ್ಲೆ, ಚನ್ನಗಿರಿ ತಾ|| ಸೇವಾನಗರ (ರುದ್ರಾಪುರ) ವಾಸಿ ದಿ. ಡಾ|| ಸುರೇಂದ್ರರವರ ಮಗನಾದ

**ಶ್ರೀ ಕೆ.ಎಸ್. ಭೀಮಲ್**


ಇವರು ದಿನಾಂಕ : 03.02.2025ರ ಸಂಜೆ 4 ಗಂಟೆಗೆ ದೈವಾಧೀನರಾಗಿರುತ್ತಾರೆ. ಮೃತರಿಗೆ 61 ವರ್ಷ ವಯಸ್ಸಾಗಿತ್ತು.

ಮೃತರು ತಾಯಿ, ಪತ್ನಿ, ಮಕ್ಕಳು, ಸಹೋದರರು, ಅಳಿಯಂದಿರರು ಹಾಗೂ ಸೇವಾನಗರ ಗ್ರಾಮಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ : 04.02.2025 ರಂದು ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮವಾದ ಸೇವಾನಗರದ ಮೃತರ ತೋಟದಲ್ಲಿ ನೆರವೇರಲಿದೆ.

**ಇಂತಿ ದುಃಖತಪ್ತರು : ತಾಯಿ ಶ್ರೀಮತಿ ಗಿರಿಜಾ ಬಾಯಿ, ಮೃತರ ಪತ್ನಿ ಮತ್ತು ಮಕ್ಕಳು, ಸಹೋದರರು, ಅಳಿಯಂದಿರು ಹಾಗೂ ಸೇವಾನಗರ ಗ್ರಾಮಸ್ಥರು ಹಾಗೂ ಅಪಾರ ಬಂಧು-ಮಿತ್ರರು.**

ಮೊ: 99008 30164, 96866 50552

## ಪುಣ್ಯಸ್ಮರಣೆ





| | |
|---|---|
| **ಶ್ರೀ ಮೂರ್ಕಲ್ ಎಸ್. ಮಹಾಲಿಂಗಪ್ಪ** | **ಶ್ರೀಮತಿ ಗಿರಿಜಮ್ಮ ಮೂರ್ಕಲ್ ಹರಿಹರ** |
| ಜನನ : 28.11.1934 | ಜನನ : 3.7.1935 |
| ನಿಧನ : 4.2.2006, | ನಿಧನ : 16.8.2016 |

ನೀವು ನಮ್ಮನ್ನಗಲಿ ವರ್ಷಗಳೇ ಕಳೆದವು...
ಸದಾ ನಿಮ್ಮ ನೆನಪಿನಲ್ಲಿರುವ ಹಾಗೂ
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...

**ಮಗ, ಸೊಸೆ, ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**


# ಪತ್ತೆಯಾಗದ ಬಾಲಕನ ಶವ

ದಾವಣಗೆರೆ, ಫೆ.3- ತಾಲೂಕಿನ ಕುರ್ಕಿ ಬಳಿ ಭದ್ರಾ ನಾಲೆಯಲ್ಲಿ ಭಾನುವಾರ ಕೊಚ್ಚಿ ಹೋಗಿರುವ ಗಣೇಶ್ ಶವ ಸೋಮವಾರವೂ ಪತ್ತೆಯಾಗಲಿಲ್ಲ.

ತುರ್ಚಘಟ್ಟ ಗ್ರಾಮದ ಗುರುಕುಲ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಅಭ್ಯಾಸ ಮಾಡುತ್ತಿದ್ದ ಗಣೇಶ್ ತನ್ನ ಗೆಳೆಯ ಪಾಂಡು ರಂಗನೊಂದಿಗೆ ಭದ್ರಾ ನಾಲೆಯಲ್ಲಿ ಈಜಲು ತೆರಳಿದ್ದ ಸಂದರ್ಭದಲ್ಲಿ ಕೊಚ್ಚಿ ಹೋಗಿದ್ದ. ಪಾಂಡುರಂಗನ ಶವ ಪತ್ತೆಯಾಗಿತ್ತು. ಮರಣೋತ್ತರ ಪರೀಕ್ಷೆ ನಂತರ ಪೋಷಕರಿಗೆ ಪಾರ್ಥಿವ ಶರೀರ ಹಸ್ತಾಂತರಿಸಲಾಗಿತ್ತು.

ಭದ್ರಾ ನಾಲೆಯಲ್ಲಿ ಕೊಚ್ಚಿ ಹೋಗಿರುವ ಗಣೇಶ್‌ನ ಶವಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ, ಪೊಲೀಸರು, ನುರಿತ ಮೀನುಗಾರರು ಎಲ್ಲೆಡೆ ಹುಡುಕಾಟ ನಡೆಸಿದ್ದರು.

ಶವ ಪತ್ತೆಯಾಗಿರಲಿಲ್ಲ. ಸಂಜೆಯಾಗಿದ್ದರಿಂದ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿತ್ತು.

ಸೋಮವಾರ ಬೆಳಗ್ಗೆಯಿಂದಲೇ ಗಣೇಶ್‌ನ ಪಾರ್ಥಿವ ಶರೀರಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ, ಪೊಲೀಸರು, ನುರಿತ ಮೀನುಗಾರರು ಹುಡುಕಾಟ ನಡೆಸಿದರು. ಚಟ್ಟೋಬನಹಳ್ಳಿ, ಲೋಕಿಕೆರೆವರೆಗೆ ಸರಿ ಸುಮಾರು 10 ಕಿಲೋ ಮೀಟರ್ ದೂರದವರೆಗೂ ತಲಾಶ್ ನಡೆಸಿದರೂ ಶವ ಪತ್ತೆಯಾಗಲಿಲ್ಲ. ಹಾಗಾಗಿ ಮಂಗಳವಾರಕ್ಕೆ ಕಾರ್ಯಾಚರಣೆ ಮುಂದುವರಿಸಲಾಗುವುದು. ನಾಲೆಯಲ್ಲಿ ಮಗ ಕೊಚ್ಚಿ ಹೋಗಿ ಎರಡು ದಿನ ಕಳೆದರೂ ಶವ ಪತ್ತೆಯಾಗದಿರುವುದರಿಂದ ಪೋಷಕರ ರೋಧನ ಮುಗಿಲು ಮುಟ್ಟಿದೆ.

# ಸಾಲಬಾಧೆ: ದೀಟೂರಿನಲ್ಲಿ ರೈತ ಆತ್ಮಹತ್ಯೆ



ಹರಿಹರ, ಫೆ.3- ಸಾಲಬಾಧೆ ತಾಳಲಾರದೆ ದೀಟೂರು ಗ್ರಾಮದ ರೈತನೊಬ್ಬನು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲ್ಲೂಕಿನ ದೀಟೂರು ಗ್ರಾಮದಲ್ಲಿ ನಡೆದಿದೆ.

ಎಲ್.ಕೆ ಸುರೇಶ್ (42) ಆತ್ಮಹತ್ಯೆ ಮಾಡಿಕೊಂಡ ರೈತ. ಈತ ಸಾರಥಿ ಗ್ರಾಮದ ಯೂನಿಯನ್ ಬ್ಯಾಂಕಿನಲ್ಲಿ ಸುಮಾರು 21 ಲಕ್ಷ ರೂ. ಸಾಲ ಪಡೆದಿದ್ದು, ಜೊತೆಗೆ ಇತರೆಡೆ ಸೇರಿದಂತೆ ಒಟ್ಟು ಮೂವತ್ತು ಲಕ್ಷ ರೂ.ಸಾಲ ಪಡೆದಿದ್ದು, ಆದರೆ ಇತ್ತೀಚಿನ ಮಳೆಯ ಪ್ರಮಾಣ ಏರುಪೇರು ಆಗಿ ಜಮೀನಿನಲ್ಲಿ ಲಾಭ ಗಳಿಸಲು ಆಗದೇ ಇರುವುದರಿಂದ ನಿನ್ನೆ ರಾತ್ರಿ ಮನೆಯಲ್ಲಿ ವೇಲ್ ನಿಂದ ನೇಣು ಹಾಕಿಕೊಂಡು ಮೃತಪಟ್ಟಿದ್ದು, ಈತನಿಗೆ ಒಂದು ಗಂಡು, ಎರಡು ಹೆಣ್ಣು ಮಕ್ಕಳಿದ್ದಾರೆ.

ಬ್ಯಾಂಕ್ ಸಾಲ ತೀರಿಸಲು ಆಗದೇ ಚಿಂತೆಯಲ್ಲಿಯೇ ಜಿಗುಪ್ಸೆ ಗೊಂಡು ನೇಣು ಬಿಗಿದು ಮೃತಪಟ್ಟಿರುತ್ತಾನೆ ಎಂದು ಸುರೇಶ್ ಪತ್ನಿ ಎಲ್.ಎಸ್. ಕಲ್ಪನಾ ದೂರು ನೀಡಿದ ಮೇರೆಗೆ ಹರಿಹರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇಂದು ವಿಶ್ವ ಕ್ಯಾನ್ಸರ್ ದಿನ 'ಅನನ್ಯತೆಯಿಂದ ಒಂದುಗೂಡಿದೆ'

ವಿಶ್ವ ಕ್ಯಾನ್ಸರ್ ದಿನವನ್ನು ಮೊದಲ ಬಾರಿಗೆ ಫೆಬ್ರವರಿ 4, 2000 ರಂದು ಪ್ಯಾರಿಸ್ ನಲ್ಲಿ ಆಚರಿಸಲಾಯಿತು. ನ್ಯೂ ಮಿಲೇನಿಯಂಗಾಗಿ ಕ್ಯಾನ್ಸರ್ ವಿರುದ್ಧ ವಿಶ್ವ ಶೃಂಗ ಸಭೆಯಲ್ಲಿ ಈ ದಿನವು ಅಸ್ತಿತ್ವಕ್ಕೆ ಬಂದಿತು.

ಅಂದಿನಿಂದ ಪ್ರತಿವರ್ಷ ಪ್ರಪಂಚದಾದ್ಯಂತ ಕ್ಯಾನ್ಸರ್ ರೋಗಿಗಳ ಜೀವನದ ಗುಣಮಟ್ಟವನ್ನು ಸುಧಾರಿಸಲು ಮತ್ತು ಕ್ಯಾನ್ಸರ್ ತಡೆಗಟ್ಟುವಿಕೆ ಮತ್ತು ಚಿಕಿತ್ಸೆಯ ಬಗ್ಗೆ ಜಾಗೃತಿ ಮೂಡಿಸಲು ಪ್ರತಿವರ್ಷ ವಿಭಿನ್ನ ಥೀಮ್ ನೊಂದಿಗೆ ಆಚರಣೆ ಮಾಡಲಾಗುತ್ತದೆ.

**ವಿಶ್ವ ಕ್ಯಾನ್ಸರ್ ದಿನ 2025 ರ ಥೀಮ್ :** 'ಯುನೈಟೆಡ್ ಬೈ ಯುನಿಕ್' ಅಂದರೆ 'ಅನನ್ಯತೆಯಿಂದ ಒಂದುಗೂಡಿದೆ' ಎಂಬರ್ಥದೊಂದಿಗೆ ಕ್ಯಾನ್ಸರ್ ನ ವಿರುದ್ಧದ ಹೋರಾಟಕ್ಕೆ ಗಮನವನ್ನು ತರುತ್ತದೆ.

ಪ್ರತಿ ಹತ್ತು ಮಂದಿ ಭಾರತೀಯರಲ್ಲಿ ಒಬ್ಬರು ಈ ಮಹಾಮಾರಿಗೆ ತುತ್ತಾಗುತ್ತಿದ್ದು, ವಾರ್ಷಿಕವಾಗಿ 16 ಮಿಲಿಯನ್ ಮಂದಿ ಕ್ಯಾನ್ಸರ್ ಗೆ ಬಲಿಯಾಗುತ್ತಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತನ್ನ ವರದಿಯಲ್ಲಿ ತಿಳಿಸಿದೆ. ಜಾಗತಿಕವಾಗಿ ಪ್ರತಿವರ್ಷ 6 ಜನರಲ್ಲಿ ಒಬ್ಬರು ಕ್ಯಾನ್ಸರ್ ನಿಂದ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ ಎಂದು 'ಯೂನಿಯನ್ ಫಾರ್ ಕ್ಯಾನ್ಸರ್ ಕಂಟ್ರೋಲ್' ತಿಳಿಸಿದೆ. ಹಾಗಾಗಿ ಈ ಮಾರಣಾಂತಿಕ ರೋಗದ ಬಗ್ಗೆ ಜಾಗೃತಿ ಮೂಡಿಸುವುದು ಈ ದಿನದ ಆಚರಣೆಯ ಮುಖ್ಯ ಉದ್ದೇಶವಾಗಿದೆ. ಜಾಗತಿಕವಾಗಿ ಇರುವ ಅಸಮಾನತೆಯನ್ನು ಹೋಗಲಾಡಿಸಿ ಕ್ಯಾನ್ಸರ್ ರೋಗಿಗಳಲ್ಲಿ ಜೀವನೋತ್ಸಾಹ ತುಂಬುವ ಗುರಿಯನ್ನು ಹೊಂದಲಾಗಿದೆ.

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಕ್ಯಾನ್ಸರ್ ಸಾವಿನ ಎರಡನೇ ಪ್ರಮುಖ ಕಾರಣವಾಗಿದೆ. ಜಾಗತಿಕವಾಗಿ ಕ್ಯಾನ್ಸರ್ ರೋಗವು ಬೆಳೆಯುತ್ತಲೆ ಇದೆ. ಅದಾಗ್ಯೂ ಸುಧಾರಿತ ರೋಗನಿರ್ಣಯ ಮತ್ತು ಚಿಕಿತ್ಸೆಯ ಸಹಾಯದಿಂದ ಬದುಕುಳಿಯುವಿಕೆಯ ಪ್ರಮಾಣ ಸುಧಾರಿಸುತ್ತಿದೆ. 'ನಿಯಮಿತ ಸ್ಕ್ರೀನಿಂಗ್ ಗಳು ಮತ್ತು ಆರಂಭಿಕ ಪತ್ತೆಹಚ್ಚುವಿಕೆ' ಬದುಕುಳಿಯುವಿಕೆಯ ಪ್ರಮಾಣವನ್ನು ಸುಧಾರಿಸಲು ಸಹಾಯ ಮಾಡುವ ಎರಡು ಪ್ರಮುಖ ಅಂಶವಾಗಿವೆ.




**ಕ್ಯಾನ್ಸರ್ ನ ವಿಧಗಳು :** ಕ್ಯಾನ್ಸರ್ ದೇಹದ ಯಾವುದೇ ಅಂಗ/ ಅಂಗಾಶಯದ ಮೇಲೆ ಪರಿಣಾಮ ಬೀರುವ ರೋಗಗಳ ಒಂದು ದೊಡ್ಡ ಗುಂಪು. ಇದು ಅನಿಯಂತ್ರಿಕವಾಗಿ ವಿಭಜಿಸುವ ಜೀವಕೋಶಗಳ ಅಸಹಜ ಬೆಳವಣಿಗೆಯನ್ನು ಸೂಚಿಸುತ್ತದೆ. ಕ್ಯಾನ್ಸರ್ ಒಂದು ದೇಹದ ಭಾಗ/ ಅಂಗ/ ಅಂಗಾಶಯದಿಂದ ಇನ್ನೊಂದಕ್ಕೆ ಹರಡುವ ಸಾಮರ್ಥ್ಯ ವನ್ನು ಹೊಂದಿದೆ.

ಕ್ಯಾನ್ಸರ್ ನಲ್ಲಿ ಸುಮಾರು ನೂರಕ್ಕಿಂತಲೂ ಹೆಚ್ಚು ವಿಧಗಳಿವೆ. ಅವುಗಳಲ್ಲಿ ಸಾಮಾನ್ಯವಾದವು ಚರ್ಮದ ಕ್ಯಾನ್ಸರ್, ಸ್ತನ ಕ್ಯಾನ್ಸರ್, ಕೊಲೊರೆಕ್ಟಲ್ ಕ್ಯಾನ್ಸರ್, ಮೆಲನೋಮ, ಲಿಂಫೋಮ ಕ್ಯಾನ್ಸರ್, ಮೂತ್ರಪಿಂಡದ ಕ್ಯಾನ್ಸರ್ ಗಳಾಗಿವೆ. ಭಾರತದಲ್ಲಿ ಬಾಯಿ , ಗರ್ಭಾಶಯ ಮತ್ತು ಸ್ತನ ಕ್ಯಾನ್ಸರ್ ಹೆಚ್ಚಾಗಿ ಕಂಡು ಬರುತ್ತದೆ ಎಂದು ವರದಿ ಹೇಳಿದೆ.

**ತಂಬಾಕು ಸೇವನೆ ಮತ್ತು ಕ್ಯಾನ್ಸರ್ :** ತಂಬಾಕು ಸೇವನೆಯು ಕ್ಯಾನ್ಸರ್ ನಿಂದಾಗಿ ಸಾಯುವ ಮೂರನೆಯ ಒಂದು ಭಾಗದಷ್ಟು ಸಾವುಗಳಿಗೆ ಕಾರಣವಾಗಿದೆ. ಇದರ ಅಪಾಯಕಾರಿ ಅಂಶಗಳೆಂದರೆ, ಅಧಿಕ ಬಾಡಿ ಮಾಸ್ ಇಂಡೆಕ್ಸ್, ಆಲ್ಕೋಹಾಲ್ ಸೇವನೆ, ಕುಟುಂಬದ ಇತಿಹಾಸ, ಕೆಲವು ಆರೋಗ್ಯ ಪರಿಸ್ಥಿತಿಗಳು, ಪರಿಸರ, ಕೆಲವು ವೈರಸ್ ಗಳಿಂದಾಗುವ ಸೋಂಕುಗಳು ಮತ್ತು ಹೆಚ್ಚಿನವು.

**ಕ್ಯಾನ್ಸರ್ ಉಂಟು ಮಾಡುವ ಆಹಾರ ಪದಾರ್ಥಗಳು :**

. ಬಿಳಿ ಹಿಟ್ಟು
. ಮೈಕ್ರೋವೇವ್ ಆಹಾರ ಉತ್ಪನ್ನಗಳು
.ಆಲ್ಕೋಹಾಲ್ ಸೇವನೆ
. ಪೂರ್ವಸಿದ್ಧ ಆಹಾರ ಉತ್ಪನ್ನಗಳು
. ಕೆಂಪು ಮಾಂಸ . ಸೋಡಾಸ್
. ಉಪ್ಪಿನಕಾಯಿ ಆಹಾರ

**ಕ್ಯಾನ್ಸರ್ ಅಪಾಯವನ್ನು ಕಡಿಮೆ ಮಾಡಲು ಕ್ಯಾನ್ಸರ್ ವಿರುದ್ಧ ಹೋರಾಡುವ ಆಹಾರಗಳು :** ಸೇಬುಗಳು, ಬೆಳ್ಳಿ ಹಣ್ಣುಗಳು,ಕ್ರೂರಿಫೆರಸ್ ತರಕಾರಿಗಳು,ಕ್ಯಾರೆಟ್, ಕೊಬ್ಬಿನ ಮೀನು, ವಾಲ್ನಟ್ಸ್, ದ್ವಿದಳ ಧಾನ್ಯಗಳು, ದ್ರಾಕ್ಷಿ, ಡಾರ್ಕ್ ಚಾಕೊಲೇಟ್, ಆಲಿವ್ ಎಣ್ಣೆ...,

**ವಿಶ್ವ ಕ್ಯಾನ್ಸರ್ ದಿನದ ಗುರಿಗಳು :**

. ಕ್ಯಾನ್ಸರ್ ನಿಂದ ಉಂಟಾಗುವ ಅನಾರೋಗ್ಯ - ಮರಣವನ್ನು ಕಡಿಮೆ ಮಾಡುವುದು.
. ಕ್ಯಾನ್ಸರ್ ನಿಂದ ತಡೆಯಬಹುದಾದ ಸಂಕಟವನ್ನು ಕೊನೆಗೊಳಿಸುವುದು.
. ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸುವುದು.
. ಕ್ಯಾನ್ಸರ್ ನಿಂದ ಪೀಡಿತರಿಗೆ ಬೆಂಬಲ ನೀಡುವುದು.
. ಕ್ಯಾನ್ಸರ್ ನ ಪತ್ತೆ, ಚಿಕಿತ್ಸೆ,ತಡೆಗಟ್ಟುವಿಕೆಗಾಗಿ ಉತ್ತೇಜನ ನೀಡುವುದು.

ವಿಶ್ವ ಕ್ಯಾನ್ಸರ್ ದಿನದಂದು ಪ್ರತಿಯೊಬ್ಬರೂ, ಕ್ಯಾನ್ಸರ್ ಮುಕ್ತ ಆರೋಗ್ಯಕರ ಮತ್ತು ಪ್ರಕಾಶಮಾನವಾದ ಜಗತ್ತನ್ನು ಸಾಧಿಸಲು , ಜಾಗೃತಿ ಮೂಡಿಸಲು ಸಾರ್ವಜನಿಕ ಕಾರ್ಯಕ್ರಮಗಳು, ಜಾಗೃತಿ ಅಭಿಯಾನಗಳು ಮತ್ತು ಶೈಕ್ಷಣಿಕ ಕಾರ್ಯಕ್ರಮಗಳಂತಹ ವಿವಿಧ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಈ ಮಾರಣಾಂತಿಕ ಮಹಾಮಾರಿಯಿಂದ ಪಾರಾಗೋಣ.

ಕೊನೆಯಲ್ಲಿ, ನಿರ್ದಿಷ್ಟ ಆಹಾರಗಳ ಸೇವನೆ ಯೊಂದಿಗೆ ಕ್ಯಾನ್ಸರ್ ಅಪಾಯವು ಹೆಚ್ಚಾಗಬಹುದು. ಆದ್ದರಿಂದ ಸಿಹಿತಿಂಡಿ, ಮದ್ಯಪಾನ,ಸಂಸ್ಕರಿಸಿದ ಮತ್ತು ಕೆಂಪು ಮಾಂಸಗಳು ಮತ್ತು ತ್ವರಿತ ಆಹಾರದ ಸೇವನೆಯನ್ನು ಮಿತಿಗೊಳಿಸಲು ಪ್ರಯತ್ನಿಸುವುದು ಸೂಕ್ತವಾಗಿದೆ.

ಬದಲಾಗಿ, ನಿಮ್ಮ ಊಟ ಮತ್ತು ತಿಂಡಿಗಳಿಗಾಗಿ ಹಣ್ಣುಗಳು, ತರಕಾರಿಗಳು, ಧಾನ್ಯಗಳು, ನೇರ ಮಾಂಸದ ಸೇವನೆ, ಆರೋಗ್ಯಕರ ಕೊಬ್ಬು ಮತ್ತು ಕೊಬ್ಬಿನ ಡೈರಿಗಳಂತಹ ತಾಜಾ, ಸಂಪೂರ್ಣ ಆಹಾರವನ್ನು ಬೇಯಿಸಲು ಪ್ರಯತ್ನಿಸಿ. ಸ್ಥೂಲಕಾಯತೆ ಮತ್ತು ಟೈಪ್ 2 ಮಧುಮೇಹದ ಸಾಧ್ಯತೆಗಳು, ಕ್ಯಾನ್ಸರ್ ಅಪಾಯವನ್ನು ಹೆಚ್ಚಿಸುವ ಎರಡು ಕಾಯಿಲೆಗಳನ್ನು ಆರೋಗ್ಯಕರ ಸಮತೋಲಿತ ಆಹಾರವನ್ನು ಸೇವಿಸುವ ಮೂಲಕ ಕಡಿಮೆ ಮಾಡಬಹುದು.

ನಾಳೆ ಆರೋಗ್ಯಕರವಾಗಿರಲು - ಈಗಲೇ ಪ್ರಾರಂಭಿಸೋಣ

**- ಡಾ. ಜಿ.ವಿ. ಪ್ರಮೋದ್,**
**ಡಾ. ದೀಪಶ್ರೀ ಪ್ರಮೋದ್ ಗುಜ್ಜರ್**, ದಾವಣಗೆರೆ.

# ನಗರದಲ್ಲಿ ಇಂದು ಕ್ಯಾನ್ಸರ್ ಜಾಗೃತಿ ಜಾಥಾ

ದಾವಣಗೆರೆ, ಫೆ. 3- ಜಿ.ಎಂ. ವಿಶ್ವವಿದ್ಯಾಲಯ, ಜಿ.ಎಂ.ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಾಸ್ಯೂಟಿಕಲ್ ಸೈನ್ಸ್ ಅಂಡ್ ರಿಸರ್ಚ್ ವಿಭಾಗ ಮತ್ತು ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ವಿಶ್ವ ಕ್ಯಾನ್ಸರ್ ದಿನಾಚರಣೆ ಅಂಗವಾಗಿ ಜಾಗೃತಿ ಜಾಥಾ (ವಾಕಥಾನ್) ನಾಳೆ ದಿನಾಂಕ 4 ರ ಮಂಗಳವಾರ ಬೆಳಿಗ್ಗೆ 7.30 ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಜಿ.ಎಂ. ಫಾರ್ಮಸಿ ವಿಭಾಗದ ಪ್ರಾಚಾರ್ಯ ಡಾ. ಗಿರೀಶ್ ಬೋಳಕಟ್ಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಾಥಾ ನಗರದ ಮೋತಿ ವೀರಪ್ಪ ಕಾಲೇಜು ಮೈದಾನದಿಂದ ಪ್ರಾರಂಭವಾಗಿ, ವಿದ್ಯಾರ್ಥಿ ಭವನ, ಅಂಬೇಡ್ಕರ್ ವೃತ್ತ, ಜಯದೇವ ವೃತ್ತದವರೆಗೆ ನಡೆಯಲಿದೆ ಎಂದರು.

ಇದೇ ವೇಳೆ ಕ್ಯಾನ್ಸರ್ ಬಗ್ಗೆ ಜಾಗೃತಿ, ಕಿರು ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ. ಕ್ಯಾನ್ಸರ್ ಜಾಗೃತಿ ಜಾಥಾದಲ್ಲಿ ಜಿ.ಎಂ. ವಿವಿ ಕುಲಾಧಿಪತಿ ಜಿ.ಎಂ.ಲಿಂಗರಾಜ್, ಕುಲಪತಿ ಡಾ.ಎಸ್. ಆರ್. ಶಂಕಪಾಲ್, ಉಪ ಕುಲಪತಿ ಡಾ. ಹೆಚ್.ಡಿ. ಮಹೇಶ್ವರಪ್ಪ, ಕುಲಸಚಿವ ಡಾ. ಬಿ.ಎಸ್. ಸುನೀಲ್ ಕುಮಾರ್, ಪ್ರಾಚಾರ್ಯ ಡಾ.ಎಂ.ಡಿ. ಸಂಜಯ್, ಸಹಾಯಕ ಔಷಧ ನಿಯಂತ್ರಕರಾದ ಎಂ. ಎಸ್. ಗೀತಾ, ಎಸ್.ಆರ್. ಪ್ರಸನ್ನಕುಮಾರ್, ರವಿಪ್ರಸಾದ್, ಕ್ಯಾನ್ಸರ್ ಗೆದ್ದಿರುವ ಕಲಾವಿದ ಆರ್.ಟಿ. ಅರುಣ್ ಕುಮಾರ್ ಸೇರಿದಂತೆ ಅನೇಕರು ಪಾಲ್ಗೊಳ್ಳಲಿದ್ದಾರೆಂದು ತಿಳಿಸಿದರು.

ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆ ನಿರ್ದೇಶಕ ಡಾ. ಜಗದೀಶ್ ತುಬಚಿ ಮಾತನಾಡಿ, ಭಾರತದಲ್ಲಿ ಪ್ರತಿ ವರ್ಷ ನಾಲ್ಕು ಲಕ್ಷ ಜನರಲ್ಲಿ ಕ್ಯಾನ್ಸರ್ ಪತ್ತೆಯಾಗುತ್ತಿದೆ. ಕ್ಯಾನ್ಸರ್‌ಗೆ ಚಿಕಿತ್ಸೆ ಇದೆ. ಆದರೆ ಅನೇಕರಲ್ಲಿ ತಪ್ಪು ಭಾವನೆ ಇದೆ. ಮೊದಲ ಹಂತದಲ್ಲೇ ಕ್ಯಾನ್ಸರ್ ಪತ್ತೆ ಹಚ್ಚಿ ಗುಣಪಡಿಸಬಹುದು. ಅನೇಕರು ನಾಲ್ಕನೇ ಹಂತದಲ್ಲಿರುವಾಗ ಚಿಕಿತ್ಸೆಗೆ ಬರುವುದು ಕಂಡು ಬರುತ್ತದೆ. ಇತ್ತೀಚಿನ ದಿನಗಳಲ್ಲಿ ಮೊದಲ, ಎರಡನೇ ಹಂತದಲ್ಲಿರುವವರು ಚಿಕಿತ್ಸೆಗೆ ಬರುವಂತಾಗಿದೆ ಎಂದು ಹೇಳಿದರು.

ಅನೇಕರು ಒತ್ತಡದ ಜೀವನದಲ್ಲಿ ಕ್ಯಾನ್ಸರ್‌ನ ಪ್ರಾರಂಭಿಕ ಲಕ್ಷಣಗಳನ್ನೂ ಗಮನಿಸದೇ ಇರುವುದು ಕಂಡುಬರುತ್ತಿದೆ. ತಂಬಾಕು, ಗುಟ್ಕಾ, ಬದಲಾಗುತ್ತಿರುವ ಜೀವನ ಶೈಲಿ, ಇತರೆ ಕಾರಣಗಳಿಂದ ಕ್ಯಾನ್ಸರ್ ಕಂಡು ಬರುತ್ತಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಎಂ.ಡಿ. ಮೊಹಮ್ಮದ್ ಯೂಸೂಫ್, ಪ್ರತೀಕ್ಷಾ, ಡಾ. ಟಿ.ಎಂ. ವೀರಗಂಗಾಧರ ಸ್ವಾಮಿ ಮತ್ತಿತರರಿದ್ದರು.

# ಸ್ವಾವಲಂಬಿ ಬದುಕಿಗೆ ಉತ್ತಮ ಶಿಕ್ಷಣ ಅಗತ್ಯ : ಜಿ.ಬಿ.ವಿನಯ್



**ಜಗಳೂರು**

ಜಗಳೂರು, ಫೆ.3- ಇಂದಿನ ಪ್ರಪಂಚದಲ್ಲಿ ಜ್ಞಾನ, ಶಿಕ್ಷಣ, ತಂತ್ರಜ್ಞಾನ ಸೇರಿದಂತೆ ಎಲ್ಲವೂ ಲಭ್ಯವಿದೆ. ಬೇಕಾಗಿರುವುದು ಗಟ್ಟಿ ಮನಸ್ಸು ಮಾತ್ರ. ಒಳ್ಳೆಯ ಶಿಕ್ಷಣ ಪಡೆಯುವ ಮೂಲಕ ಸ್ವತಂತ್ರ ಮತ್ತು ಧೈರ್ಯದಿಂದ ಸ್ವಾವಲಂಬಿಗಳಾಗಿ ಬದುಕಬೇಕು ಎಂದು ಇನ್‌ಸೈಟ್ಸ್ ಸಂಸ್ಥೆ ಸಂಸ್ಥಾಪಕ ಜಿ.ಬಿ.ವಿನಯ್ ಕುಮಾರ್ ಸಲಹೆ ನೀಡಿದರು.

ಜಗಳೂರು ಪಟ್ಟಣದ ಮಹರ್ಷಿ ವಾಲ್ಮೀಕಿ ಸಮು ದಾಯ ಭವನದಲ್ಲಿ ಸಮಾನ ಮನಸ್ಕರ ಬಳಗದ ಆಶ್ರಯದಲ್ಲಿ ಏರ್ಪಡಿಸಿದ್ದ ಸ್ವಾಮಿ ವಿವೇಕಾನಂದ ಜಯಂತ್ಯೋತ್ಸವ, ರಾಷ್ಟ್ರೀಯ ಯುವಕರ ದಿನದ ಪ್ರಯುಕ್ತ ಸ್ವಯಂಪ್ರೇರಿತ ರಕ್ತದಾನ ಶಿಬಿರ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ನೀಡಲಾದ ಸನ್ಮಾನ ಸಮಾರಂಭದಲ್ಲಿ ಸನ್ಮಾನಿತರಾಗಿ ಅವರು ಮಾತನಾಡಿದರು.

ಪ್ರತಿಯೊಬ್ಬರೂ ಪುಸ್ತಕಗಳನ್ನು ಓದುವ ಮೂಲಕ ಜ್ಞಾನ ಸಂಪಾದಿಸಿಕೊಳ್ಳಿ. ಯಾರ ಮುಂದೆಯೂ ಕೈಚಾಚಬೇಡಿ. ಸ್ವಾಭಿ ಮಾನಕ್ಕೆ ಬಡತನ ಇರಬಾರದು, ಜೀವನದಲ್ಲಿ ಎಷ್ಟೇ ಕಷ್ಟ ಬಂದರೂ ದೊಡ್ಡ ಕನಸು ಕಾಣಬೇಕು ಎಂದು ಹೇಳಿದರು.

ಡಾ. ಬಿ. ಆರ್. ಅಂಬೇಡ್ಕರ್ ರವರ ಬರವಣಿಗೆಯಲ್ಲಿ ಸ್ವಾಭಿಮಾನ ಮತ್ತು ಘನತೆ ಪದಗಳು ಪದೇ ಪದೇ ಪುನರಾವರ್ತನೆ ಆಗಿವೆ. ಭಾರತ ದೇಶದ ಪ್ರತಿಯೊಬ್ಬ ವ್ಯಕ್ತಿಯ ಘನತೆ ಮತ್ತು ಸ್ವಾಭಿಮಾನಕ್ಕೆ ಧಕ್ಕೆ ಬರಬಾರದು ಎಂಬುದೇ ಸಂವಿಧಾನದ ಮೂಲ ಉದ್ದೇಶ. ಇಂಥ ವ್ಯವಸ್ಥೆ ಸೃಷ್ಟಿಯಾಗಬೇಕು. ಅಸಮಾನತೆ ತೊಲಗಬೇಕು ಎಂದು ಪ್ರತಿಪಾದಿಸಿದರು.

ಸಮಾನ ಮನಸ್ಕರ ಬಳಗದ ಅಧ್ಯಕ್ಷ ಬಿಸ್ತುವಳ್ಳಿ ಬಾಬು ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಡಾ. ಟಿ. ಜಿ. ರವಿಕುಮಾರ್, ಪ್ರದೀಪ್ ಕುಮಾರ್, ಶೌಖತ್ ಅಲಿ, ಕೀರ್ತಿ ದೇವೇಂದ್ರಪ್ಪ, ಮಹಾಲಿಂಗಪ್ಪ, ಬರ್ಕತ್ ಆಲಿ, ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

# ವಸಂತ ಪಂಚಮಿ ಕುಂಭ ಸ್ನಾನ ಸುಸೂತ್ರ

**(1ನೇ ಪುಟದಿಂದ)** ಸ್ನಾನದ ವೇಳೆ ಸಾಕಷ್ಟು ಭದ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತು. ಈ ಬಾರಿ ಸಾಕಷ್ಟು ಭಕ್ತರು ಸಂಗಮದ ಬದಲು ಇತರೆ ಘಾಟ್‌ಗಳಲ್ಲಿ ಸ್ನಾನ ಮಾಡಿದ್ದರು. ಭಕ್ತರಲ್ಲಿ ಹೆಚ್ಚಿನ ಅರಿವು ಮೂಡಿಸಿದ ಹಾಗೂ ಭದ್ರತೆ ಹೆಚ್ಚಿಸಿದ ಕಾರಣ ಕುಂಭಮೇಳದ ಪ್ರದೇಶದಲ್ಲಿ ಒತ್ತಡ ಕಡಿಮೆಯಾಗಿತ್ತು. ಸೋಮವಾರದ ದಿನದಂದು ಪವಿತ್ರ ಸ್ನಾನ ಸುಗಮವಾಗಿ ನೆರವೇರಿದೆ. ಕುಂಭಮೇಳದಲ್ಲಿ ಪಾಲ್ಗೊಂಡಿರುವ ಅಖಾಡಗಳು ಭವ್ಯ ಮೆರವಣಿಗೆಯನ್ನು ನಡೆಸಿದವು.

**ಬೇಸಿಗೆ ಹಂಗಾಮು :**

# ಜಿಲ್ಲೆಯಲ್ಲಿ 65 ಸಾವಿರ ಹೆಕ್ಟೇರ್ ಭತ್ತ ಬೆಳೆಯುವ ಗುರಿ

ದಾವಣಗೆರೆ,ಫೆ.3- ಜಿಲ್ಲೆಯಾದ್ಯಂತ ಬೇಸಿಗೆ ಹಂಗಾಮಿನಲ್ಲಿ ಒಟ್ಟಾರೆ 65 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತವನ್ನು ಬೆಳೆಯುವ ಗುರಿ ಹೊಂದಲಾಗಿದೆ ಎಂದು ಕೃಷಿ ಅಧಿಕಾರಿಗಳು ತಿಳಿಸಿದ್ದಾರೆ.

ಈ ವರ್ಷದ ಉತ್ತಮ ಮಳೆಯಿಂದಾಗಿ ತುಂಗಾ ಮತ್ತು ಭದ್ರಾ ಜಲಾಶಯಗಳೆರಡೂ ತುಂಬಿರುವುದು ಹಾಗೂ ಕೊಳವೆ ಬಾವಿಗಳಲ್ಲಿ ನೀರು ಹೆಚ್ಚಾಗಿರುವುದರಿಂದ ಜಿಲ್ಲೆಯ ರೈತರು ಹರ್ಷ ಚಿತ್ತರಾಗಿ ಭತ್ತದ ಬೆಳೆ ಬೆಳೆಯಲು ಸಿದ್ಧತೆ ನಡೆಸುತ್ತಿದ್ದಾರೆ. ಉತ್ತಮ ಬೆಳೆ ಹಾಗೂ ಇಳುವರಿ ಪಡೆಯಲು, ಭತ್ತದ ಉತ್ಪಾದನೆ ಹೆಚ್ಚಿಸುವ ಮುಖ್ಯ ತಾಂತ್ರಿಕತೆಗಳಾದ ಭೂಮಿ ಹಾಗೂ ಸಸಿಮಡಿ ತಯಾರಿಕೆ, ಸುಧಾರಿತ ತಳಿಗಳು, ಸಮಗ್ರ ನೀರು, ಪೋಷಕಾಂಶ ಹಾಗೂ ಸಸ್ಯ ಸಂರಕ್ಷಣೆಗಳ ನಿರ್ವಹಣೆ ಬಗ್ಗೆ ಒತ್ತು ನೀಡುವುದು ಅತ್ಯಗತ್ಯವಾಗಿರುತ್ತದೆ.

ಮಿಶ್ರಣ ಬೀಜಗಳ ಹತೋಟಿ: ಇತ್ತೀಚಿನ ದಿನಗಳಲ್ಲಿ ಭತ್ತ ಕೊಯ್ಲು ಯಂತ್ರದ ಮೂಲಕ ಕಟಾವು ಮಾಡುವುದರಿಂದ ಸಾಕಷ್ಟು ಪ್ರಮಾಣದ ಭತ್ತದ ಬೀಜಗಳು ಉದುರಿ ಗದ್ದೆಯಲ್ಲಿರುತ್ತವೆ, ಹೀಗಾಗಿ ಈ ಬೀಜಗಳು ಗದ್ದೆಯಲ್ಲಿದ್ದು ಬೇಸಿಗೆ ಹಂಗಾಮಿನಲ್ಲಿ ಭತ್ತ ಬೆಳೆಯುವಾಗ ಮೊಳಕೆಯೊಡೆದು ಬೇಸಿಗೆ ಹಂಗಾಮಿನಲ್ಲಿ ಬೆಳೆದ ಇತರೆ ತಳಿಯೊಂದಿಗೆ ಬೆರಕೆಯಾಗುವುದರಿಂದ ಮುಂಜಾಗ್ರತೆ ಕ್ರಮವಾಗಿ ಉತ್ತಮ ಭೂಮಿ ಸಿದ್ಧತೆ ಅತ್ಯಗತ್ಯ.

ಆದ್ದರಿಂದ, ಮುಂಗಾರು ಹಂಗಾಮಿನ ಭತ್ತ ಕಟಾವು ಮಾಡಿದ ತಕ್ಷಣ ಗದ್ದೆಯಲ್ಲಿರುವ ತೇವಾಂಶ ಬಳಸಿಕೊಂಡು ನೇಗಿಲು ಅಥವಾ ಟ್ರ್ಯಾಕ್ಟರ್‌ನಿಂದ ಒಂದು ಸಾರಿ ಉಳುಮೆ ಮಾಡಿ ನಂತರ ನೀರು ನಿಲ್ಲಿಸಿ, ಭೂಮಿ ಸುಮಾರು 8-10 ದಿನಗಳವರೆಗಾದರೂ ಕೊಳೆಯಲು ಬಿಡಬೇಕು, ಹೀಗೆ ಮಾಡುವುದರಿಂದ ಮುಂಗಾರು ಹಂಗಾಮಿನ ಭತ್ತದ ಬೀಜಗಳು ಮೊಳಕೆಯೊಡೆಯುತ್ತವೆ.

ನಂತರ ಮತ್ತೊಮ್ಮೆ ಟ್ರ್ಯಾಕ್ಟರ್‌ನಿಂದ ರೊಳ್ಳೆ ಹೊಡೆದು ಮೊಳಕೆಯೊಡೆದ ಭತ್ತವನ್ನು ಭೂಮಿಗೆ ಸೇರಿಸುವುದು. ಇದರಿಂದ ಬೇಸಿಗೆ ಭತ್ತದಲ್ಲಿ ಇತರೆ ಭತ್ತದ ಬೀಜಗಳ ಮಿಶ್ರಣವಾಗುವುದನ್ನು ತಡೆಯಬಹುದು.

ಯಂತ್ರಚಾಲಿತ ನಾಟಿ, ಕೂರಿಗೆ ಬಿತ್ತನೆಯಿಂದ ಕೃಷಿ ವೆಚ್ಚಗಳನ್ನು ಗಣನೀಯವಾಗಿ ಕಡಿಮೆ ಮಾಡಬಹುದಾಗಿರುವುದರಿಂದ ತಮ್ಮ ತಮ್ಮ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳುವಂತೆ ಜಂಟಿ ಕೃಷಿ ನಿರ್ದೇಶಕರು ತಿಳಿಸಿರುತ್ತಾರೆ.

# ಅಂಗನವಾಡಿ ಕಾರ್ಯಕರ್ತೆಯರ ಅಹೋರಾತ್ರಿ ಅನಿರ್ದಿಷ್ಟ ಧರಣಿ ಸತ್ಯಾಗ್ರಹ

## ಸಾವಿರಾರು ಕಾರ್ಯಕರ್ತೆಯರು ಬೆಂಗಳೂರಿಗೆ ಲಗ್ಗೆ, ಚಳಿಯನ್ನೂ ಲೆಕ್ಕಿಸದೇ ಹೋರಾಟದಲ್ಲಿ ಭಾಗಿ



ದಾವಣಗೆರೆ, ಫೆ. 3- ಗೌರವ ಧನ ಹೆಚ್ಚಳ ಮತ್ತು ಆರನೇ ಗ್ಯಾರಂಟಿ ಜಾರಿಗೆ ಒತ್ತಾಯಿಸಿ, ಎಐಟಿಯುಸಿ ಸಂಯೋಜಿತ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಶನ್ ಸಂಘಟನೆಯಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ಆರಂಭವಾಗಿದೆ.

ಸತ್ಯಾಗ್ರಹ ಚಳವಳಿಯಲ್ಲಿ ದಾವಣಗೆರೆ ಜಿಲ್ಲೆಯಿಂದಲೂ ಸುಮಾರು 2000 ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ರಾಜ್ಯ ಕಾರ್ಯದರ್ಶಿ ಆವರಗೆರೆ ಚಂದ್ರು ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್. ಎಸ್.ಮಲ್ಲಮ್ಮ ನೇತೃತ್ವದಲ್ಲಿ ಭಾಗವಹಿಸಿ ಹೋರಾಟಕ್ಕೆ ಬಲ ತುಂಬಿದರು.

ಗೌರವ ಧನ ಹೆಚ್ಚಿಸುವುದು ಸೇರಿದಂತೆ, ತಮ್ಮ ಇತರೆ ಬೇಡಿಕೆಗಳಾದ ಸುಪ್ರೀಂಕೋರ್ಟ್ ತೀರ್ಪಿನಂತೆ ನಿವೃತ್ತರಾದ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಗ್ರಾಚ್ಯುಟಿ ನೀಡಬೇಕು, ಗುಜರಾತ್ ಹೈಕೋರ್ಟ್ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನೀಡಿರುವ ನಿರ್ದೇಶನದಂತೆ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸೇವೆಯನ್ನು 'ನಾಗರಿಕ ಸೇವೆ' ಎಂಬುದಾಗಿ ಪರಿಗಣಿಸಿ, ಕನಿಷ್ಠ ವೇತನ ನಿಗದಿಪಡಿಸಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿ, ಈ ಹೋರಾಟ ನಡೆಯುತ್ತಿದೆ.

ಮುಂಬರುವ ರಾಜ್ಯ ಬಜೆಟ್‌ನಲ್ಲಿ ಕನಿಷ್ಠ ವೇತನ ನಿಗದಿಪಡಿಸಬೇಕು, ರಾಜ್ಯ ಸರ್ಕಾರದ ಆರನೇ ಗ್ಯಾರಂಟಿಯಾಗಿ ಚುನಾವಣಾ ಪೂರ್ವದಲ್ಲಿ ನೀಡಿದ ಭರವಸೆಯಂತೆ ಕಾರ್ಯಕರ್ತೆಯರಿಗೆ ಮಾಸಿಕ 15000 ರೂ. ಮತ್ತು ಸಹಾಯಕಿಯರಿಗೆ ಮಾಸಿಕ 10000 ರೂ. ಗೌರವ ಧನ ನೀಡಬೇಕು, ಗ್ರಾಚ್ಯುಟಿ ಸೌಲಭ್ಯ ಜಾರಿಗೊಳಿಸಬೇಕು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಕ್ರಮವಾಗಿ 'ಸಿ' ಮತ್ತು 'ಡಿ' ದರ್ಜೆ ನೌಕರರ ಸ್ಥಾನಮಾನ ನೀಡಬೇಕು ಎಂದು ಹೋರಾಟಗಾರರು ಸರಕಾರವನ್ನು ಆಗ್ರಹಿಸಿದರು.

ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಿ.ಎ.ವಿಜಯಭಾಸ್ಕರ್, ಅಂಗನವಾಡಿ ಫೆಡರೇಶನ್‌ನ ರಾಜ್ಯಾಧ್ಯಕ್ಷ ಬಿ.ಅಮ್ಜದ್, ಪ್ರಧಾನ ಕಾರ್ಯದರ್ಶಿ ಜಯಮ್ಮ ಮತ್ತಿತರರು ಹೋರಾಟದ ಮುಂದಾಳತ್ವ ವಹಿಸಿದ್ದರು.

# ಜನವರಿಯಲ್ಲಿ ಉತ್ಪಾದನಾ ವಲಯದ ಬೆಳವಣಿಗೆ ಆರು ತಿಂಗಳಲ್ಲೇ ಹೆಚ್ಚು

ನವದೆಹಲಿ, ಫೆ 3 - ಜನವರಿಯಲ್ಲಿ ಉತ್ಪಾದನಾ ವಲಯದ ಬೆಳವಣಿಗೆ ಆರು ತಿಂಗಳಲ್ಲೇ ಅತಿ ಹೆಚ್ಚಾಗಿದೆ. ಇದರೊಂದಿಗೆ 2025 ರಲ್ಲಿ ಕೈಗಾರಿಕಾ ವಲಯ ಉತ್ತಮ ಆರಂಭ ಕಂಡಿದೆ. ಹೆಚ್.ಎಸ್.ಬಿ.ಸಿ. ಉತ್ಪಾದನಾ ಸೂಚ್ಯಂಕದ ಪ್ರಕಾರ ಜನವರಿಯಲ್ಲಿ ಉತ್ಪಾದನಾ ವಲಯದ ಬೆಳವಣಿಗೆ 57.7 ರಷ್ಟಿದೆ. ಡಿಸೆಂಬರ್ ತಿಂಗಳಲ್ಲಿ ಇದು 56.4 ರಷ್ಟಿತ್ತು. ರಫ್ತು ವಲಯದಲ್ಲಿ ಗಣನೀಯ ಚೇತರಿಕೆ ಕಂಡಿರುವುದು ಇದಕ್ಕೆ ಕಾರಣವಾಗಿದೆ.

ಸೂಚ್ಯಂಕದಲ್ಲಿ 50 ಕ್ಕಿಂತ ಹೆಚ್ಚು ಅಂಕ ಇರುವುದು ವಿಸ್ತರಣೆ ಹಾಗೂ ಕಡಿಮೆ ಅಂಕ ಇರುವುದು ಕುಗ್ಗುವುದನ್ನು ತೋರಿಸುತ್ತದೆ.

# ಸಂಶೋಧನೆ, ಎ.ಐ.ಗೆ 20 ಸಹಸ್ರ ಕೋಟಿ

## ಭಾರತಕ್ಕೆ ಇನ್ನಷ್ಟು ಕ್ರಮಗಳ ಅಗತ್ಯವಿದೆ ಎಂದ ಉದ್ಯಮ ವಲಯ

ನವದೆಹಲಿ, ಫೆ. 3 - 2025 - 26ನೇ ಸಾಲಿನ ಬಜೆಟ್‌ನಲ್ಲಿ ಕೃತಕ ಬುದ್ಧಿವಂತಿಕೆ (ಎ.ಐ.), ಬಾಹ್ಯಾಕಾಶ ವಲಯ ಹಾಗೂ ಅಟಲ್ ಟಿಂಕರಿಂಗ್ ಲ್ಯಾಬ್ ಸೇರಿದಂತೆ ಸಂಶೋಧನಾ ವಲಯಕ್ಕೆ 20 ಸಹಸ್ರ ಕೋಟಿ ರೂ.ಗಳನ್ನು ನೀಡಲಾಗಿದೆ. ಆದರೆ, ದೇಶದ ಸಂಶೋಧನೆ ಹಾಗೂ ಅಭಿವೃದ್ಧಿ ವಲಯಕ್ಕೆ ಇನ್ನಷ್ಟು ಕ್ರಮಗಳ ಅಗತ್ಯವಿದೆ ಎಂದು ಉದ್ಯಮ ವಲಯದಿಂದ ಅಭಿಪ್ರಾಯ ವ್ಯಕ್ತವಾಗುತ್ತಿದೆ.

ಖಾಸಗಿ ವಲಯದ ಸಹಭಾಗಿತ್ವದಲ್ಲಿ ಸಂಶೋಧನೆಗೆ ಉತ್ತೇಜನ ನೀಡಲು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ 20,000 ಕೋಟಿ ರೂ.ಗಳನ್ನು ನೀಡಲಾಗಿದೆ. ಮುಂದಿನ ಐದು ವರ್ಷಗಳಲ್ಲಿ ಯುವ ಮನಸ್ಸುಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು 50 ಸಾವಿರ ಅಟಲ್ ಟಿಂಕರಿಂಗ್ ಲ್ಯಾಬ್‌ಗಳನ್ನು ಸ್ಥಾಪಿಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಹೇಳಿದ್ದಾರೆ.

ಸೀತಾರಾಮನ್ ಅವರ ಈ ಕ್ರಮ ದೇಶದ ಸಂಶೋಧನೆ ಮತ್ತು ಅಭಿವೃದ್ಧಿ ವ್ಯವಸ್ಥೆ ಬಲಗೊಳಿಸುವಲ್ಲಿ ಮಹತ್ವದ ಕ್ರಮವಾಗಿದೆ ಎಂದು ವಾಧ್ವಾನಿ ಇನ್ನೋವೇಶನ್ ನೆಟ್‌ವರ್ಕ್ ವ್ಯವಸ್ಥಾಪಕ ನಿರ್ದೇಶಕ ಶ್ರೀಶೇಂದು ಮುಖರ್ಜಿ ತಿಳಿಸಿದ್ದಾರೆ.

ಯುವ ಮನಸ್ಸುಗಳಲ್ಲಿ ವೈಜ್ಞಾನಿಕ ಮನೋಭಾವ ಬಿತ್ತುವ ಮೂಲಕ ಕೃತಕ ಬುದ್ಧಿವಂತಿಕೆ, ಡಿಜಿಟಲ್ ರೂಪಾಂತರಣ ಹಾಗೂ ಪ್ರವರ್ಧಮಾನಕ್ಕೆ ಬರುತ್ತಿರುವ ತಂತ್ರಜ್ಞಾನದಲ್ಲಿ ಭಾರತದ ಸ್ಥಾನ ಬಲಗೊಳಿಸಲು ನೆರವಾಗಲಿದೆ ಎಂದು ಮುಖರ್ಜಿ ಹೇಳಿದ್ದಾರೆ.

ಕೈಗಾರಿಕಾ - ಶಿಕ್ಷಣ ವಲಯದ ಸಹಭಾಗಿತ್ವ, ಸಂಶೋಧನೆಯ ವಾಣಿಜ್ಯೀಕರಣ ಹಾಗೂ ಹೂಡಿಕೆ ಮಾದರಿಗಳನ್ನು ವಿಸ್ತರಿಸುವಲ್ಲಿ ಸರ್ಕಾರದ ಕ್ರಮಗಳು ಉತ್ತೇಜನಕಾರಿ ಆಗಿವೆ ಎಂದವರು ತಿಳಿಸಿದ್ದಾರೆ.

5 ರಾಷ್ಟ್ರೀಯ ಉನ್ನತ ಕೌಶಲ್ಯ ಕೇಂದ್ರಗಳ ಸ್ಥಾಪನೆ ಹಾಗೂ 500 ಕೋಟಿ ರೂ. ವೆಚ್ಚದಲ್ಲಿ ಎ.ಐ. ಆಧರಿತ ಶಿಕ್ಷಣ ಕ್ರಮಗಳು ಭವಿಷ್ಯಕ್ಕಾಗಿ ಉದ್ಯೋಗಿಗಳನ್ನು ಸಿದ್ಧಪಡಿಸಲು ನೆರವಾಗಲಿದೆ ಎಂದು ವಾದ್ವಾನಿ ಫೌಂಡೇಶನ್ ಸಿಇಒ ಅಜಯ್ ಕಾಳೆ ತಿಳಿಸಿದ್ದಾರೆ.

ಸಣ್ಣ ರಿಯಾಕ್ಟರ್‌ಗಳ ಸ್ಥಾಪನೆಗೆ ಕೇಂದ್ರ ಸರ್ಕಾರ 20,000 ಕೋಟಿ ರೂ.ಗಳ ಹೂಡಿಕೆ ಮಾಡಲಿರುವುದು ಈ ವಲಯದಲ್ಲಿ ಹೆಚ್ಚಿನ ಅವಕಾಶ ತರಲಿದೆ ಎಂದು ಉದ್ಯಮ ವಲಯದಲ್ಲಿ ಹೇಳಲಾಗುತ್ತಿದೆ. ಆದರೆ ಹಸಿರು ಹಾಗೂ ನವೀಕರಣ ಇಂಧನ ವಲಯದಲ್ಲಿ ಹೆಚ್ಚಿನ ಬೆಳವಣಿಗೆ ಕಾಣಲು ಇನ್ನಷ್ಟು ಕ್ರಮಗಳ ಅಗತ್ಯವಿದೆ ಎಂದು ಎಸ್‌ಎಇಎಲ್‌ನ ಸಿ. ಎಫ್.ಒ. ದುಶ್ಯಂತ ಚಚ್ರ ಹೇಳಿದ್ದಾರೆ.

ಸಂಶೋಧನಾ ವಲಯಕ್ಕೆ ಹೆಚ್ಚಿನ ಅನುದಾನ, ನಿಯಂತ್ರಣ ಸಡಿಲಿಕೆ ಹಾಗೂ ತೆರಿಗೆ ವಿನಾಯಿತಿ ಸೇರಿದಂತೆ ಹಲವು ಕ್ರಮಗಳ ಮೂಲಕ ಸಂಶೋಧನಾ ವಲಯದಲ್ಲಿ ಖಾಸಗಿ ಸಹಭಾಗಿತ್ವಕ್ಕೆ ಸರ್ಕಾರ ಹೆಚ್ಚಿನ ಉತ್ತೇಜನ ನೀಡುವ ನಿರೀಕ್ಷೆ ಇದೆ ಎಂದವರು ಹೇಳಿದ್ದಾರೆ.

ಖಾಸಗಿ ವಲಯ ಸಂಶೋಧನೆಯಲ್ಲಿ ತೊಡಗಲು ಇನ್ನಷ್ಟು ತೆರಿಗೆ ವಿನಾಯಿತಿಗೆ ಅವಕಾಶ ಇದೆ ಎಂದು ಚೆನ್ನೈನ ಗ್ರೇಟ್ ಲೇಕ್ಸ್ ಇನ್‌ಸ್ಟಿ ಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಪ್ರೊ. ವಿಶ್ವನಾಥನ್ ಅಯ್ಯರ್ ಹೇಳಿದ್ದಾರೆ.

ಕಾರ್ಪೊರೇಟ್ ವಲಯ ಸಂಶೋಧನೆಯಲ್ಲಿ ಹಣ ಹೂಡಿಕೆ ಮಾಡುವಂತೆ ಉತ್ತೇಜನ ನೀಡುವುದು ಹಾಗೂ ಸಂಶೋಧನೆಯಲ್ಲಿ ಖಾಸಗಿ ಸಹಭಾಗಿತ್ವದಿಂದ ಹೆಚ್ಚಿನ ನೆರವು ಸಿಗಲಿದೆ. ಹೆಚ್ಚಿನ ತೊಡಕುಗಳಿರುವ ಹಾಗೂ ಹೆಚ್ಚಿನ ಲಾಭವಿರುವ ಸಂಶೋಧನಾ ವಲಯದಲ್ಲಿ ಸರ್ಕಾರ ಇನ್ನಷ್ಟು ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ಅದರಲ್ಲೂ ಉನ್ನತ ತಂತ್ರಜ್ಞಾನ ಹಾಗೂ ರಕ್ಷಣಾ ವಲಯದಲ್ಲಿ ಕ್ರಮಗಳನ್ನು ತೆಗೆದುಕೊಳ್ಳುವುದರಿಂದ ಆವಿಷ್ಕಾರದಲ್ಲಿ ಹೆಚ್ಚಿನ ಫಲ ಸಿಗಲಿದೆ ಎಂದು ಅಯ್ಯರ್ ಹೇಳಿದ್ದಾರೆ.

ಭಾರತ ಈ ಬಾರಿಯ ಬಜೆಟ್‌ನಲ್ಲಿ ಸಂಶೋಧನೆಗೆ ಹೆಚ್ಚಿನ ಅನುದಾನ ನೀಡಿದೆ. ಆದರೆ ಚೀನಾ, ಜಪಾನ್ ಮತ್ತು ದಕ್ಷಿಣ ಕೊರಿಯಾದಂತಹ ದೇಶಗಳಿಗೆ ಹೋಲಿಕೆ ಮಾಡಿದರೆ ಇದು ಕಡಿಮೆ ಯಾಗಿದೆ ಎಂದು ಎಂಐಟಿ ವರ್ಲ್ಡ್ ಪೀಸ್ ಯೂನಿ ವರ್ಸಿಟಿಯ ವಿಜ್ಞಾನಿ ಭರತ್ ಕಾಳೆ ಹೇಳಿದ್ದಾರೆ.

ಭಾರತೀಯ ಉದ್ಯಮ ಸಹ ಸಂಶೋಧನೆಗೆ ಮಾಡುವ ವೆಚ್ಚ ತೀರ ಕಡಿಮೆ ಇದೆ. ಸಂಶೋಧನೆ ಹಾಗೂ ಅಭಿವೃದ್ಧಿಯಲ್ಲಿ ಉದ್ಯಮ ಇನ್ನಷ್ಟು ಭಾಗಿಯಾಗಬೇಕಿದೆ ಎಂದವರು ಹೇಳಿದ್ದಾರೆ.

ಕಳೆದ ವರ್ಷ ಕೇಂದ್ರ ಸರ್ಕಾರ ಸಂಶೋಧನೆ ಹಾಗೂ ಅಭಿವೃದ್ಧಿಗೆ 2,819 ಕೋಟಿ ರೂ. ನೀಡಿತ್ತು. ಈ ಬಾರಿ ಅದು 23,290 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಈ ಬೃಹತ್ ಹೆಚ್ಚಳದಿಂದ ವಿಜ್ಞಾನ ಯೋಜನೆಗಳಿಗೆ ನೆರವು ಸಿಗಲಿದೆ. ಅದರಲ್ಲೂ ಕ್ವಾಂಟಮ್ ಕಂಪ್ಯೂಟರ್, ಸೂಪರ್ ಕಂಪ್ಯೂಟರ್ ಹಾಗೂ ಬಾಹ್ಯಾಕಾಶ ವಲಯಕ್ಕೆ ಹೆಚ್ಚಿನ ನೆರವಾಗಲಿದೆ ಎಂದು ಶೂಲಿನಿ ಯೂನಿವರ್ಸಿಟಿಯ ಸಂಶೋಧನಾ ವಲಯದ ಡೀನ್ ಸೌರಬ್ ಕುಲಶ್ರೇಷ್ಠ ತಿಳಿಸಿದ್ದಾರೆ.

# ಹರಿಹರ : ಹೆಚ್ಚುವರಿ ಬಸ್ಸಿಗೆ ಆಗ್ರಹಿಸಿ ತಡರಾತ್ರಿ ಪ್ರತಿಭಟನೆ




ಹರಿಹರ, ಫೆ.3- ನಗರದ ಕೆ.ಎಸ್.ಆರ್. ಟಿ.ಸಿ ಬಸ್ ನಿಲ್ದಾಣದಲ್ಲಿ ಬೆಂಗಳೂರಿಗೆ ಹೋಗಲು ಬಸ್ಸಿಗೆ ಕಾಯುತ್ತಿದ್ದ ಮಹಿಳಾ ಪ್ರಯಾಣಿಕರು ಹೆಚ್ಚುವರಿ ಬಸ್ ಬಿಡುವಂತೆ ಆಗ್ರಹಿಸಿ, ಬಸ್ಸಿಗೆ ಅಡ್ಡಗಟ್ಟಿ ಭಾನುವಾರ ತಡರಾತ್ರಿ ಪ್ರತಿಭಟನೆ ನಡೆಸಿದರು.

ಮೂರು, ನಾಲ್ಕು ತಾಸುಗಳಿಂದ ಬಸ್ಸಿಗೆ ಕಾಯುತ್ತಿದ್ದ ಪ್ರಯಾಣಿಕರು, ತಾಳ್ಮೆ ಕಳೆದುಕೊಂಡು ನಿಲ್ದಾಣ ನಿಯಂತ್ರಕರ ಬಳಿ ಹೆಚ್ಚುವರಿ ಬಸ್ ಬಿಡುವಂತೆ ಒತ್ತಾಯಿಸಿದರು.

ಈಗಾಗಲೇ 12 ಹೆಚ್ಚುವರಿ ಬಸ್ಸುಗಳನ್ನು ಬಿಟ್ಟಿದ್ದೇವೆ ಎಂದು ನಿಲ್ದಾಣ ನಿಯಂತ್ರಕ ತಿಳಿಸಿದರೂ ಕೂಡ ಹೆಚ್ಚಿನ ಬಸ್ ಬಿಡಲೇ ಬೇಕು ಎಂದು ಪಣತೊಟ್ಟು ವಾಗ್ವಾದ ನಡೆಸಿದರು.

ಪ್ರಯಾಣಿಕರ ಮನವಿಗೆ ಸ್ಪಂದಿಸದ ನಿಲ್ದಾಣ ನಿಯಂತ್ರಕರ ವಿರುದ್ಧ ಜಗಳಕ್ಕೆ ಮುಗಿಬಿದ್ದ ಜನರು, ನಿಲ್ದಾಣದ ಎರಡು ಬದಿಯ ಗೇಟ್ ಬಳಿ ಬೇರೆ ಮಾರ್ಗಕ್ಕೆ ಹೋಗುವ ಬಸ್ಸಗಳನ್ನು ಅಡ್ಡಗಟ್ಟಿ ಆಕ್ರೋಶ ಹೊರಹಾಕಿದರು.

ಪ್ರಯಾಣಿಕರ ಬೇಡಿಕೆಗೆ ಮಣಿಯದ ಅಧಿಕಾರಿಗಳು, ಹೆಚ್ಚುವರಿ ಬಸ್ ಬಿಡುವಲ್ಲಿ ನಿರಾಕರಿಸಿದರು. ಈ ವೇಳೆ ಕೆಲವು ಪ್ರಯಾಣಿಕರು ಮರಳಿ ಮನೆಗೆ ಹೋದರು, ಇನ್ನೂ ಕೆಲವರು ಬಂದ ಬಸ್ ಹತ್ತಿ ಹೋದ ದೃಶ್ಯ ಕಂಡು ಬಂದಿತು.

**ಬಲವಂತಪಡಿಸಿ ಗಂಡನ ಕಿಡ್ನಿ ಮಾರಾಟ**

# 10 ಲಕ್ಷ ರೂ.ಗಳೊಂದಿಗೆ ಪ್ರಿಯಕನೊಂದಿಗೆ ಪತ್ನಿ ಪರಾರಿ

ದಕೊಲ್ಕತಾ, ಫೆ. 3 - ಮಗಳ ಶಿಕ್ಷಣಕ್ಕಾಗಿ ಕಿಡ್ನಿ ಮಾರುವಂತೆ ಗಂಡನ ಮೇಲೆ ಒತ್ತಡ ಹೇರಿದ್ದ ಪತ್ನಿ, ಕಿಡ್ನಿ ಮಾರಿ ಬಂದ 10 ಲಕ್ಷ ರೂ.ಗಳೊಂದಿಗೆ ತನ್ನ ಪ್ರಿಯಕರನ ಜೊತೆ ಪರಾರಿಯಾದ ಘಟನೆ ಪಶ್ಚಿಮ ಬಂಗಾಳದ ಅವರ ಜಿಲ್ಲೆಯಲ್ಲಿ ನಡೆದಿದೆ.

ಸಂಕ್ರೈಲ್ ಎಂಬಲ್ಲಿ ದಂಪತಿ ನೆಲೆಸಿದ್ದರು. ಈ ಬಗ್ಗೆ ಗಂಡನ ಮನೆಯವರು ದೂರು ದಾಖಲಿಸಿದ್ದು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಕಿಡ್ನಿ ಮಾರುವ ಮೂಲಕ ಹಣ ಪಡೆದು ಮನೆಯ ಪರಿಸ್ಥಿತಿ ಉತ್ತಮಗೊಳಿಸಬೇಕು ಹಾಗೂ 12 ವರ್ಷದ ಮಗಳನ್ನು ಒಳ್ಳೆಯ ಶಾಲೆಗೆ ಸೇರಿಸಬೇಕು ಎಂದು ಪತ್ನಿ ಕಳೆದ ಒಂದು ವರ್ಷದಿಂದ ಗಂಡನಿಗೆ ಒತ್ತಾಯಿಸುತ್ತಿದ್ದಳು ಎಂದು ಹೇಳಲಾಗಿದೆ.

ಪತ್ನಿ ಮಾತನ್ನು ನಂಬಿದ ಗಂಡ ಹತ್ತು ಲಕ್ಷ ರೂ.ಗಳಿಗೆ ಕಿಡ್ನಿ ಮಾರಲು ಖರೀದಿದಾರನೊರ್ವನ ಜೊತೆ ಒಪ್ಪಂದ ಮಾಡಿಕೊಂಡ. ಕಳೆದ ತಿಂಗಳು ಗಂಡ ಕಿಡ್ನಿ ಮಾರಿ ಹಣ ಪಡೆದಿದ್ದ.

ತ್ವರಿತವಾಗಿ ಚೇತರಿಸಿಕೊಳ್ಳಲು ಮನೆಯಿಂದ ಹೊರಗೆ ಹೋಗದಂತೆ ಪತ್ನಿ ಹೇಳಿದ್ದಳು. ಒಂದು ದಿನ ಪತ್ನಿ ಇಡೀ 10 ಲಕ್ಷ ರೂ. ನಗದು ತೆಗೆದುಕೊಂಡು ಕಾಣೆಯಾಗಿದ್ದಾಳೆ ಎಂದು ದೂರಿನಲ್ಲಿ ಹೇಳಲಾಗಿದೆ. ಪತ್ನಿ ಒಂದು ಇಡೀ ದಿನ ಮನೆಗೆ ಮರಳಲಿಲ್ಲ ನಂತರ 10 ಲಕ್ಷ ರೂಪಾಯಿ ಹಾಗೂ ಬೀರುವಿನ ಲ್ಲಿದ್ದ ಇನ್ನೂ ಸ್ವಲ್ಪ ಹಣ ಕಾಣೆಯಾಗಿದ್ದು ಕಂಡು ಬಂತು ಎಂದು ದೂರಿನಲ್ಲಿ ಹೇಳಲಾಗಿದೆ. ನಂತರ ಕುಟುಂಬ ಹುಡುಕಿದಾಗ ಕೊಲ್ಕೊತ್ತಾ ಉತ್ತರದ ಬ್ಯಾರಕ್‌ಪೋರ್‌ದಲ್ಲಿ ಪತ್ನಿ ಆಕೆಯ ಪ್ರಿಯಕರ ಎನ್ನಲಾದ ಪುರುಷನ ಜೊತೆ ಇದ್ದಿದ್ದು ಕಂಡು ಬಂತು. ಉಭಯರು ಫೇಸ್‌ಬುಕ್ ಮೂಲಕ ಪರಿ ಚಯ ಬೆಳೆಸಿದ್ದರು. ಒಂದು ವರ್ಷದಿಂದ ಸಂಪ ರ್ಕದಲ್ಲಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ.

ಪತಿ, ಅತ್ತೆ ಹಾಗೂ ಮಗಳು ಬ್ಯಾರಕ್‌ಪೋರ್‌ಗೆ ತೆರಳಿ ಮಹಿಳೆ ವಾಪಸ್ ಬರುವಂತೆ ಕರೆದರು. ಆದರೆ ಮನೆಯಿಂದ ಹೊರಗೆ ಬರಲು ಪತ್ನಿ ಸಿದ್ಧವಿರಲಿಲ್ಲ.

15 ವರ್ಷಗಳ ಕಾಲ ವೈವಾಹಿಕ ಸಂಬಂಧದ ವೇಳೆ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಿರುವುದಾಗಿ ಪತ್ನಿ ಪ್ರಕರಣ ದಾಖಲಿಸಲಿದ್ದಾಳೆ ಹಾಗೂ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಲಿದ್ದಾಳೆ ಎಂದು ಪ್ರಿಯಕರ ತಿಳಿಸಿರುವುದಾಗಿ ದೂರಿನಲ್ಲಿ ಹೇಳಲಾಗಿದೆ.

ನಂತರ ಪತ್ರಕರ್ತರೊಂದಿಗೆ ಮಾತನಾಡಿರುವ ಪ್ರಿಯಕರ, ಮಹಿಳೆ ತನ್ನ ಗಂಡನ ಮನೆಯ ಏನನ್ನೂ ತಂದಿಲ್ಲ. ತಾನು ಉಳಿಸಿದ ಹಣವನ್ನಷ್ಟೇ ತಂದಿದ್ದಾಳೆ ಎಂದು ಹೇಳಿದ್ದಾನೆ. ದೂರು ಹಾಗೂ ಗಂಡನ ಕುಟುಂಬದವರು ಪ್ರಿಯಕರನ ಜೊತೆ ಮಾತನಾಡಿದ ವಿಡಿಯೋಗಳನ್ನು ಪರಿಶೀಲಿಸಲಾಗುತ್ತಿದೆ. ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

# ದೈನಂದಿನ ಸಮಸ್ಯೆಗಳಿಗೆ ಡಿಜಿಟಲ್ ಡೂಪ್ಲಿಕೇಟ್‌ಗಳಿಂದ ಪರಿಹಾರ

ಕ್ಯಾನ್‌ಬೆರ, ಫೆ. 3 - ಫೆಸಿಫಿಕ್ ಸಮುದ್ರದಲ್ಲಿರುವ ಪುಟ್ಟ ದ್ವೀಪ ದೇಶವಾದ ತುವಲು ಬದಲಾಗುತ್ತಿರುವ ಹವಾಮಾನದ ಕಾರಣದಿಂದ ಅಸ್ತಿತ್ವದ ಸವಾಲು ಎದುರಿಸುತ್ತಿದೆ. ಈ ದೀಪ ತನ್ನನ್ನು ರಕ್ಷಿಸಿಕೊಳ್ಳಲು ಸಾಂಪ್ರದಾಯಿಕ ಮಾರ್ಗದ ಜೊತೆಗೆ ಡಿಜಿಟಲ್ ಮಾರ್ಗವನ್ನೂ ಹಿಡಿದಿದೆ.

ಇಡೀ ದೇಶವನ್ನು ಡಿಜಿಟಲ್ ಮೂಲಕ ಸೆರೆ ಹಿಡಿಯುವ ಪ್ರಯತ್ನ ನಡೆದಿದೆ. ದೇಶದ ಭೌತಿಕ ಸ್ವರೂಪದಿಂದ ಹಿಡಿದು ಅಲ್ಲಿನ ಸಂಸ್ಕೃತಿ - ಕಲೆ ಎಲ್ಲವನ್ನು ಡಿಜಿಟಲೀಕರಣ ಮಾಡಿ ಸಂರಕ್ಷಿಸಲಾಗುತ್ತಿದೆ.

ಅಷ್ಟೇ ಅಲ್ಲದೆ ಡಿಜಿಟಲ್ ಡೂಪ್ಲಿಕೇಟ್ ಮಾಡಿದ ಈ ದ್ವೀಪವನ್ನು ಮೆಟಾವರ್ಸ್ ಜಗತ್ತಿನಂತೆ ರೂಪಿಸಲು ಉದ್ದೇಶಿಸಲಾಗಿದೆ. ಮುಂದೊಂದು ಕಾಲದಲ್ಲಿ ಈ ದ್ವೀಪ ಸಮುದ್ರದಲ್ಲಿ ಮುಳುಗಿದರೂ ಸಹ ಇಲ್ಲಿನ ಜನರು ಡಿಜಿಟಲ್ ಮೂಲಕ ತಮ್ಮ ದೇಶದ ಚಿತ್ರಣವನ್ನು ಅನುಭವಿಸಬಹುದು. ಅಲ್ಲಿ ಬದುಕುವ ಅನುಭವ ಪಡೆಯಬಹುದು.

ಇನ್ನೂ ಮುಂದುವರೆದು ಈ ಡಿಜಿಟಲ್ ದೇಶಕ್ಕೆ ವೀಸಾ ಒದಗಿಸಲು ಸಿದ್ಧತೆ ನಡೆದಿದೆ. ಭೌತಿಕವಾಗಿ ದೇಶಕ್ಕೆ ಸಾರ್ವಭೌಮತ್ವ ಇರುವ ರೀತಿಯಲ್ಲಿ ಡಿಜಿಟಲ್ ದೇಶಕ್ಕೂ ಸಾರ್ವಭೌಮತ್ವ ನೀಡಬೇಕು ಎಂಬ ಬೇಡಿಕೆ ಮುಂದಿಡಲಾಗುತ್ತಿದೆ.

ಅಪ್ಪಟ ಭೌತಿಕ ಪ್ರಪಂಚದ ರೀತಿಯಲ್ಲೇ ಡಿಜಿಟಲ್ ಪ್ರಪಂಚವನ್ನು ಸೃಷ್ಟಿಸುವುದನ್ನು ಡಿಜಿಟಲ್ ಅವಳಿಗಳು ಎಂದು ಕರೆಯಲಾಗುತ್ತದೆ. ವಿಜ್ಞಾನಿಗಳು ಅಣುಗಳಿಂದ ಹಿಡಿದು ಬೃಹತ್ ಕಟ್ಟಡಗಳು ಹಾಗೂ ಇಡೀ ಗ್ರಹಗಳ ಡಿಜಿಟಲ್ ಅವಳಿಗಳನ್ನು ಸೃಷ್ಟಿಸುತ್ತಿದ್ದಾರೆ.

ಕೇವಲ ಭೌತಿಕ ವಸ್ತುಗಳಷ್ಟೇ ಅಲ್ಲದೆ ಮನುಷ್ಯರನ್ನೂ ಸಹ ಡಿಜಿಟಲ್ ಅವಳಿಗಳಾಗಿ ರೂಪಿಸಲಾಗುತ್ತಿದೆ. ಇದಕ್ಕೆ ಡಿಜಿಟಲ್ ಡಾಪಲ್‌ಗ್ಯಾಂಗರ್ ಎಂದು ಹೆಸರಿಡಲಾಗಿದೆ. ಹಲವಾರು ಉದ್ಯಮಗಳು ಈಗ ಡಿಜಿಟಲ್ ಡಬಲ್‌ಗಳನ್ನು ಕ್ರೀಡಾ ಸಾಧನೆ ಉತ್ತಮಪಡಿಸುವುದರಿಂದ ಹಿಡಿದು ಆರೋಗ್ಯ ಹಾಗೂ ಕೆಲಸದ ಸುರಕ್ಷತೆಗಾಗಿ ಬಳಸುತ್ತಿವೆ.

ಅತ್ಯಾಧುನಿಕ ಪರಿಸರ ಸೆನ್ಸರ್‌ಗಳು, ಕ್ಯಾಮರಾ ವಿಷನ್, ವರ್ಚ್ಯುಯಲ್ ರಿಯಾಲಿಟಿ ಹಾಗೂ ಮಷೀನ್ ಲರ್ನಿಂಗ್ ಮತ್ತು ಕೃತಕ ಬುದ್ಧಿವಂತಿಕೆ ತಂತ್ರಜ್ಞಾನಗಳ ಬೆಳವಣಿಗೆ ಕಾರಣದಿಂದಾಗಿ ಸಂಕೀರ್ಣವಾದ ಡಿಜಿಟಲ್ ಅವಳಿಗಳನ್ನು ರೂಪಿಸುವುದು ಸಾಧ್ಯವಾಗುತ್ತಿದೆ.

ಅತಿ ಕಡಿಮೆ ವೆಚ್ಚದಲ್ಲಿ ಹಾಗೂ ಹೆಚ್ಚು ಅಪಾಯ ಇಲ್ಲದ ರೀತಿಯಲ್ಲಿ ನೈಜ ಜಗತ್ತನ್ನು ಹೋಲುವ ಡಿಜಿಟಲ್ ಅವಳಿಗಳನ್ನು ಸೃಷ್ಟಿಸಲಾಗುತ್ತಿದೆ. ಸೇತುವೆಯೊಂದು ಎಂದು ಎಷ್ಟು ಒತ್ತಡ ಎದುರಿಸುವ ಸಾಮರ್ಥ್ಯ ಹೊಂದಿದೆ ಇಲ್ಲವೇ ನೀರು ಪೂರೈಸುವ ಕೊಳವೆಗಳು ಎಷ್ಟು ಸಾಮರ್ಥ್ಯ ಹೊಂದಿವೆ ಇತ್ಯಾದಿಗಳನ್ನು ಪರಿಶೀಲಿಸಲು ಡಿಜಿಟಲ್ ಅವಳಿಗಳು ಉಪಯುಕ್ತವಾಗಿವೆ.

ಡಿಜಿಟಲ್ ಜಗತ್ತಿನಲ್ಲಿ ಸೇತುವೆ ಇತ್ಯಾದಿ ನಿರ್ಮಿಸಿದ ನಂತರ ಅದು ಯಾವ ರೀತಿ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಪರಿಶೀಲಿಸಲಾಗುತ್ತದೆ. ಆ ಮೂಲಕ ನೈಜವಾಗಿ



ಸೌಲಭ್ಯ ನಿರ್ಮಿಸುವಾಗ ಅಗತ್ಯ ಬದಲಾವಣೆಗಳನ್ನು ತರಲಾಗುತ್ತಿದೆ. ಇದರಿಂದ ಕೋಟ್ಯಂತರ ಹಣ ಉಳಿಯುವ ಜೊತೆಗೆ ಸೇತುವೆಗಳು ಇತ್ಯಾದಿಗಳನ್ನು ಭದ್ರವಾಗಿ ನಿರ್ಮಿಸಲು ಸಾಧ್ಯವಾಗುತ್ತಿದೆ.

ಆದರೆ ಮನುಷ್ಯರ ಡಿಜಿಟಲ್ ಅವಳಿ ಸೃಷ್ಟಿಸುವುದು ಸೇತುವೆಗಳ ನಿರ್ಮಾಣಕ್ಕಿಂತ ಹೆಚ್ಚು ಸಂಕೀರ್ಣವಾಗಿದೆ. ಏಕೆಂದರೆ ಮನುಷ್ಯರು ಸಂಕೀರ್ಣ ಸಾಮಾಜಿಕ ಹಾಗೂ ಭೌತಿಕ ವಾತಾವರಣಗಳಲ್ಲಿ ನೆಲೆಸುತ್ತಾರೆ. ಹಸಿವಿನಿಂದ ಹಿಡಿದು ಬಳಲಿಕೆವರೆಗೆ, ಪ್ರೀತಿಯಿಂದ ಹಿಡಿದು ಕೋಪದವರೆಗೆ ಮನುಷ್ಯ ಪ್ರವೃತ್ತಿ ಬದಲಾಗುತ್ತಾ ಹೋಗುತ್ತದೆ. ಬದಲಾಗುವ ಪರಿಸ್ಥಿತಿಗೆ ಅನುಗುಣವಾಗಿ ಮನುಷ್ಯರು ಸೃಜನಶೀಲತೆಯಿಂದ ಹೊಂದಿಕೊಳ್ಳುತ್ತಾ ಹೋಗುತ್ತಾರೆ.

ಹೀಗಾಗಿ ಮನುಷ್ಯರ ಡಿಜಿಟಲ್ ಅವಳಿ ಸೃಷ್ಟಿಸುವುದು ಅಷ್ಟು ಸುಲಭವಲ್ಲ. ಆದರೂ ಆಧುನಿಕ ತಂತ್ರಜ್ಞಾನದ ಕಾರಣದಿಂದ ಮನುಷ್ಯರ ಡಿಜಿಟಲ್ ಅವಳಿಗಳನ್ನು ಹಲವು ಉಪಯುಕ್ತ ವಿಷಯಗಳಿಗೆ ಬಳಕೆ ಮಾಡಲಾಗುತ್ತಿದೆ.

ಮನುಷ್ಯ ದೇಹದ ವರ್ಚ್ಯುಯಲ್ ಮಾದರಿಗಳನ್ನು ರೂಪಿಸಿ ವೈದ್ಯಕೀಯ ವಲಯದಲ್ಲಿ ಹಲವಾರು ಪ್ರಯೋಗಗಳಿಗೆ ಒಳಪಡಿಸಲಾಗುತ್ತಿದೆ. ಶಸ್ತ್ರಚಿಕಿತ್ಸೆ ಇಲ್ಲವೇ ದೇಹಗಳಿಗೆ ಕೃತಕ ಅಂಗಗಳನ್ನು ಅಳವಡಿಸುವಾಗ ಡಿಜಿಟಲ್ ಡೂಪ್ಲಿಕೇಟ್‌ಗಳು ಅತ್ಯಂತ ಉಪಯುಕ್ತವಾಗಿವೆ.

ಇತ್ತೀಚಿನ ದಿನಗಳಲ್ಲಿ ರೋಗಿಗಳನ್ನು ಹೋಲುವಂತಹ ಡಿಜಿಟಲ್ ಅವಳಿಗಳನ್ನು ಅತ್ಯಂತ ದಕ್ಷವಾಗಿ ರೂಪಿಸಲಾಗುತ್ತಿದೆ. ಇದರಿಂದಾಗಿ ಚಿಕಿತ್ಸೆ ನೀಡುವಾಗ ರೋಗಿಯ ದೇಹ ಯಾವ ರೀತಿ ಸ್ಪಂದಿಸುತ್ತದೆ ಎಂಬುದನ್ನು ಚಿಕಿತ್ಸೆ ನೀಡುವ ಮೊದಲೇ ತಿಳಿದುಕೊಳ್ಳಬಹುದು. ಎಷ್ಟು ಪ್ರಮಾಣದ ಔಷಧಿ ನೀಡಬೇಕು ಹಾಗೂ ಚೇತರಿಕೆಗೆ ಎಷ್ಟೋ ಸಮಯ ಬೇಕಾಗುತ್ತದೆ ಎಂಬೆಲ್ಲಾ ವಿಷಯಗಳನ್ನು ಡಿಜಿಟಲ್ ಡೂಪ್ಲಿಕೇಟ್‌ಗಳ ಮೇಲೆ ಪ್ರಯೋಗ ಮಾಡಿ ತಿಳಿಯಬಹುದು. ಈ ರೀತಿಯ ಹಲವಾರು ಡಿಜಿಟಲ್ ಮನುಷ್ಯರನ್ನು ಔಷಧೀಯ ಪ್ರಯೋಗಗಳಿಗೂ ಬಳಸಲಾಗುತ್ತಿದೆ.

ಇದೇ ತಂತ್ರಜ್ಞಾನವನ್ನು ಇನ್ನಷ್ಟು ವಿಸ್ತರಿಸಿ ಸಾಮಾಜಿಕ ಪ್ರಯೋಗಗಳಿಗೂ ಒಳಪಡಿಸಬಹುದಾಗಿದೆ. ವಾಯುಮಾಲಿನ್ಯ, ಸಾಂಕ್ರಾಮಿಕ ರೋಗ ಇಲ್ಲವೇ ಸುನಾಮಿಯಂತಹ ಆರೋಗ್ಯ ತುರ್ತು ಪರಿಸ್ಥಿತಿಗಳು ಎದುರಾದಾಗ ಯಾವ ರೀತಿ ಸಮಸ್ಯೆಗಳನ್ನು ಎದುರಿಸಬೇಕು ಎಂಬುದನ್ನು ಡಿಜಿಟಲ್ ಮನುಷ್ಯರ ಮೂಲಕ ತಿಳಿಯಲು ಸಾಧ್ಯವಿದೆ.

ಕ್ರೀಡೆಗಳಲ್ಲೂ ಸಹ ಡಿಜಿಟಲ್ ಮನುಷ್ಯರು ಉಪಯುಕ್ತವಾಗಿದ್ದಾರೆ. ಕ್ರೀಡಾಪಟುಗಳ ಡಿಜಿಟಲ್ ಮಾದರಿಯನ್ನು ರೂಪಿಸಿ ಯಾವ ರೀತಿ ಕ್ರೀಡಾ ಸಾಧನೆ ಸುಧಾರಿಸಬಹುದು ಎಂಬ ಪ್ರಯೋಗಗಳನ್ನು ಮಾಡಬಹುದು.

ಕ್ರೀಡಾ ವಿಜ್ಞಾನಿಗಳು ಡಿಜಿಟಲ್ ಕ್ರೀಡಾಪಟುಗಳ ದಿಸೆಯಲ್ಲಿ ಹೆಚ್ಚಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕ್ರೀಡಾಪಟುಗಳ ಸಾಮರ್ಥ್ಯ ಹೆಚ್ಚಿಸಲು ಯಾವ ರೀತಿಯ ವಾತಾವರಣ ಸೂಕ್ತ ಎಂಬುದನ್ನು ಅರಿತುಕೊಳ್ಳುತ್ತಿದ್ದಾರೆ. ಇದರಿಂದಾಗಿ ಕ್ರೀಡಾಪಟುಗಳು ಗಾಯಗಳು ಆಗದ ರೀತಿಯಲ್ಲಿ ಆಡಲು ಹಾಗೂ ಕ್ರೀಡಾ ಸಾಧನೆ ಮಾಡಲು ನೆರವು ಸಿಗುತ್ತದೆ.

ಗ್ರಿಫಿಕ್ ವಿಶ್ವವಿದ್ಯಾಲಯದ ಸಂಶೋಧಕರು ಈ ವಿಷಯದಲ್ಲಿ ಮುಂಚೂಣಿಯಲ್ಲಿದ್ದಾರೆ. ಅವರು ನಿಜವಾದ ಕ್ರೀಡಾಪಟುಗಳ ಡಿಜಿಟಲ್ ಮಾದರಿಗಳನ್ನು ರೂಪಿಸುತ್ತಿದ್ದಾರೆ. ಸಿಎಸ್‌ಐಆರ್‌ಓ ಹಾಗೂ ಆಸ್ಟ್ರೇಲಿಯಾ ಕ್ರೀಡಾ ಆಯೋಗಗಳು ಡಿಜಿಟಲ್ ಮನುಷ್ಯರ ಮೂಲಕ ಈಜುಗಾರರು ಸ್ವಿಮ್ಮಿಂಗ್ ವಿಭಾಗದಲ್ಲಿ ಸಾಧನೆ ಸುಧಾರಿಸುವ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

ಡಿಜಿಟಲ್ ಕೆಲಸಗಾರರೂ ಸಹ ಇದೇ ರೀತಿ ಉಪಯುಕ್ತವಾಗಿದ್ದಾರೆ. ಈ ಡಿಜಿಟಲ್ ಕಾರ್ಮಿಕರನ್ನು ಹಲವಾರು ರೀತಿಯ ವರ್ಚುಯಲ್ ಕೆಲಸಗಳಲ್ಲಿ ತೊಡಗಿಸಲಾಗುತ್ತದೆ. ಕಚೇರಿಗಳಿಂದ ಹಿಡಿದು ಕಟ್ಟಡ ನಿರ್ಮಾಣದವರೆಗೆ ಡಿಜಿಟಲ್ ಕಾರ್ಮಿಕರನ್ನು ಪ್ರಯೋಗಕ್ಕೆ ಒಳಪಡಿಸಲಾಗುತ್ತಿದೆ.

ಇದರಿಂದ ಕೆಲಸದ ಸ್ಥಳಗಳನ್ನು ಯಾವ ರೀತಿ ಸುಧಾರಿಸಬಹುದು ಹಾಗೂ ಗಾಯಗಳನ್ನು ತಡೆಯಲು ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದು ತಿಳಿದು ಬರಲಿದೆ.

ಕೋಟ್ಯಾಂತರ ಜನರು ಕೆಲಸ ಸಂಬಂಧದ ರೋಗಗಳು ಹಾಗೂ ಗಾಯಗಳನ್ನು ಎದುರಿಸುತ್ತಿದ್ದಾರೆ. ಅವರ ಜೀವನ ಸುಧಾರಿಸುವಲ್ಲಿ ಡಿಜಿಟಲ್ ಕಾರ್ಮಿಕರು ನೆರವಾಗಲಿದ್ದಾರೆ.

ಈ ಎಲ್ಲ ಮಾದರಿಗಳನ್ನು ರೂಪಿಸಲು ವೈಯಕ್ತಿಕ ಮಾಹಿತಿಗಳನ್ನು ಸಂಗ್ರಹಿಸುವುದು ಅನಿವಾರ್ಯವಾಗುತ್ತದೆ. ಹೀಗಾಗಿ ಖಾಸಗಿತನದ ಹಕ್ಕುಗಳನ್ನು ರಕ್ಷಿಸಿಕೊಳ್ಳುವ ಜೊತೆಗೆ ಪ್ರಗತಿ ಕಾಣುವ ಬಗ್ಗೆ ಅಗತ್ಯ ಚೌಕಟ್ಟು ರೂಪಿಸಿಕೊಳ್ಳಬೇಕಿದೆ.

## ಕೊನೆ ಭಾಗಕ್ಕೆ ಹರಿಯದ ಭದ್ರಾ



**ಭದ್ರಾ ನಾಲೆಗಳ ವ್ಯಾಪ್ತಿಯಲ್ಲಿ ಅಕ್ರಮ ಪಂಪ್‌ಸೆಟ್‌ಗಳ ತೆರವಿಗಾಗಿ ಮಂಗಳವಾರದಿಂದ ಕಾರ್ಯಾಚರಣೆ : ಭರವಸೆ**

**(1ನೇ ಪುಟದಿಂದ)** ರೈತರ ಮನವಿಗೆ ತಕ್ಷಣ ಸ್ಪಂದಿಸಿದ ಜಿಲ್ಲಾಧಿಕಾರಿಗಳು, ಈ ಹಿಂದೆ ರಚಿಸಿದ ಮಾದರಿಯಲ್ಲೇ ಟಾಸ್ಕ್‌ಫೋರ್ಸ್ ಸಮಿತಿ ಇವತ್ತು ರಾತ್ರಿಯಿಂದಲೇ ನಾಲೆಗಳ ಮೇಲೆ ಕಾರ್ಯಾಚರಣೆ ಆರಂಭಿಸುವಂತೆ ಚನ್ನಗಿರಿ, ಹರಿಹರ, ದಾವಣಗೆರೆ, ಹೊನ್ನಾಳಿ ತಾಲ್ಲೂಕುಗಳ ತಹಶೀಲ್ದಾರ್‌ಗಳ ನೇತೃತ್ವದಲ್ಲಿ ಪೊಲೀಸ್ ಇಲಾಖೆ, ಬೆಸ್ಕಾಂ ಇಲಾಖೆ, ನೀರಾವರಿ ಇಲಾಖೆಗಳು ಕಾರ್ಯನಿರ್ವಹಿಸಲಿವೆ ಎಂದು ಜಿಲ್ಲಾಧಿಕಾರಿಗಳು ಭರವಸೆ ನೀಡಿದ್ದಾರೆ ಎಂದು ನಂದಿಗಾವಿ ಶ್ರೀನಿವಾಸ್ 'ಜನತಾವಾಣಿ'ಗೆ ಮಾಹಿತಿ ನೀಡಿದರು.

ಹೊಳೆಸಿರಿಗೆರೆಯ ತಿಪ್ಪೇರುದ್ರಪ್ಪ, ಬಸವನಗೌಡ, ನಾಗರಾಜ್, ಹೊರಟ್ಟಿ ಕರಿಬಸಪ್ಪ, ನಾಗರಾಜ್, ಎಳೆಹೊಳೆ ಕರಿಬಸಪ್ಪ, ಭಾನುವಳ್ಳಿಯ ನಾರಾಯಣಪ್ಪ, ಪವಾಡಿ ಬಸವರಾಜ್ ಮತ್ತು ಮಲೇಬೆನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ.ಅಬೀದ್ ಅಲಿ, ಕೆ.ಪಿ.ಗಂಗಾಧರ್, ಪಿ.ಹೆಚ್. ಶಿವಕುಮಾರ್, ಪ್ರಭಾರಿ ಇಇ ಮಂಜುನಾಥ್, ಮಲೇಬೆನ್ನೂರು ಎಇಇ ಕೃಷ್ಣಮೂರ್ತಿ ಮತ್ತು ಬಸವಾಪಟ್ಟಣ ಎಇಇ ಧನಂಜಯ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

## 750 ಮನೆ ಮಂಜೂರು

**(1ನೇ ಪುಟದಿಂದ)** ಅಂಬೇಡ್ಕರ್ ನಿವಾಸ್ ಮತ್ತು ಬಸವ ವಸತಿ ಯೋಜನೆಯಡಿ 506, ಚನ್ನಗಿರಿ ತಾಲ್ಲೂಕಿನ ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯಿತಿಗಳಿಗೆ 244 ಸೇರಿದಂತೆ ಒಟ್ಟು 750 ಮನೆಗಳನ್ನು ಮಂಜೂರು ಮಾಡಿಸಲಾಗಿದೆ.

ದಾವಣಗೆರೆ ತಾಲ್ಲೂಕಿನ ಗ್ರಾ.ಪಂ. ಗಳಾದ ಆಲೂರು 12, ಆನಗೋಡು 31, ಅಣಜಿ 23, ಅಣಬೇರು 30, ಅತ್ತಿಗೆರೆ 18, ಬಾಡ 25, ಬಸವನಾಳು 24, ಗೋಪನಾಳು 21, ಹೆಮ್ಮನಬೇತೂರು 25, ಹೊನ್ನೂರು 20, ಹುಚ್ಚವ್ವನಹಳ್ಳಿ 23, ಐಗೂರು 5, ಕಂದಗಲ್ಲು 10, ಕಂದನಕೋವಿ 10, ಕೊಡಗನೂರು 19, ಕುರ್ಕಿ 20, ಮಳಲಕೆರೆ 20, ಮತ್ತಿ 15, ಮಾಯಕೊಂಡ 33, ನರಗನಹಳ್ಳಿ 22, ಶ್ಯಾಗಲೆ 21, ತೋಳಹುಣಿಸೆ 14, ನೇರ್ಲಿಗೆ 18, ಲೋಕಿಕೆರೆ 22, ಶ್ರೀರಾಮನಗರ 5 ಸೇರಿ ಒಟ್ಟು 506 ಮನೆ ಹಂಚಿಕೆ ಮಾಡಲಾಗಿದೆ.

ಚನ್ನಗಿರಿ ತಾಲ್ಲೂಕಿನ ಗ್ರಾ.ಪಂ. ಗಳಾದ ಬಸವಾಪಟ್ಟಣ 34, ಬೆಳಲಗೆರೆ 18, ಚಿರಡೋಣಿ 30, ದಾಗಿನಕಟ್ಟೆ 17, ಜಿ.ಕೆ. ಹಳ್ಳಿ 8, ಕಬ್ಬಳ 5, ಕಂಸಾಗರ 14, ಕಣಿವೆ ಬಿಳಚಿ 2, ಕಾರಿಗನೂರು 10, ಕತ್ತಲಗೆರೆ 12, ಕೋಟೆಹಾಳ್ 11, ನಿಲೋಗಲ್ಲು 14, ತ್ಯಾವಣಿಗೆ 26, ರುದ್ರಾಪುರ 3, ನಿವಿಲೇಹಾಳು 16, ನಲ್ಕುದುರೆ 24 ಸೇರಿ ಒಟ್ಟು 244 ಮನೆ ಹಂಚಿಕೆ ಮಾಡಲಾಗಿದೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ಮಾಹಿತಿ ನೀಡಿದ್ದಾರೆ.

ಸರ್ಕಾರ ನಿರ್ಗತಿಕರಿಗೆ, ಬಡವರಿಗೆ ಮನೆ ನೀಡಿದೆ. ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಗಳು, ಅಧ್ಯಕ್ಷರು, ಸದಸ್ಯರು ಅರ್ಹ ಫಲಾನುಭವಿಗಳನ್ನು ಪಾರದರ್ಶಕವಾಗಿ ಗುರುತಿಸಿ ಮನೆ ನೀಡಬೇಕು. ಯಾವುದೇ ಕಾರಣಕ್ಕೂ ಫಲಾನುಭವಿಗಳ ಬಳಿ ಮನೆ ನೀಡುವುದಕ್ಕೆ ಹಣ ವಸೂಲಿ ಮಾಡಬಾರದು. ಒಂದು ವೇಳೆ ಹಣ ವಸೂಲಿ ಮಾಡಿದರೆ ಫಲಾನುಭವಿಗಳು ನೇರವಾಗಿ ಶಾಸಕರನ್ನು ಸಂಪರ್ಕಿಸಬೇಕೆಂದು ಮನವಿ ಮಾಡಿದ್ದಾರೆ.

## ದುರ್ಬಳಕೆ ಅರ್ಜಿ ತಳ್ಳಿ ಹಾಕಿದ ಸುಪ್ರೀಂ

**(1ನೇ ಪುಟದಿಂದ)** ರಕ್ಷಣಾ ಕಾಯ್ದೆ ಸೇರಿದಂತೆ, ಹಲವು ಕಾಯ್ದೆಗಳ ಸಿಂಧುತ್ವ ಪ್ರಶ್ನಿಸಿ ಅರ್ಜಿ ದಾಖಲಿಸಲಾಗಿತ್ತು.

ಮಹಿಳೆಯರು ಈ ಕಾಯ್ದೆಗಳನ್ನು ಬಳಸಿಕೊಂಡು ಪುರುಷರ ವಿರುದ್ಧ ಸುಳ್ಳು ದೂರು ದಾಖಲಿಸುವುದರ ವಿರುದ್ಧ ರಕ್ಷಣೆ ನೀಡಬೇಕು. ಈ ಕಾಯ್ದೆಗಳು ಮಹಿಳೆಯರನ್ನು ರಕ್ಷಿಸಲಿಕ್ಕಾಗಿ ರೂಪಿಸಲಾಗಿದೆಯೇ ಹೊರತು ದುರ್ಬಳಕೆಗೆ ಅಲ್ಲ ಎಂದು ಅರ್ಜಿದಾರರು ಹೇಳಿದ್ದರು.

## ಸಾಲಗಾರರಿಗೆ ಕಿರುಕುಳ ನೀಡಿದರೆ ಗಡಿಪಾರು

**(1ನೇ ಪುಟದಿಂದ)** ನಗರಸಭೆ ಸಭಾಭವನದಲ್ಲಿ ಇಂದು ಕರೆಯಲಾಗಿದ್ದ ಮೈಕ್ರೋ ಫೈನಾನ್ಸ್ ಕಂಪನಿ ಮುಖ್ಯಸ್ಥರ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು.

ಶೇಕಡಾ 10 ರಿಂದ 20 ರಷ್ಟು ಲಾಭ ಗಳಿಸುವ ಸಣ್ಣ ಪುಟ್ಟ ವ್ಯಾಪಾರಿಗಳಿಂದ ಶೇಕಡಾ 36 ರಷ್ಟು ಬಡ್ಡಿಯನ್ನು ನೀವು ವಸೂಲಿ ಮಾಡುತ್ತಿದ್ದೀರಿ. ಒಂದು ಕಂಪನಿಯವರು ಮೂರು ಜನರಿಗೆ ಕೊಡದೇ ಹತ್ತರಿಂದ ಹನ್ನೆರಡು ಜನರಿಗೆ ಕೊಟ್ಟು, ಅವರಿಂದ ಹೆಚ್ಚು ಹಣ ವಸೂಲಿ ಮಾಡುತ್ತಿರುವ ಬಗ್ಗೆ ಅನೇಕರು ನನ್ನ ಗಮನಕ್ಕೆ ತಂದಿದ್ದಾರೆ.


ಇನ್ನು ಮುಂದೆ ನನ್ನ ತಾಲ್ಲೂಕಿನಲ್ಲಿ ಇಂತಹ ಯಾವುದೇ ಘಟನೆಗಳಿಗೆ ಅವಕಾಶವಿಲ್ಲ ಎಂದು ಶಾಸಕರು ಕಟುವಾಗಿ ತಿಳಿಸಿದರು.

ಫೈನಾನ್ಸ್‌ನವರ ವರ್ತನೆಯಿಂದ ಜನರು ದೂರು ಕೊಡಲು ಹೆದರುತ್ತಿರುವ ಬಗ್ಗೆ ನನಗೆ ತಿಳಿದಿದೆ. ಕಾರಣ ಪೊಲೀಸರು ದೂರು ಬರುವುದನ್ನು ಕಾಯದೇ ಅವರ ಮೇಲೆ ಕಾನೂನು ಕ್ರಮ ಜರುಗಿಸಿ ಎಂದು ಸಭೆಯಲ್ಲಿದ್ದ ಪೊಲೀಸ್ ಅಧಿಕಾರಿಗಳಿಗೆ ಕಟ್ಟಪ್ಪಣೆ ಮಾಡಿದ ಶಾಸಕರು, ನಮ್ಮ ಪಿಕೆಕೆ ಸಂಸ್ಥೆಯಿಂದ ಸಹಾಯವಾಣಿ ತೆರೆದಿದ್ದು ಅವರು ಕೊಡುವ ದೂರುಗಳನ್ನು ಸ್ವೀಕರಿಸುವಂತೆ ಹೇಳಿ ಸಹಾಯ ವಾಣಿಯ ಮೊಬೈಲ್ 7483646820 ಎಂದು ಸಂಖ್ಯೆ ತಿಳಿಸಿದರು.

ರಾಷ್ಟ್ರೀಕೃತ ಅಥವಾ ಇನ್ನಿತರೆ ಹಣಕಾಸು ಸಂಸ್ಥೆಗಳಿಗೆ ಅಲೆದಾಡಿ ಸಹಾಯ ಸಿಗದ ಬಹಳಷ್ಟು ಬಡವರು ಸ್ವಾವಲಂಬಿಗಳಾಗಿ ಬದುಕಲು ಮೈಕ್ರೋ ಫೈನಾನ್ಸ್ ಕಂಪನಿಗಳವರು ಸಹಾಯ ಮಾಡಿದ್ದಾರೆ. ಆ ಬಗ್ಗೆ ಅವರ ಕಾರ್ಯ ಮೆಚ್ಚುವಂತಹದು. ಆದರೆ ಬಡವರನ್ನು ಅನೇಕ ರೀತಿಯಲ್ಲಿ ಶೋಷಣೆ ಮಾಡುವುದು ತಪ್ಪು. ಇದು ಮುಂದುವರೆದರೆ ಕಠಿಣ ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಶಾಸಕ ಪ್ರಕಾಶ ಕೋಳಿವಾಡ ಮತ್ತೊಮ್ಮೆ ಎಚ್ಚರಿಸಿದರು.

ಸಭೆಯಲ್ಲಿ ನಗರಾಧ್ಯಕ್ಷೆ ಚಂಪಕ ಬಿಸಲಳ್ಳಿ, ಉಪಾಧ್ಯಕ್ಷ ನಾಗರಾಜ ಪವಾರ, ಸದಸ್ಯ ಪುಟ್ಟಪ್ಪ ಮರಿಯಮ್ಮನವರ, ತಹಶೀಲ್ದಾರ್ ಆರ್.ಎಚ್. ಬಾಗವಾನ, ಪೌರಾಯುಕ್ತ ಪಕ್ಕೀರಪ್ಪ, ಪೊಲೀಸ್ ಅಧಿಕಾರಿಗಳು, ಮೈಕ್ರೊ ಫೈನಾನ್ಸ್ ಕಂಪನಿಗಳ ಅಧಿಕಾರಿಗಳು ಮತ್ತಿತರು ಭಾಗವಹಿಸಿದ್ದರು.

## ಅತ್ಯಾಚಾರ: ಶಿಕ್ಷೆಗೆ ಆಗ್ರಹಿಸಿ ಚನ್ನಗಿರಿ ಬಂದ್ ಯಶಸ್ವಿ





**(1ನೇ ಪುಟದಿಂದ)** ಅಂಗಡಿಗಳ ಬಾಗಿಲು ಮುಚ್ಚಿ ಸಹಕರಿಸಿದರು. ಮುನ್ನೆಚ್ಚರಿಕೆ ಕ್ರಮವಾಗಿ ಶಾಲಾ- ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಸರ್ಕಾರಿ ಕಚೇರಿಗಳು ಮಾತ್ರ ಬಾಗಿಲು ತೆರೆದಿದ್ದವು. ಬಸ್ ಸಂಚಾರಕ್ಕೆ ತೊಂದರೆ ಆಗಲಿಲ್ಲ.

ವಿವಿಧ ಸಂಘಟನೆಗಳ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಆರೋಪಿಯ ಭಾವಚಿತ್ರ, ಪ್ರತಿಕೃತಿಗಳನ್ನು ದಹಿಸಿ ಆಕ್ರೋಶ ವ್ಯಕ್ತಪಡಿಸಿದರು. ವಕೀಲರು ನ್ಯಾಯಾಲಯದ ಕಲಾಪದಿಂದ ಹೊರಗುಳಿದು ಬೆಂಬಲಿಸಿದರು. ಪೊಲೀಸರು ನಿಷ್ಪಕ್ಷಪಾತವಾಗಿ ತನಿಖೆ ನಡೆಸಬೇಕು, ತ್ವರಿತ ವಿಚಾರಣೆ ನಡೆಸಿ ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿದರು.

## ರಾಷ್ಟ್ರೀಯ ಹೆದ್ದಾರಿ ಟೋಲ್‌ಗೆ ಏಕರೂಪ ನೀತಿ

**(1ನೇ ಪುಟದಿಂದ)** ಹೆದ್ದಾರಿ ನಿರ್ಮಾಣ ಮಾಡಲಾಗಿತ್ತು. ಈ ವರ್ಷ ಆ ದಾಖಲೆ ಮುರಿಯಲಾಗುವುದು ಎಂದು ಗಡ್ಕರಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಒಟ್ಟು 7 ಸಾವಿರ ಕಿಲೋಮೀಟರ್ ಹೆದ್ದಾರಿ ನಿರ್ಮಿಸಲಾಗಿದೆ. ಸಾಮಾನ್ಯವಾಗಿ ಫೆಬ್ರವರಿ - ಮಾರ್ಚ್ ಅವಧಿಯಲ್ಲಿ ಹೆದ್ದಾರಿ ನಿರ್ಮಾಣ ಕಾರ್ಯ ವೇಗ ಪಡೆದುಕೊಳ್ಳುತ್ತದೆ.

ಈ ಹಣಕಾಸು ವರ್ಷದಲ್ಲಿ 13 ಸಾವಿರ ಕಿಲೋಮೀಟರ್ ಹೆದ್ದಾರಿ ನಿರ್ಮಾಣ ಯೋಜನೆಯ ಗುತ್ತಿಗೆ ನೀಡಲಾಗುವುದು ಎಂದು ಸಚಿವರು ಹೇಳಿದ್ದಾರೆ.

ಸಾವಿರ ಕೋಟಿ ರೂ.ಗಳಿಗಿಂತ ಹೆಚ್ಚಿನ ಮೌಲ್ಯದ ಯಾವುದೇ ಯೋಜನೆ ಇದ್ದರೆ ಅದಕ್ಕೆ ಸಂಪುಟದ ಅನುಮೋದನೆ ಅಗತ್ಯವಿದೆ. ನಾವು ಸಂಪುಟದ ಒಪ್ಪಿಗೆಗಾಗಿ ಸುಮಾರು 60 ಸಾವಿರ ಕೋಟಿ ರೂ.ಗಳ ಯೋಜನೆಗಳನ್ನು ಸಲ್ಲಿಸಿದ್ದೇವೆ ಎಂದು ಗಡ್ಕರಿ ತಿಳಿಸಿದ್ದಾರೆ.

ಹೆದ್ದಾರಿ ಯೋಜನೆಗಳ ಜಾರಿ ವಿಳಂಬವಾಗುವುದನ್ನು ತಪ್ಪಿಸುವ ಸಲುವಾಗಿ ಯೋಜನೆಗೆ ಅಗತ್ಯವಾದ ಶೇ. 90ರಷ್ಟು ಜಮೀನು, ವಶಪಡಿಸಿಕೊಂಡ ನಂತರವೇ ಹೆದ್ದಾರಿ ನಿರ್ಮಾಣದ ಗುತ್ತಿಗೆಗಳನ್ನು ನೀಡಲಾಗುತ್ತಿದೆ. ಇದರಿಂದಾಗಿ ಹೆದ್ದಾರಿ ನಿರ್ಮಾಣದ ವೇಗ ಹೆಚ್ಚಾಗಿದೆ ಎಂದು ಗಡ್ಕರಿ ತಿಳಿಸಿದ್ದಾರೆ.


**(KHB) ಸೈಟ್ ಮಾರಾಟಕ್ಕೆ**
ಕರ್ನಾಟಕ ಹೌಸಿಂಗ್ ಬೋರ್ಡ್ ಹೊಸ ಕುಂದವಾಡ 30X40, 30X50, 40X60, 50X80, 20X30, 80X60 ಇನ್ನು ಅನೇಕ
ಕಿರಣ್ ಬೂಸ್ನೂರ್ (ಏಜೆಂಟ್)
94824 63409
97315 63409, 98440 63409

**ಸೈಟ್ ಮಾರಾಟಕ್ಕಿದೆ**
ಶಾಮನೂರು ಶಿವ - ಪಾರ್ವತಿ ಬಡಾವಣೆ, 5ನೇ ಮುಖ್ಯ ರಸ್ತೆಯಲ್ಲಿ ಉತ್ತರಾಭಿಮುಖವಾಗಿರುವ 30x50 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
99868 02097

**ಮನೆಯ ರೀ ಪೇಂಟಿಂಗ್**
ಮನೆಯ ಒಳಗಡೆ ಮತ್ತು ಹೊರಗಡೆ ಕಡಿಮೆ ಖರ್ಚಿನಲ್ಲಿ ಅಂದವಾಗಿ ಪೇಂಟ್ ಮಾಡಿ ಕೊಡಲಾಗುವುದು.
96065 57066

**ಬೇಕಾಗಿದ್ದಾರೆ**
ನಮ್ಮ ಕಾಫೀ ಶಾಪ್‌ನಲ್ಲಿ ಮತ್ತು ಕಾಫೀ ಕೌಂಟರ್‌ಗಳಲ್ಲಿ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.
ಆಸಕ್ತಿವುಳ್ಳವರು ತಮ್ಮ ವಿವರಗಳೊಂದಿಗೆ ಸಂಪರ್ಕಿಸಿ :
ANS ಫುಡ್ಸ್
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮಂಡಿಪೇಟೆ, ದಾವಣಗೆರೆ-1.
86604 12149

**ಬೇಕಾಗಿದ್ದಾರೆ**
ಅಂಗಡಿ ಕೆಲಸಕ್ಕೆ SSLC / PUC ಪಾಸ್ / ಫೇಲ್ ಆದ ಪುರುಷರು / ಹುಡುಗರು ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಡ್ರೈವಿಂಗ್ ಲೈಸನ್ಸ್ ಕಡ್ಡಾಯ. ಸಮಯ ಬೆಳಿಗ್ಗೆ 9 ರಿಂದ ರಾತ್ರಿ 8ರವರೆಗೆ.
ಕಶೆಟ್ಟರ್ ಇಂಡಸ್ಟ್ರೀಯಲ್ ಎಸೆನ್ಸಿಯಲ್ಸ್
ಟೈಯರ್ ಶಾಪ್ ಹತ್ತಿರ, ಲಾಯರ್ ರೋಡ್, ದಾವಣಗೆರೆ

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ :
98442 94446

**ಭಟ್ಟರು ಬೇಕಾಗಿದ್ದಾರೆ**
ಹೋಟೆಲ್ ಹೊಯ್ಸಳ
HEBBAL Toll ಹತ್ತಿರ
ವೆಜ್ & ನಾನ್‌ವೆಜ್
ಅಡುಗೆ ಮಾಡಲು ಭಟ್ಟರು ಬೇಕಾಗಿದ್ದಾರೆ.
99003 66782

**ಸೈಟುಗಳು ಮಾರಾಟಕ್ಕಿವೆ**
ಎರಗುಂಟೆಯ ಹೊಸ ಲೇಔಟ್‌ನಲ್ಲಿ 30x40 ಮತ್ತು 30x45 ಸೈಜ್ ಸೈಟುಗಳು ಮಾರಾಟಕ್ಕಿವೆ.
92414 62457

**ಸೈಟ್‌ಗಳು ಮಾರಾಟಕ್ಕೆ**
ವಾಜಪೇಯಿ ಲೇಔಟ್ 30x40 ವೆಸ್ಟ್, 35x60 ಪೂರ್ವ ಡಾಲರ್ಸ್ ಕಾಲೋನಿ 40x60, 30x45 ಉತ್ತರ ಶಿವ-ಪಾರ್ವತಿ 30x40 ಪೂರ್ವ
ಕಿರಣ್ ಬೂಸ್ನೂರ್
94824 63409
ಮನೆಗಳು ಬೇಕೇ ? ವಿಚಾರಿಸಿ

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
81478 03755
70266 43088

**ಅನುಭವವುಳ್ಳ ಅಕೌಂಟೆಂಟ್ ಬೇಕಾಗಿದ್ದಾರೆ**
ಕಠಾರೆ ಆಪ್ಟಿಕಲ್ಸ್ ಕಂಪನಿ, ಚರ್ಚ್ ರೋಡ್, ಪಿ.ಜೆ. ಎಕ್ಸ್‌ಟೆನ್ಷನ್ ದಾವಣಗೆರೆ
93427 55314

**ಹೋಟೆಲ್ ಬಾಡಿಗೆಗೆ**
ದಾವಣಗೆರೆಯ ಅಕ್ಕಮಹಾದೇವಿ ರಸ್ತೆಯಲ್ಲಿ ಸಿಟಿ ಸೆಂಟ್ರಲ್ ಆಸ್ಪತ್ರೆ ಪಕ್ಕದಲ್ಲಿರುವ ರಾಘವೇಂದ್ರ ಹೋಟೆಲ್ ಬಾಡಿಗೆಗಿದೆ.
ಆಸಕ್ತರು ಸಂಪರ್ಕಿಸಿ :
91485 44984, 63622 83170

**ಬೇಕಾಗಿದ್ದಾರೆ**
ಆಸ್ಪತ್ರೆ ಹಾಗೂ ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು PUC/Degree ಪಾಸ್/ಫೇಲ್ ಆದವರು ಬೇಕಾಗಿದ್ದಾರೆ.
81238 95187, 77604 84814

**ಮಾರಾಟಕ್ಕಿದೆ**
ಸಿಮೆಂಟ್ ಇಟ್ಟಿಗೆ ಮಿಷನ್ ಮಾರಾಟಕ್ಕಿದೆ.
94489 24273

**ಮನೆ ಬೇಕಾಗಿದೆ ಅಥವಾ ಸೈಟ್ ಬೇಕಾಗಿದೆ**
ಸೈಜ್ 20×30 ಅಥವಾ 20×40
ಸ್ಥಳ : ಶಕ್ತಿನಗರ, ಜೈ ನಗರ, ಡಿಸಿಎಂ ಟೌನ್‌ಶಿಪ್, ರಾಜೇಂದ್ರ ಬಡಾವಣೆ, ದಾವಣಗೆರೆ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
87229 45295, 97314 54916

**ಬೇಕಾಗಿದ್ದಾರೆ**
ಜವಾನರು (ಮಹಿಳೆ) ಬೇಕಾಗಿದ್ದಾರೆ
ಪಿ.ಎಫ್. ಮತ್ತು ESI ಸೌಲಭ್ಯವಿದೆ. ಆಯ್ಕೆಯಾದ ಅಭ್ಯರ್ಥಿಯ ಒಂದು ಮಗುವಿಗೆ ವಿದ್ಯಾಭ್ಯಾಸ ಸೌಲಭ್ಯವಿರುತ್ತದೆ.
ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆ,
ದೇವರಾಜ ಅರಸು ಬಡಾವಣೆ, 'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆ, ದಾವಣಗೆರೆ.
99640 17729

**ಕ್ರಯಪತ್ರ ಕಳೆದಿದೆ**
ದಾವಣಗೆರೆ ತಾಲ್ಲೂಕು (ಸಿಟಿ) 2ನೇ ವಾರ್ಡ್, 2ನೇ ಡಿವಿಜನ್, ಕೊಂಡಜ್ಜಿ ರಸ್ತೆ ಪಕ್ಕದಲ್ಲಿರುವ ಹಾಗೂ ಯರಗುಂಟೆ ವಿಭಾಗ ಸಂಖ್ಯೆ 25ರಲ್ಲಿ ದಾಖಲಾಗಿರುವ ಸೈಟ್ ನಂ. 44 ಈಗಿನ ಡೋ.ನಂ. 184/44 ಅಳತೆ 30x40 ಅಡಿ ಜಾಗಕ್ಕೆ ಸಂಬಂಧ ಪಟ್ಟಂತೆ ಕಾಗದ ಪತ್ರಗಳು, ಸಂಜಯ ಜೈನ್ ತಂದೆ ವೀರಚಂದ ಜೈನ್ ಇವರುಗಳಿಗೆ ಸಂಬಂಧ ಪಟ್ಟ ಕ್ರಯಪತ್ರ ಕಳೆದು ಹೋಗಿರುತ್ತದೆ. ಯಾರಿಗಾದರೂ ಸಿಕ್ಕಲ್ಲಿ ಇವರಿಗೆ ತಲುಪಿಸಬೇಕಾಗಿ ವಿನಂತಿ. ಸಂಜಯ ಜೈನ್ ವಿ. ಕಿರುವಾಡಿ ಲೇಔಟ್, ದಾವಣಗೆರೆ.
ಮೊ : 98444 77404

**ಗೋಡೌನ್ ಬಾಡಿಗೆಗೆ**
ವಿಆರ್‌ಎಲ್ ಟ್ರಾನ್ಸ್‌ಪೋರ್ಟ್, ಬಂಬೂಬಜಾರ್ ರಸ್ತೆಗೆ ಹತ್ತಿರ ಇರುವ ಚಿಕ್ಕದಾಗಿ ಫ್ಯಾಕ್ಟರಿ ಮಾಡಲು / ಗೋಡೌನ್‌ಗೆ ಯೋಗ್ಯವಾದ 2800 ಚದುರ ಅಡಿಯ ಗೋಡೌನ್ ಬಾಡಿಗೆಗೆ ಇದೆ. ವಿದ್ಯುತ್ ಮತ್ತು ನೀರಿನ ಸೌಕರ್ಯವಿದೆ.
98809 78152

**ಬೇಕಾಗಿದ್ದಾರೆ**
ಉಡುಪಿ ಜಿಲ್ಲೆ ಸಾಲಿಗ್ರಾಮದಲ್ಲಿ ಇರುವ ವೃದ್ಧ ದಂಪತಿಗಳ ಊಟೋಪಚಾರ ಮತ್ತು ಮನೆಯಲ್ಲಿಯೇ ಇದ್ದು ಸೇವೆ ಮಾಡುವ ಲಿಂಗಾಯತ ಮಹಿಳಾ ಅಡಿಗೆಯವರು ಬೇಕಾಗಿದ್ದಾರೆ. ಬ್ರಾಹ್ಮಣರೂ, ವೈಶ್ಯರೂ ಆಗಬಹುದು.
98455 11290

**ಮಹಿಳಾ ಅಭ್ಯರ್ಥಿ ಮಾತ್ರ**
Exam Work ಹೊರಗಿನ ಜಿಲ್ಲೆಗಳ ಕಾಲೇಜುಗಳಿಗೆ ಭೇಟಿ ಮಾಡಲು ಮಹಿಳಾ ಅಸಿಸ್ಟೆಂಟ್ ಬೇಕಾಗಿದ್ದಾರೆ.
ಊಟ, ವಸತಿ ಸೌಲಭ್ಯ ತಿಂಗಳ ಸಂಬಳ-8,000/- ಶನಿವಾರ, ಭಾನುವಾರ ರಜೆ ಇರುತ್ತದೆ.
97433 67767

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು ಬೆಡ್ ರಿಡನ್ ಪೇಷಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ) ಆಯಿಲ್ ಮಸಾಜ್ ಮಾಡಲಾಗುತ್ತದೆ.
85508 36642

**ಕೆಲಸಕ್ಕೆ ಬೇಕಾಗಿದ್ದಾರೆ**
Tally ಅನುಭವ ಇರುವ ಹುಡುಗ/ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
82966 67262

**WANTED**
Fluent Kannada Speaking
Female Tele callers, Freshers / Experienced. 10th PUC/Degree, Below 30 Years. Attractive Salary up to 15 K Per Month,
Contact : 90608 88667

**ಮನೆಗಳು ಲೀಸ್‌ಗಿವೆ**
2BHK RCC 1 ಮತ್ತು 2ನೇ ಮಹಡಿ ಮನೆ, ಪೂರ್ವ ಬಾಗಿಲು, ದೇವರಾಜ ಅರಸ್ ಬಡಾವಣೆ 'ಎ' ಬ್ಲಾಕ್, ಸೀಮೆಎಣ್ಣೆ ಬಂಕ್ ಎದುರು ರಸ್ತೆ, ದಾವಣಗೆರೆ. ಲೀಸ್ ಮೊತ್ತ 5.5 ಲಕ್ಷ. 1BHK RCC 1ನೇ ಮಹಡಿ, ಉತ್ತರ ಬಾಗಿಲು, ನಿಟುವಳ್ಳಿ, ಲೆನಿನ್ ನಗರ, ಲೀಸ್ ಮೊತ್ತ 2 ಲಕ್ಷ, ಬೋರ್/ಕಾರ್ಪೊರೇಷನ್ ನೀರು, ಕಾರ್ ಪಾರ್ಕಿಂಗ್ ಸೌಲಭ್ಯ.
7349397287/ 7022643885

**ಮಹಿಳೆಯರು ಬೇಕಾಗಿದ್ದಾರೆ**
ದಾವಣಗೆರೆ ನಗರದಲ್ಲಿ ಮನೆ ಮನೆಗೆ ಸರ್ವೆ ಮಾಡಲು. SSLC ಪಾಸ್ ಅಥವಾ ಫೇಲ್ ಆದ ಕನ್ನಡ ಮತ್ತು ಇಂಗ್ಲಿಷ್ ಭಾಷೆ ಪರಿಪೂರ್ಣವಾಗಿ ಮಾತಾಡಬಲ್ಲ ಮತ್ತು ಬರೆಯುವುದಕ್ಕೆ ಬರುವ ಹುಡುಗಿಯರು ಮತ್ತು ಮಹಿಳೆಯರು ತಕ್ಷಣ ಸಂಪರ್ಕಿಸಿ.
ಕಲ್ಪತರು ಏಜೆನ್ಸಿ - 9241122555

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ, ಹರಿಹರ, ರಾಣೇಬೆನ್ನೂರು, ತುಮಕೂರು, ಸಿರಾ ಇಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಊಟ, ವಸತಿ ESI, PF ಸೌಲಭ್ಯವಿದೆ.
ವೇತನ : 8000 - 15000 (12hrs)
88845 95873, 84949 46474

**2 ಬಿಹೆಚ್‌ಕೆ ಮನೆ ಬಾಡಿಗೆಗೆ ಇದೆ**
2ನೇ ಮೇನ್, 4ನೇ ಕ್ರಾಸ್, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.
94818 40268
82964 69527

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್ ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್ ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್ ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್ ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
96860 22969

**ಮನೆ ಲೀಸ್‌ಗಿದೆ**
2 BHK 2ನೇ ಮಹಡಿ ಮನೆ, ಲೀಸ್ ಮೊತ್ತ 5 ಲಕ್ಷ, ದೇವರಾಜ್ ಅರಸ್ ಬಡಾವಣೆ, ಎ ಬ್ಲಾಕ್, 2ನೇ ಮೇನ್, 2ನೇ ಕ್ರಾಸ್, ದಾವಣಗೆರೆ. ಬೋರ್/ಕಾರ್ಪೊರೇಷನ್ ನೀರಿನ ವ್ಯವಸ್ಥೆ ಹಾಗೂ ಕಾರ್ ಪಾರ್ಕಿಂಗ್ ಸೌಲಭ್ಯವಿದೆ.
7349397287, 9741746205

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ನಿವೇಶನ ಪತ್ರ ಕಳೆದಿದೆ**
ಎಸ್. ಹನುಮಂತಪ್ಪ ಬಿನ್ ಕೆಂಚಪ್ಪ ಕೆ.ಬಿ. ಬಡಾವಣೆ ವಾಸಿ, ಕಾವೇರಮ್ಮ ಶಾಲೆ ಹತ್ತಿರ, ದಾವಣಗೆರೆ. ಕೆ.ಬಿ. ಬಡಾವಣೆ ಮನೆ 761/2 ಅಲ್ಲಿ ಎಸ್. ಹನುಮಂತಪ್ಪ ಬಿನ್ ಕೆಂಚಪ್ಪ ಎಂಬ ಹೆಸರಿನಲ್ಲಿರುವ ಮೂಲ ನಿವೇಶನ ಮಂಜೂರಾತಿ ಪತ್ರ ದಿ. ; 10.12.2019 ರಂದು ಮನೆ ಸ್ವಚ್ಛಗೊಳಿಸುವ ಸಮಯದಲ್ಲಿ ಆಕಸ್ಮಿಕವಾಗಿ ಕಳೆದುಹೋಗಿರುತ್ತದೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ನಂಬರಿಗೆ ಕರೆಮಾಡಲು ವಿನಂತಿ.
94497 30020

**REQUIRED**
Experienced, Accountant having Tally and GST knowledge are required to work in Office.
REDDY ASSOCIATIES
# 82/19,P B Road, Beside Wellness Stores, Opp: Renuka Manidar, Davangere.
99000 22030

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**AdBlue / DEF**
available with Best Quality & Price for All BS6 Diesel
Commercial & Passanger Vehicles
Visit: Best Lubricants
Opp. to New Pvt Bus Stand PB Road, Davangere.
73380 33337

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಬೇಕಾಗಿದ್ದಾರೆ**
GNM -2 ಹುದ್ದೆ
ಕಣ್ಣಿನ ಆಸ್ಪತ್ರೆಯಲ್ಲಿ ಅನುಭವ ಇರುವವರಿಗೆ ಹೆಚ್ಚಿನ ಆದ್ಯತೆ (ರೆಸ್ಯೂಮ್‌ನೊಂದಿಗೆ ಆಸ್ಪತ್ರೆಗೆ ಭೇಟಿ ನೀಡಿ)
ದಾವಣಗೆರೆ ನೇತ್ರಾಲಯ,
ಗುಂಡಿ ಚೌಟ್ರಿ ಪಕ್ಕ, ದಾವಣಗೆರೆ,
83101 60893/ 83101 60894

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

# 6 ರಂದು ಕಡ್ಲೇಬಾಳು ಶ್ರೀ ಆಂಜನೇಯ ಸ್ವಾಮಿ ಬ್ರಹ್ಮ ರಥೋತ್ಸವ

## ಇಂದಿನಿಂದ ನಾಲ್ಕು ದಿನ ವಿಶೇಷ ಕಾರ್ಯಕ್ರಮಗಳು



ದಾವಣಗೆರೆ ತಾಲ್ಲೂಕಿನ ಕಡ್ಲೇಬಾಳು ಗ್ರಾಮದ ಶ್ರೀ ಆಂಜನೇಯ ಸ್ವಾಮಿಯ ಬ್ರಹ್ಮ ರಥೋತ್ಸವವು ಇದೇ ದಿನಾಂಕ 6ರಂದು ನಡೆಯಲಿದೆ. ಉತ್ಸವದ ಅಂಗವಾಗಿ ಇಂದಿನಿಂದ ಇದೇ ದಿನಾಂಕ 7ರವರೆಗೆ ವಿವಿಧ ಪೂಜಾ ಕಾರ್ಯಕ್ರಮಗಳು ಜರುಗಲಿವೆ. ಇಂದು ರಥಸಪ್ತಮಿ, ನಾಂದಿ, ಕಂಕಣ, ಬಲಿಹರಣ ಮತ್ತು ಮಹಾಮಂಗಳಾರತಿ ಜರುಗಲಿವೆ. ನಾಳೆ ಬುಧವಾರ ಭೀಷ್ಮಾಷ್ಟಮಿಯಂದು ಪವಮಾನ ಹೋಮ, ಬಲಿ ಹರಣ ಮತ್ತು ಮಹಾಮಂಗಳಾರತಿ ಜರುಗಲಿದೆ. ದಿನಾಂಕ 6ರಂದು ಮಧ್ವ ನವಮಿ ಪಂಚಾಮೃತ ಅಭಿಷೇಕ, ವಿಶೇಷ ಪೂಜೆ, ಹೋಮ ಹವನದ ನಂತರ ಮಧ್ಯಾಹ್ನ 12.30 ಗಂಟೆಗೆ ಶ್ರೀ ಆಂಜನೇಯ ಸ್ವಾಮಿಯ ಬ್ರಹ್ಮ ರಥೋತ್ಸವ ನಡೆಯಲಿದೆ.

ತಹಶೀಲ್ದಾರ್ ಎಂ.ಬಿ ಅಶ್ವತ್ಥ್ ಮತ್ತು ಗ್ರಾಮದ ಹಿರಿಯರ ನೇತೃತ್ವದಲ್ಲಿ ನಡೆಯಲಿರುವ ರಥೋತ್ಸವದ ನಂತರ ಲಿಂ.ಶ್ರೀಮತಿ ಲಲಿತಮ್ಮ ಮತ್ತು ಲಿಂ. ಮುದೇಗೌಡ್ರ ಪರಮೇಶ್ವರಪ್ಪ ಮತ್ತು ಮಕ್ಕಳು ಪ್ರಸಾದದ ವ್ಯವಸ್ಥೆ ಮಾಡಿರುತ್ತಾರೆ.

ದಿನಾಂಕ 7ರಂದು ಬೆಳಿಗ್ಗೆ 11 ಗಂಟೆಗೆ ಓಕಳಿ ಕಾರ್ಯಕ್ರಮ ಹಾಗೂ ಸತ್ಯನಾರಾಯಣ ಪೂಜೆ, ಪಂಚಾಮೃತ ಅಭಿಷೇಕ, ನೈವೇದ್ಯ, ಮಹಾಮಂಗಳಾರತಿ ತೀರ್ಥ ಪ್ರಸಾದದ ನಂತರ ಭಜನಾ ಕಾರ್ಯಕ್ರಮವಿರುತ್ತದೆ.

# ಭಾನುವಳ್ಳಿ ಗ್ರಾ.ಪಂ. ಅಧ್ಯಕ್ಷರಾಗಿ ವೆಂಕಟೇಶ್ ರೆಡ್ಡಿ



ಮಲೇಬೆನ್ನೂರು, ಫೆ. 3 - ಭಾನುವಳ್ಳಿ ಗ್ರಾ.ಪಂ. ಅಧ್ಯಕ್ಷರಾಗಿ ವೆಂಕಟೇಶ್ ರೆಡ್ಡಿ ಅವರು ಸೋಮವಾರ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ. ಎಂ.ಕೆ. ಪಾಟೀಲ್ ಅವರ ರಾಜೀನಾಮೆಯಿಂದಾಗಿ ಅಧ್ಯಕ್ಷ ಸ್ಥಾನ ತೆರವಾಗಿತ್ತು.

ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ವೆಂಕಟೇಶ್ ರೆಡ್ಡಿ 12 ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ. ಪವಾಡಿ ಮಂಜಪ್ಪ 11 ಮತಗಳನ್ನು ಪಡೆದು ಪರಾಭವಗೊಂಡಿದ್ದು ಎಪಿಎಂಸಿ ಕಾರ್ಯದರ್ಶಿ ಮರುಳಸಿದ್ದಪ್ಪಯ್ಯ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಗ್ರಾ.ಪಂ. ಉಪಾಧ್ಯಕ್ಷೆ ಇಂದಿರಾಕುಮಾರ್, ಸದಸ್ಯರಾದ ಟಿ.ಪಿ. ಧನ್ಯಕುಮಾರ್ ಮುಸ್ತಾಫ್ ಸೇರಿದಂತೆ ಎಲ್ಲಾ ಸದಸ್ಯರು ಭಾಗವಹಿಸಿದ್ದರು. ಮುಖಂಡ ಎಸ್.ಹೆಚ್. ಪಾಟೀಲ್ ಮತ್ತಿತರರು ನೂತನ ಅಧ್ಯಕ್ಷರನ್ನು ಅಭಿನಂದಿಸಿದರು. ಪಿಡಿಓ ಕಾಳಮ್ಮ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಕನ್ನಡದಲ್ಲಿಯೇ ವಿಜ್ಞಾನದ ಸಂವಹನಗಳು ನಡೆಯುವಂತಾಗಲಿ




### ತಾಲ್ಲೂಕು ಕನ್ನಡ ಸಮ್ಮೇಳನದ ಸಮಾರೋಪದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯ ಕುಲಸಚಿವ ಡಾ. ಬಿ.ಇ. ರಂಗಸ್ವಾಮಿ ಆಶಯ

ದಾವಣಗೆರೆ, ಫೆ. 3- ವಿಜ್ಞಾನದ ಸಂವಹನಗಳು ಪ್ರಾದೇಶಿಕ ಭಾಷೆ ಅಥವಾ ಕನ್ನಡದಲ್ಲಿಯೇ ನಡೆಯಬೇಕು. ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ವೈಜ್ಞಾನಿಕ ಲೇಖನಗಳು, ಚಿಂತನೆಗಳು, ಪ್ರಕಟಗೊಳ್ಳಬೇಕು ಮತ್ತು ಚರ್ಚೆಯಾಗಲೆಂದು ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯ ಕುಲಸಚಿವ ಡಾ ಬಿ.ಇ. ರಂಗಸ್ವಾಮಿ ಆಶಯ ವ್ಯಕ್ತಪಡಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಮೊನ್ನೆ ಹಮ್ಮಿಕೊಂಡಿದ್ದ 11 ನೇ ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಅವರು ಆಶಯ ನುಡಿಗಳನ್ನಾಡಿದರು.

ಸಮಾಜಕ್ಕೆ ಕನ್ನಡ ಸಾಹಿತ್ಯ ಲೋಕದ ಕೊಡುಗೆ ಅಪಾರವಾದುದು. ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಟ್ಟಿನ ಬಗ್ಗೆ ತಿಳಿವಳಿಕೆ ಮೂಡಿಸುವ ಅಗತ್ಯವಿದೆ. ತಾಂತ್ರಿಕ ಶಿಕ್ಷಣವನ್ನು ಮಾತೃಭಾಷೆ ಕನ್ನಡದಲ್ಲಿಯೇ ನೀಡಬೇಕೆಂಬ ವಿವಿಯು ಆಶಯ ಹೊಂದಿದ್ದರೂ ಸಹ ಕನ್ನಡದಲ್ಲಿ ಕಲಿಯಲು ವಿದ್ಯಾರ್ಥಿಗಳು ನಿರಾಸಕ್ತಿ ತೋರುತ್ತಿದ್ದಾರೆಂದು ಹೇಳಿದರು.

ಸಮಾಜಕ್ಕೆ ಕನ್ನಡ ಸಾಹಿತ್ಯ ಲೋಕದ ಕೊಡುಗೆ ಅಪಾರವಾದುದು. ಇಂತಹ ಸಾಹಿತ್ಯ ಸಮ್ಮೇಳನಗಳ ಮೂಲಕ ಸಾಂಸ್ಕೃತಿಕ ನೆಲೆಗಟ್ಟನ್ನು ಹಾಗೂ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ವಿದ್ಯಾರ್ಥಿ ಯುವಜನರಿಗೆ, ಜನ ಸಾಮಾನ್ಯರಿಗೆ ತಿಳಿಸಿಕೊಡಲಾಗುತ್ತಿದೆ ಎಂದರು.

ಕನ್ನಡವನ್ನು ಹೆಚ್ಚು ಹೆಚ್ಚು ಬಳಸಿದಾಗ ಮಾತ್ರ ಕನ್ನಡ ಭಾಷೆ ಉಳಿಯಲು ಮತ್ತು ಬೆಳೆಯಲು ಸಾಧ್ಯ. ಆದ್ದರಿಂದ ಇನ್ನೂ ಹೆಚ್ಚು ಹೆಚ್ಚು ಕಾರ್ಯಕ್ರಮಗಳು ಕನ್ನಡ ಭಾಷೆಯನ್ನು ಉಳಿಸಿ, ಬೆಳೆಸುವಂತಾಗಲಿ ಎಂದು ಆಶಿಸಿದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷೆ ಸುಮತಿ ಜಯಪ್ಪ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ, ಅಧ್ಯಾತ್ಮಿಕ ಚಿಂತಕರಾದ ಶಿವಾನಂದ ಗುರೂಜಿ ಅವರು ಸಮ್ಮೇಳನಾಧ್ಯಕ್ಷರ ಸಮೀಕ್ಷಾ ನುಡಿಗಳನ್ನಾಡಿದರು.

ಇದೇ ವೇಳೆ ಕುವೆಂಪು ಕನ್ನಡ ಭವನ ನಿರ್ಮಾಣಕ್ಕೆ ಶ್ರಮಿಸಿದ್ದ ದಿ. ಪ್ರೊ. ಎಸ್.ಬಿ. ರಂಗನಾಥ್ ಅವರ ಪತ್ನಿ ಶ್ರೀಮತಿ ರತ್ನಮ್ಮ ರಂಗನಾಥ್ ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರುಗಳಾದ ಬಿ.ಟಿ. ನಂದ್ಯಪ್ಪ, ಪಂಡಿತ ಎಸ್.ಎಂ. ರುದ್ರಮುನಿಯಯ್ಯ, ರೂಪ ಬಸಪ್ಪನವರ್, ರಾಜಯೋಗಿನಿ ಬ್ರಹ್ಮಾಕುಮಾರಿ ಗೀತಾ ಜೀ, ಹೆಚ್. ಭಾರತಿ, ಕಣಕುಪ್ಪಿ ಕರಿಬಸಪ್ಪ, ಪೋಪಟ್ ಲಾಲ್ ಜೈನ್, ಹೆಚ್.ಎನ್. ಜಯಮ್ಮ, ಬಿ. ಅನಸೂಯ, ಡಾ. ಸುಪರ್ಣ, ಗಿರೀಶ್ ದೇವರಮನಿ ಅವರುಗಳಿಗೆ ಪರಿಷತ್ ವತಿಯಿಂದ ಗೌರವಿಸಲಾಯಿತು.

ಕಸಾಪ ಪದಾಧಿಕಾರಿಗಳಾದ ಬಿ. ದಿಳ್ಳೆಪ್ಪ, ಜಗದೀಶ್ ಕೂಲಂಬಿ, ರೇವಣಸಿದ್ದಪ್ಪ ಅಂಗಡಿ, ಷಡಾಕ್ಷರಪ್ಪ ಎಲೆಬೇತೂರು ಮತ್ತಿತರರು ಉಪಸ್ಥಿತರಿದ್ದರು. ಎಸ್. ಶಿವಯ್ಯ ಸ್ವಾಗತಿಸಿದರು. ಪಂಕಜಾಕ್ಷಿ ನಿರೂಪಿಸಿದರು. ಸೌಭಾಗ್ಯಮ್ಮ ವಂದಿಸಿದರು.

ನಂತರ ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮವನ್ನು ವಿವಿಧ ಶಾಲಾ ಮಕ್ಕಳು ನಡೆಸಿಕೊಟ್ಟರು. ವೃತ್ತಿ ರಂಗಭೂಮಿ ರಂಗಾಯಣದ ನಿರ್ದೇಶಕ ಮಲ್ಲಿಕಾರ್ಜುನ್ ಕಡಕೋಳ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

# ನಗರದಲ್ಲಿ ಇಂದು ಜಿಲ್ಲಾ ಪ್ಯಾರಾ ಮಿಲಿಟರಿ ಸಂಘದಿಂದ ಸ್ವಾಗತ

ಜಮ್ಮು ಕಾಶ್ಮೀರ್, ಪಂಜಾಬ್, ರಾಜಸ್ಥಾನ್, ಮೇಘಾಲಯ, ಅಸ್ಸಾಂ ಹೀಗೆ ದೇಶದ ಹಲವು ಗಡಿ ಭಾಗಗಳಲ್ಲಿ ತಾಯ್ನಾಡಿನ ಸೇವೆಯನ್ನು ಸಲ್ಲಿಸಿ ನಿವೃತ್ತಿ ಹೊಂದಿ, ತನ್ನ ಹುಟ್ಟೂರಾದ ಬಲ್ಲೂರಿಗೆ ಇಂದು ಆಗಮಿಸುತ್ತಿರುವ ಬಸವರಾಜ್ ಅವರಿಗೆ ಜಿಲ್ಲಾ ಪ್ಯಾರಾ ಮಿಲಿಟರಿ ಸಂಘದ ವತಿಯಿಂದ ಹಾಗೂ ದೇಶಭಕ್ತ ಜನತೆಯಿಂದ ಅದ್ದೂರಿ ಸ್ವಾಗತ ನಡೆಯಲಿದೆ.



ದಾವಣಗೆರೆ ರೈಲ್ವೆ ನಿಲ್ದಾಣದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಜನಶತಾಬ್ದಿ ರೈಲಿನ ಮುಖಾಂತರ ಬಸವರಾಜ್ ಆಗಮಿಸುತ್ತಿದ್ದಾರೆ.

# ಬೆಳಗಾವಿಯ ರೇಣುಕಾ ಫುಟ್ಬಾಲ್ ತಂಡ ಚಾಂಪಿಯನ್



### ನಗರದಲ್ಲಿ ಫುಟ್ಬಾಲ್ ಕ್ರಾಂತಿ : ದಿನೇಶ್ ಕೆ. ಶೆಟ್ಟಿ

ದಾವಣಗೆರೆ, ಫೆ.3- ಜಿಲ್ಲಾ ಫುಟ್‌ಬಾಲ್ ಅಸೋಸಿಯೇಷನ್ ವತಿಯಿಂದ ಕ್ರೀಡೆಗಳ ಮೂಲಕ ಶಾಲಾ ಬಾಲಕಿಯರ ಸಬಲೀಕರಣಕ್ಕಾಗಿ ಖೇಲೋ ಇಂಡಿಯಾ ಅಡಿಯಲ್ಲಿ ನಗರದ ಲೂಡ್ಸ್ ಬಾಯ್ಸ್ ಸ್ಕೂಲ್ ಆವರಣದಲ್ಲಿ ನಡೆದ ರಾಜ್ಯಮಟ್ಟದ ಬಾಲಕಿಯರ ಫುಟ್ಬಾಲ್ ಪಂದ್ಯಾವಳಿಯಲ್ಲಿ ಬೆಳಗಾಂ ನ ರೇಣುಕಾ ಫುಟ್ಬಾಲ್ ಕ್ಲಬ್ ತಂಡ ಹಾವೇರಿಯ ಡಿ ಯುನೈಟೆಡ್ ತಂಡವನ್ನು ಸೋಲಿಸಿ ಪ್ರಥಮ ಸ್ಥಾನ ಪಡೆಯಿತು.

ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷರೂ, ಫುಟ್ಬಾಲ್ ತಂಡದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಪ್ರಶಸ್ತಿ ವಿತರಿಸಿ ಮಾತನಾಡಿ, ದಾವಣಗೆರೆಯಲ್ಲಿ ಮಹಿಳಾ ಫುಟ್ಬಾಲ್ ಪಂದ್ಯಾವಳಿ ಒಂದು ತಿಂಗಳ ಕಾಲ ಯಶಸ್ವಿಯಾಗಿ ನಡೆದು ದಾವಣಗೆರೆಯಲ್ಲಿ ಫುಟ್ಬಾಲ್ ಕ್ರಾಂತಿ ಎಬ್ಬಿಸಿದೆ. ಇದೇ ರೀತಿ ಇನ್ನು ಮುಂದೆ ರಾಷ್ಟ್ರಮಟ್ಟದ ಪಂದ್ಯಾವಳಿ ಏರ್ಪಡಿಸಲು ತೀರ್ಮಾನಿಸಲಾಗಿದೆ ಎಂದರು.

ಇನ್ನು ಹೆಚ್ಚು ಹೆಚ್ಚು ಪಂದ್ಯಾವಳಿಗಳನ್ನು ನಡೆಸಿದರೆ ಉತ್ತಮ ಸ್ಪರ್ಧಿಗಳು ಹೊರಹೊಮ್ಮಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು. ಹಾವೇರಿಯ ಡಿ ಯುನೈಟೆಡ್ ತಂಡ ರನ್ನರ್ ಅಪ್ ಎರಡನೇ ಸ್ಥಾನ, ಕರುನಾಡು ಫುಟ್ಬಾಲ್ ತಂಡ ಮೂರನೇ ಸ್ಥಾನವನ್ನು ಪಡೆದರು.

ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಜಿಲ್ಲಾ ಫುಟ್ಬಾಲ್ ಅಸೋಸಿಯೇಷನ್ ಕಾರ್ಯದರ್ಶಿಗಳಾದ ಮಹಮ್ಮದ್ ರಫೀಕ್, ಚಂದ್ರಶೇಖರ ಎಸ್ಕೆ, ಅಹಮದ್ ಮುಜ್ತಬಾ ಅಶ್ರಫ್ ಅಲಿ, ಅಲ್ಲಾಬಕ್ಷಿ, ಡಿ.ಎಸ್. ಯುವರಾಜ್, ತನ್ವೀರ್, ಮುಜ್ತಬಾ ಶೇಖ್ ಸಬ್ರೀನ್, ಪ್ರವೀಣ್ ,ಜೆಫ್ ಫ್ರಾನ್ಸಿಸ್ ಮುಬಾರಕ್, ಮುಸ್ತಾಫಾ, ಚೇತನ್ ಕುಮಾರ್ ಮುಂತಾದವರಿದ್ದರು.

# ಅಕ್ಕಿ-ಬೇಳೆಗಳಿಂದ ಸಿದ್ಧಗಂಗಾ ಶ್ರೀಗಳ ಭಾವಚಿತ್ರ ರಚನೆ ಮೂಲಕ ಸಂಸ್ಮರಣೆ



ದಾವಣಗೆರೆ, ಫೆ. 3- ವಿನೋಬನಗರದ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಶಾಲೆಯಲ್ಲಿ ಸಿದ್ದಗಂಗಾ ಶ್ರೀಗಳ 5ನೇ ವರ್ಷದ ಪುಣ್ಯಸ್ಮರಣೆ ನಿಮಿತ್ತವಾಗಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಎಸ್.ನಾಗರಾಜ ಸಮ್ಮುಖದಲ್ಲಿ, ಚಿತ್ರಕಲಾ ಶಿಕ್ಷಕ ಶಾಂತಯ್ಯ ಪರಡಿಮಠ ಮಾರ್ಗದರ್ಶನದಲ್ಲಿ, ಶಾಲೆಯ ವಿದ್ಯಾರ್ಥಿಗಳು 20x30 ಅಡಿಯ ಬೃಹತ್ ಭಾವಚಿತ್ರವನ್ನು ಅಕ್ಕಿ ಮತ್ತು ಬೇಳೆಗಳಿಂದ ರಚನೆ ಮಾಡುವುದರ ಮೂಲಕ ಶ್ರೀಗಳ ಸಂಸ್ಮರಣೆ ಮಾಡಲಾಯಿತು.

ವಿಷಯ ಪರಿವೀಕ್ಷರಾದ ಶಶಿಕಲಾ , ಡಯಟ್ ಉಪನ್ಯಾಸಕಿ ಅನಿತ, ಮುಖ್ಯೋಪಾಧ್ಯಾಯಿನಿ ಸವಿತಾ ಉಪಸ್ಥಿತರಿದ್ದರು. ಶಿಕ್ಷಕರಾದ ಜ್ಯೋತಿ ಎಚ್.ಬಿ, ಜಿ.ಎಮ್. ಪ್ರಭುದೇವ, ಕೆ. ಹಾಲಪ್ಪ, ಶ್ವೇತ ಎಚ್, ಲಿಂಗರಾಜ ಗಾಜಿ ಕಾರ್ಯಕ್ರಮಕ್ಕೆ ಸಹಕರಿಸಿದರು.

# ನಾಳೆ ಕಾಂಗ್ರೆಸ್ ಸಭೆ : ಎಐಸಿಸಿ ಪ್ರಧಾನ ಕಾರ್ಯದರ್ಶಿ ಆಗಮನ

ದಾವಣಗೆರೆ, ಫೆ. 3 - ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳು ಶೀಘ್ರ ನಡೆಯಲಿದ್ದು, ಈ ಚುನಾವಣೆಗೆ ಪಕ್ಷವನ್ನು ತಳಮಟ್ಟದಲ್ಲಿ ಸಂಘಟಿಸುವ ಉದ್ದೇಶದಿಂದ ದಾವಣಗೆರೆ ಜಿಲ್ಲೆಯಲ್ಲಿ ಪೂರ್ವಭಾವಿ ಸಭೆಯನ್ನು ನಾಡಿದ್ದು ದಿನಾಂಕ 5ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಪಕ್ಷದ ಎಸ್.ಎಸ್.ಭವನದಲ್ಲಿ ಕರೆಯಲಾಗಿದೆ.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಕರೆದಿರುವ ಈ ಸಭೆಯಲ್ಲಿ ಸಚಿವರು, ಶಾಸಕರು, ಸಂಸದರು ಭಾಗವಹಿಸಲಿದ್ದು, ಎಐಸಿಸಿ ಪ್ರಧಾನ ಕಾರ್ಯದರ್ಶಿ ಮಯೂರ್ ಜಯಕುಮಾರ್ ಅವರುಗಳು ಆಗಮಿಸುವರು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

# ಕಲಾವಿದರನ್ನು ಪ್ರೋತ್ಸಾಹಿಸಲು ದಾನಿಗಳು ಮುಂದೆ ಬರಲಿ



### ಕಲಾವಿದ ಎನ್.ಎಸ್. ರಾಜು ಮನವಿ

ದಾವಣಗೆರೆ, ಫೆ.3- ಕಲೆ ಹಾಗೂ ಕಲಾವಿದರನ್ನು ಪ್ರೋತ್ಸಾಹಿಸಲು ಧನ ಸಹಾಯ ಮಾಡಬೇಕು ಎಂದು ರಂಗ ಕಲಾವಿದ ಎನ್.ಎಸ್ ರಾಜು ಮನವಿ ಮಾಡಿದರು.

ಶ್ರೀ ಜಯಲಕ್ಷ್ಮಿ ನಾಟಕ ಸಂಘದ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ನಡೆದ 'ಕಳ್ಳ ಗುರು, ಸುಳ್ಳ ಶಿಷ್ಯ' ಎಂಬ ಸಾಮಾಜಿಕ ನಾಟಕ ಪ್ರದರ್ಶನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಾಡಿನ ಸಂಪತ್ತು ಆಗಿರುವ ಕಲಾವಿದರನ್ನು ಉಳಿಸಿ ಬೆಳೆಸುವಂತಹ ಕೆಲಸ ಮಾಡಬೇಕಾಗಿದೆ. ಈ ದಿನಮಾನಗಳಲ್ಲಿ ಬಣ್ಣ ಹಚ್ಚಿ ಜನರನ್ನು ರಂಜಿಸುವ ಕಲಾವಿದರ ಬದುಕು ಕಷ್ಟಕರವಾಗಿದೆ. ಹಾಗಾಗಿ ದಾನಿಗಳು, ಕಲಾ ಪೋಷಕರು ಧನ ಸಹಾಯ ಮಾಡುವ ಮೂಲಕ ಕಲೆ ಹಾಗೂ ಕಲಾವಿದರನ್ನು ಉಳಿಸಿ, ಬೆಳೆಸಬೇಕು ಎಂದರು.

ಕಲಾವಿದರಿಗೆ ಇಲಾಖೆ ನೀಡುವ ಸಹಾಯ ಧನ ಸಾಕಾಗುವುದಿಲ್ಲ. ಹಾಗಾಗಿ ಇಲಾಖೆಯಿಂದ ಹೆಚ್ಚಿನ ಪ್ರೋತ್ಸಾಹ ಧನ ಸೇರಿದಂತೆ ವಿವಿಧ ಸವಲತ್ತುಗಳನ್ನು ನೀಡಿ ಗೌರವಿಸಬೇಕು ಎಂದ ಅವರು, ವಿವಿಧ ಅಕಾಡೆಮಿಯ ಪ್ರಶಸ್ತಿಗಳು ಗ್ರಾಮೀಣ ಪ್ರದೇಶದ ಕಲಾವಿದರಿಗೂ ಸಿಗುವಂತಾಗಲಿ ಎಂದು ಆಶಿಸಿದರು.

ದೇವಸ್ಥಾನ ಸಮಿತಿಯ ಅಧ್ಯಕ್ಷ ಎ.ಸಿ. ಸಿದ್ದಪ್ಪ, ಎನ್.ಎಸ್. ದಿಳ್ಳೆಪ್ಪ, ಎಸ್.ಜಿ. ವಿಜಯಕುಮಾರ್, ಎಲ್. ಶಂಕರ್, ಟಿ. ಸಿದ್ದರಾಮಪ್ಪ ಬುಳಸಾಗರ, ಎನ್. ರವಿಕುಮಾರ್, ಮಡ್ರಳ್ಳಿಯ ಮಂಜುನಾಥ, ಪಿ.ಕೆ. ಖಾದರ್ ಇತರರು ಇದ್ದರು.

ಸತ್ಯನಾರಾಯಣ ಕನ್ನಡ ಕಲಾ ಬಳಗದ ಎಸ್. ಪ್ರೇಮಾ ತಂಡದಿಂದ 'ಕಳ್ಳ ಗುರು, ಸುಳ್ಳ ಶಿಷ್ಯ' ಎಂಬ ನಾಟಕ ಪ್ರದರ್ಶನ ನಡೆಯಿತು.

# ಜೆ.ಕಲೀಂ ಭಾಷಾ ನಿಧನಕ್ಕೆ ಜಿಲ್ಲಾ ಕಸಾಪ ಸಂತಾಪ

ದಾವಣಗೆರೆ, ಫೆ.3- ಜಿಲ್ಲೆಯ ಶ್ರೇಷ್ಠ ಕವಿ, ಹಿರಿಯ ಸಾಹಿತಿ ಹಾಗೂ ವೈಚಾರಿಕ ಲೇಖಕರೆಂದೇ ಹೆಸರಾಗಿದ್ದ ಜೆ.ಕಲೀಂ ಭಾಷಾ ಅವರು ಹೃದಯಾಘಾತದಿಂದ ನಿಧನರಾದ ಸುದ್ದಿ ತಿಳಿದು, ವೈಯಕ್ತಿಕವಾಗಿ ಆಘಾತ ತಂದಿದೆ ಎಂದು ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಸಂತಾಪ ಸೂಚಿಸಿದ್ದಾರೆ.



ಹರಿಹರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸದಾ ಸಾಹಿತ್ಯಿಕ ಚಿಂತನೆಯಲ್ಲಿ ತೊಡಗಿಸಿಕೊಂಡು ವೈಚಾರಿಕ ಕವನ ಸಂಕಲನ ಮತ್ತು ಹಲವು ಕೃತಿಗಳನ್ನು ರಚಿಸಿ ಪ್ರಖ್ಯಾತಿ ಪಡೆದ ಹಿರಿಯ ಸಾಹಿತಿಗಳ ಅಗಲುವಿಕೆಯಿಂದ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಕಂಬನಿ ಮಿಡಿದಿದ್ದಾರೆ.

# ಶ್ರೀ ಪುರಂದರ ದಾಸರ ದೇವರ ನಾಮ, ಶ್ರೀ ತ್ಯಾಗರಾಜರ ಕೀರ್ತನೆ ಸ್ಪರ್ಧೆ

ದಾವಣಗೆರೆ, ಫೆ.3- ಬ್ರಾಹ್ಮಣ ಸಮಾಜ ಮಹಿಳಾ ವಿಭಾಗದಿಂದ ಶ್ರೀ ಪುರಂದರ ದಾಸರ ಹಾಗೂ ಶ್ರೀ ತ್ಯಾಗರಾಜರ ಆರಾಧನೆ ಪ್ರಯುಕ್ತ ಶ್ರೀ ಪುರಂದರ ದಾಸರ ದೇವರ ನಾಮ ಹಾಗೂ ಶ್ರೀ ತ್ಯಾಗರಾಜರ ಕೀರ್ತನಾ ಸ್ಪರ್ಧೆಯನ್ನು ಇದೇ ದಿನಾಂಕ 16 ರ ಶನಿವಾರ ಬೆಳಿಗ್ಗೆ 10.30 ಗಂಟೆಗೆ ಶ್ರೀ ಶಾರದಾಂಬ ದೇವಸ್ಥಾನದಲ್ಲಿ ಏರ್ಪಡಿಸಲಾಗಿದೆ.

ಸ್ಪರ್ಧೆಯಲ್ಲಿ ಭಾಗವಹಿಸುವವರು ಇದೇ ದಿನಾಂಕ 14 ರೊಳಗೆ ಹೆಸರು ನೋಂದಾಯಿಸಬೇಕು ಎಂದು ಶ್ರೀಮತಿ ಅಡಿಗ (9964027146), ಶ್ರೀಮತಿ ನಳಿನಿ ಅಚ್ಯುತ್ (9886058866) ತಿಳಿಸಿದ್ದಾರೆ.

# ಲೋಕಸಭಾ ಚುನಾವಣೆಯಲ್ಲಿ ಮತದಾರರಿಗೆ ಆಮಿಷ: ಆರೋಪ


ದಾವಣಗೆರೆ, ಫೆ. 3- ದಾವಣಗೆರೆ ಲೋಕಸಭಾ ಕ್ಷೇತ್ರದ ಸದಸ್ಯರಾಗಿ ಆಯ್ಕೆಯಾಗಿರುವ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಚುನಾವಣೆಯಲ್ಲಿ ಮತದಾರರಿಗೆ ಹಣ ಹಾಗೂ ಇತರೆ ಆಮಿಷಗಳನ್ನು ವೊಡ್ಡಿ ಆಯ್ಕೆಯಾಗಿರುವ ಬಗ್ಗೆ ನನ್ನ ಬಳಿ ಹಲವಾರು ದಾಖಲೆಗಳಿದ್ದು, ಇದೇ ದಿನಾಂಕ 7 ರಂದು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು ಎಂದು ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದ ಸುಭಾನ್ ಖಾನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಂದಿನ ಚುನಾವಣಾಧಿಕಾರಿಯಾಗಿದ್ದ ವೆಂಕಟೇಶ್ ಅವರು ಸಹ ನಾನು ಸಲ್ಲಿಸಿದ್ದ ನಾಮಪತ್ರವನ್ನು ತಿರಸ್ಕರಿಸಿದ್ದರು.

ಇದನ್ನು ವಿರೋಧಿಸಿ, ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಭಾ ಅವರ ಆಯ್ಕೆಯನ್ನು ರದ್ದುಪಡಿಸುವಂತೆ ಅರ್ಜಿ ಸಲ್ಲಿಸಿದ್ದೇನೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಅಲ್ಲಾಬಕ್ಷಿ, ಹೆಚ್. ಪರ್ವೇಜ್ ತಸ್ಲಿಮ್ ಬಾನು, ಮೊಹಮದ್ ಸುಹೇಲ್ ಖಾನ್ ಮತ್ತಿತರರಿದ್ದರು.

# ಹರಿಹರದಲ್ಲಿ ಇಂದು ಜೆ.ಕಲೀಂ ಬಾಷಾ ಅವರಿಗೆ ನುಡಿ ನಮನ



ನಿನ್ನೆ ನಿಧನರಾದ ಹಿರಿಯ ಸಾಹಿತಿಗಳೂ, ಪ್ರಗತಿಪರ ಚಿಂತಕರೂ, ನಿವೃತ್ತ ಕನ್ನಡ ವಿಷಯ ಪರಿವೀಕ್ಷಕರೂ ಆದ ಜೆ.ಕಲೀಂಭಾಷಾ ಅವರಿಗೆ ನುಡಿ ನಮನ ಅರ್ಪಿಸುವ ಕಾರ್ಯಕ್ರಮವನ್ನು ಹರಿಹರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಇಂದು ಸಂಜೆ 5 ಕ್ಕೆ ರಚನಾ ಕ್ರೀಡಾ ಟ್ರಸ್ಟ್ ನಲ್ಲಿ ಹಮ್ಮಿಕೊಳ್ಳಲಾಗಿದೆ.

# ಸಂಭ್ರಮದ ಶ್ರೀ ಸಿದ್ದಾರೂಢರ ರಥೋತ್ಸವ



### ರಾಣೇಬೆನ್ನೂರು

ರಾಣೇಬೆನ್ನೂರು, ಫೆ.3- ಇಂದು ಸಂಜೆ ಇಲ್ಲಿನ ಸಿದ್ದಾರೂಢ ಮಠದ ಶ್ರೀ ಸಿದ್ದಾರೂಢರ ರಥೋತ್ಸವವು ಪೀಠಾಧಿಪತಿ ಶ್ರೀ ಮಲ್ಲಯ್ಯಜ್ಜ ನೇತೃತ್ವದಲ್ಲಿ ಅಪಾರ ಭಕ್ತ ವೃಂದದ ಸಡಗರ ಸಂಭ್ರಮದೊಂದಿಗೆ ವಿಜೃಂಭಣೆಯಿಂದ ನಡೆಯಿತು.

ಶ್ರೀ ಆದಿತ್ಯಾ ದೇವತಾಭ್ಯೋ ಭವನ
**ಶ್ರೀ ಆದಿತ್ಯಾ ಟೂರಿಸ್ಟ್, ದಾವಣಗೆರೆ**
**ಮಹಾಕುಂಭ ಮೇಳ ವಿಶೇಷ ಪ್ಯಾಕೇಜ್ ಟೂರ್**
(ಊಟ, ತಿಂಡಿ, ಟೀ, ಕಾಫಿ ಸೇರಿ)
8 ದಿನಗಳ ಲಕ್ಸುರಿ ಪುಶ್ ಬ್ಯಾಕ್ ಸೀಟಿನ ಬಸ್ ಪ್ರವಾಸ
ಪ್ರೇಕ್ಷಣೀಯ ಸ್ಥಳ : ಉಜ್ಜಯಿನಿ, ಪ್ರಯಾಗ್‌ರಾಜ್, ಅಯೋಧ್ಯ, ವಾರಣಾಸಿ
ದಾವಣಗೆರೆಯಿಂದ ಹೊರಡುವ
ದಿನಾಂಕ : 8-2-2025, ಬೆಳಿಗ್ಗೆ 8 ಗಂಟೆಗೆ
ಬುಕ್ಕಿಂಗ್ ಕೊನೆಯ ದಿನಾಂಕ : 6-2-2025
ಒಬ್ಬರಿಗೆ ರೂ. 15,000/- ಮಾತ್ರ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 98447 07017, 73532 11207

# ಓದುಗರ ಪತ್ರ

## ಬೆಳಕು ನೀಡಿ, ಹಾವುಗಳ ಕಾಟ ತಪ್ಪಿಸಿ.!

ಮಾನ್ಯರೇ,

ದಾವಣಗೆರೆಯ ಸರಸ್ವತಿ ನಗರದ 'ಎ' ಬ್ಲಾಕ್, 3ನೇ ಮುಖ್ಯ ರಸ್ತೆ, 7ನೇ ಅಡ್ಡ ರಸ್ತೆಯಲ್ಲಿ ರಸ್ತೆ ದೀಪ ಇರದೇ ಇಡೀ ರಸ್ತೆಯು ಕತ್ತಲೆಯಿಂದ ತುಂಬಿದೆ. ಇದೇ ಸ್ಥಳದಲ್ಲಿ ಖಾಲಿ ನಿವೇಶನವಿದ್ದು, ಇಲ್ಲಿ ಆರರಿಂದ ಏಳು ಹಾವುಗಳು ಕಂಡು ಬಂದಿರುತ್ತವೆ.

ದಟ್ಟವಾಗಿ ಪೊದೆಗಳು ಬೆಳೆದಿರುವುದರಿಂದ ಹಾವುಗಳು ತಮ್ಮ ವಾಸಸ್ಥಾನವನ್ನು ಭದ್ರಪಡಿಸಿಕೊಂಡಿವೆ. ಇದರಿಂದ ಸಾರ್ವಜನಿಕರು ಸಂಜೆ ನಡಿಗೆಗೆ ಹೊರ ಹೋಗಲು ಭಯಭೀತರಾಗಿದ್ದಾರೆ. ಈ ಕುರಿತಾಗಿ ಈ ಹಿಂದೆಯೂ ಸಂಬಂಧಿಸಿದ ಅಧಿಕಾರಿಗಳಲ್ಲಿ ದೂರು ನೀಡಿದ್ದರೂ ಅವರು ನಿರ್ಲಕ್ಷ್ಯ ಮಾಡಿರುತ್ತಾರೆ.

ಆದ್ದರಿಂದ ಈ ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಸದರಿ ಖಾಲಿ ನಿವೇಶನದಲ್ಲಿ ಬೆಳೆದಿರುವ ಪೊದೆಗಳನ್ನು ಶೀಘ್ರವಾಗಿ ತೆರವುಗೊಳಿಸಿ, ರಸ್ತೆಗೆ ವಿದ್ಯುತ್ ದೀಪವನ್ನು ಅಳವಡಿಸುವುದರ ಮೂಲಕ ಅನುಕೂಲ ಮಾಡಿಕೊಡಬೇಕೆಂದು ಸರಸ್ವತಿ ನಗರದ ಸಾರ್ವಜನಿಕರ ಪರ ವಿನಂತಿ.

- ಆಡಳಿತ ಮಂಡಳಿ,
**ಸಂವೇದ ವಿಶೇಷ ಮಕ್ಕಳ ಶಾಲೆ,** ದಾವಣಗೆರೆ.

# ಇಂದಿನಿಂದ ಜಿ.ಎಂ.ಲೀಗ್ ಕ್ರೀಡಾ ಹಬ್ಬ

ದಾವಣಗೆರೆ, ಫೆ. 3- ನಗರದ ಜಿ.ಎಂ. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ವ್ಯವಹಾರಗಳ ನಿರ್ದೇಶನಾಲಯ ಹಾಗೂ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ವತಿಯಿಂದ ನಾಳೆ ದಿನಾಂಕ 4 ರಿಂದ ಇದೇ ದಿನಾಂಕ 15 ರವರೆಗೆ ಜಿ.ಎಂ. ವಿವಿಯ ಕ್ರೀಡಾಂಗಣದಲ್ಲಿ ಪ್ರಥಮ ಬಾರಿಗೆ ಐಪಿಎಲ್ ಮಾದರಿಯ ಜಿ.ಎಂ. ಲೀಗ್ ಕ್ರೀಡಾ ಹಬ್ಬ ನಡೆಯಲಿದೆ. 11 ದಿನಗಳ ಕಾಲ ಕ್ರಿಕೆಟ್, ವಾಲಿಬಾಲ್, ಖೋ-ಖೋ, ಥ್ರೋ ಬಾಲ್ ಪಂದ್ಯಾವಳಿಗಳನ್ನು ಆಯೋಜಿಸಲಾಗಿದೆ ಎಂದು ನಿರ್ದೇಶಕ ಡಾ.ಹೆಚ್. ಎನ್. ಕಿರಣ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಳೆ ಮಂಗಳವಾರ ಜಿ.ಎಂ. ಲೀಗ್ ಕ್ರೀಡಾ ಹಬ್ಬಕ್ಕೆ ಚಾಲನೆ ದೊರೆಯಲಿದೆ. ಕುಸ್ತಿಪಟು, ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ಪುರಸ್ಕೃತರಾದ ಕಾರ್ತಿಕ ಜಿ. ಕಾಟೆ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದು, ಜಿ.ಎಂ. ವಿವಿಯ ಕುಲಾಧಿಪತಿ ಜಿ.ಎಂ.ಲಿಂಗರಾಜು ಅಧ್ಯಕ್ಷತೆ ವಹಿಸಲಿದ್ದಾರೆ. ಕುಲಪತಿ ಡಾ. ಎಸ್.ಆರ್. ಶಂಕಪಾಲ್, ಸಹ ಕುಲಪತಿ ಡಾ.ಹೆಚ್.ಡಿ. ಮಹೇಶಪ್ಪ, ಕುಲಸಚಿವ ಡಾ. ಬಿ.ಎಸ್. ಸುನೀಲ್ ಕುಮಾರ್, ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ ಆಡಳಿತಾಧಿಕಾರಿ ವೈ.ಯು. ಸುಭಾಷ್ಚಂದ್ರ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

ಕ್ರಿಕೆಟ್ ಪಂದ್ಯಾವಳಿಯಲ್ಲಿ 9 ತಂಡಗಳಿದ್ದು, ಪ್ರತಿ ತಂಡದಲ್ಲಿ 20 ಆಟಗಾರರು ಇದ್ದಾರೆ. ವಾಲಿಬಾಲ್ ಪಂದ್ಯದಲ್ಲಿ 8 ತಂಡಗಳಿದ್ದು, ಪ್ರತಿ ತಂಡದಲ್ಲಿ 10 ಆಟಗಾರರು ಇದ್ದಾರೆ.

ಖೋ-ಖೋ ಪುರುಷರು ಹಾಗೂ ಮಹಿಳೆಯರ ವಿಭಾಗದಲ್ಲಿ ತಲಾ ನಾಲ್ಕು ತಂಡಗಳಿದ್ದು, ಪ್ರತಿ ತಂಡದಲ್ಲಿ 12 ಆಟಗಾರರು ಇರುತ್ತಾರೆ. ಥ್ರೋ ಬಾಲ್ ಮಹಿಳಾ ವಿಭಾಗದಲ್ಲಿ 6 ತಂಡಗಳಿದ್ದು, ಪ್ರತಿ ತಂಡದಲ್ಲೂ 8 ಆಟಗಾರರು ಇದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಜಿ.ಎಂ. ವಿವಿಯ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ನಿರ್ದೇಶಕರಾದ ಜಿ.ಬಿ. ಅಜ್ಜಯ್ಯ, ಗುರುಶಂಕರ್, ಬಿ.ಇ. ರಾಜೇಶ್ ಉಪಸ್ಥಿತರಿದ್ದರು.

**ಸವಿತಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ.,**
ಡೋ.ನಂ. 1343/1ಎ2, ಮೂರ್ತಪ್ಪ ಪ್ಲಾಜಾ, 1ನೇ ಮಹಡಿ, ಹದಡಿ ರಸ್ತೆ,
ದಾವಣಗೆರೆ - 577 002 ಫೋ : 08192 271329, 90352 68910

**ಷೇರುದಾರರ ಗಮನಕ್ಕೆ**

ಸಂಘದ ಮುಂದಿನ ಐದು ವರ್ಷದ ಅವಧಿಗೆ ಆಡಳಿತ ಮಂಡಳಿ ನಿರ್ದೇಶಕರನ್ನು ಆಯ್ಕೆ ಮಾಡಲು **ಚುನಾವಣೆಯನ್ನು ದಿನಾಂಕ : 08.02.2025ರ ಶನಿವಾರ ಬೆಳಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ರೋಟರಿ ಬಾಲಭವನ, ಪ್ರವಾಸಿ ಮಂದಿರ ರಸ್ತೆ, ದಾವಣಗೆರೆ ಇಲ್ಲಿ ನಡೆಸಲಾಗುತ್ತದೆ.** ಚುನಾವಣೆಯಲ್ಲಿ ಮತ ನೀಡಲು ಸಂಘವು ನೀಡಿದ ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ. ಕಾರಣ ಸಂಘದ ಗುರುತಿನ ಚೀಟಿ ಪಡೆಯದ **ಅರ್ಹ ಮತದಾರರು** ಸಂಘದ ಕಛೇರಿ ಕೆಲಸದ ವೇಳೆಯಲ್ಲಿ ತಮ್ಮ ಪಾಸ್‌ಪೋರ್ಟ್ ಸೈಜ್‌ನ ಫೋಟೋ, ಆಧಾರ್ ಕಾರ್ಡ್ ಪ್ರತಿಗಳನ್ನು ನೀಡಿ ಗುರುತಿನ ಚೀಟಿ ಪಡೆಯಲು ಸೂಚಿಸಿದೆ.

ಮುಖ್ಯ ಕಾರ್ಯನಿರ್ವಹಣಾಧಿಕಾರಿ

# ಕೊಟ್ಟೂರೇಶ್ವರ ಸ್ವಾಮಿ ತೇರುಗಾಲಿ ಹೊರಕ್ಕೆ



ಕೊಟ್ಟೂರು, ಫೆ. 3 - ಪಟ್ಟಣದ ಆರಾಧ್ಯ ದೈವ ಶ್ರೀ ಗುರು ಬಸವೇಶ್ವರ ಸ್ವಾಮಿಯ ಮಹಾ ರಥೋತ್ಸವದ ಪ್ರಯುಕ್ತ ಸೋಮವಾರ ತೇರುಗಾಲಿಯನ್ನು ಸಂಜೆ 5 ಗಂಟೆಗೆ ಹೊರಗೆ ಹಾಕಿದರು.

ಇದೇ ದಿನಾಂಕ 22 ರಂದು ವಿಜೃಂಭಣೆಯಿಂದ ಜರುಗಲಿರುವ ಮಹಾ ರಥೋತ್ಸವದ ಪ್ರಯುಕ್ತ ಸಂಜೆ ಹಿರೇಮಠದಿಂದ ವಾದ್ಯ ಮೇಳದೊಂದಿಗೆ ತೇರುಗಡ್ಡೆಯಿಂದ ಬಸ್ ನಿಲ್ದಾಣದ ಹತ್ತಿರ ಬಂದು ಸುಸೂತ್ರವಾಗಿ ತಲುಪಿತು.

**ಕೊಟ್ಟೂರು**

ಸಕಲ ಬಿರುದಾವಳಿಗಳ ಮೂಲಕ ಶ್ರೀ ಸ್ವಾಮಿಯ ನೆರೆದಿದ್ದ ಭಕ್ತರು ಶ್ರೀ ಗುರು ಕೊಟ್ಟೂರು ದೊರೆಯೇ ನಿನಗಾರು ಸರಿಯೇ... ಸರಿ ಸರಿ ಎಂದವರ ಹಲ್ಲು ಮುರಿಯೇ ಬಹುಪರಾಕ್... ಎಂಬ ಜಯ ಘೋಷ ಮೊಳಗಿಸುತ್ತ ರಥದ ಗಡ್ಡೆಯನ್ನು ಹೊರಹಾಕಲಾಯಿತು.

ಕ್ರಿಯಾ ಮೂರ್ತಿಗಳಾದ ಶಿವ ಪ್ರಕಾಶ ದೇವರು ರಥದ ಗಡ್ಡೆಯನ್ನು ಹತ್ತಿ ಸುಗಮವಾಗಿ ತೇರುಗಾಲಿ ಹೊರ ಹಾಕಲಾಯಿತು. ಶ್ರೀ ಸ್ವಾಮಿಗೆ ಕಂಕಣ ಧಾರಣೆ ಹಾಗೂ ರಾತ್ರಿ ರಥದ ಹತ್ತಿರ ಗುಗ್ಗರಿ ಪೂಜೆ ಕಾರ್ಯ ನಡೆಯುತ್ತದೆ.




ಮಲೇಬೆನ್ನೂರು ಸಮೀಪದ ನಿಟ್ಟೂರು ರಸ್ತೆ ಅಕ್ಕಪಕ್ಕದಲ್ಲಿರುವ ಭದ್ರಾ ಅಚ್ಚುಕಟ್ಟು ಪ್ರದೇಶದ ಗದ್ದೆಗಳಲ್ಲಿ ಒಂದೆಡೆ ಮಹಿಳೆಯರು ಭತ್ತದ ನಾಟಿ ಮಾಡುತ್ತಿದ್ದರೆ, ಇನ್ನೊಂದಡೆ ಭತ್ತದ ನಾಟಿ ಮಾಡಲು ಟ್ರಾಕ್ಟರ್ ಗಳು ರೊಳ್ಳಿ ಹೊಡೆಯುತ್ತಿರುವ ಕೆಸರಿನ ಹುಳಗಳನ್ನು ತಿನ್ನಲು ಬೆಳ್ಳಕ್ಕಿ ಹಿಂಡು ಲಗ್ಗೆ ಇಟ್ಟಿರುವ ದೃಶ್ಯ ಸೋಮವಾರ ಕ್ಯಾಮರಾ ಕಣ್ಣಿಗೆ ಸೆರೆ ಸಿಕ್ಕಿತು.

# 2022ರಲ್ಲಿ 1.25 ಲಕ್ಷ ಪುರುಷರ ಆತ್ಮಹತ್ಯೆ

## ಲಿಂಗ ತಟಸ್ಥ ಕಾಯ್ದೆಗಳಿಗಾಗಿ ಬಿಜೆಪಿ ಸಂಸದ ಒತ್ತಾಯ

ನವದೆಹಲಿ, ಫೆ. 3 - ಗೃಹ ಹಿಂಸಾಚಾರ ಹಾಗೂ ಪೀಡನೆ ಕಾಯ್ದೆಗಳನ್ನು ಲಿಂಗ ತಟಸ್ಥಗೊಳಿಸುವಂತೆ ರಾಜ್ಯಸಭೆಯಲ್ಲಿ ಬಿಜೆಪಿ ಸಂಸದ ದಿನೇಶ್ ಶರ್ಮ ಒತ್ತಾಯಿಸಿದ್ದಾರೆ.

ಮಹಿಳೆಯರು ಹಾಗೂ ಪುರುಷರಿಬ್ಬರಿಗೂ ಸಮತೋಲನದ ಕಾಯ್ದೆಯ ಅಗತ್ಯವಿದೆ ಎಂದವರು ಹೇಳಿದ್ದಾರೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ದಳದ ಮಾಹಿತಿಯನ್ನು ಉಲ್ಲೇಖಿಸಿದ ಅವರು, 2022 ರಲ್ಲಿ ಆತ್ಮಹತ್ಯೆ ಮಾಡಿಕೊಂಡವರಲ್ಲಿ ಶೇ. 72ರಷ್ಟು ಪುರುಷರಾಗಿದ್ದಾರೆ. ಕೌಟುಂಬಿಕ ಕಾರಣಗಳಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಪುರುಷರ ಸಂಖ್ಯೆ ಹೆಚ್ಚಾಗುತ್ತಿದೆ ಎಂದಿದ್ದಾರೆ.

2022 ರಲ್ಲಿ 1.25 ಲಕ್ಷ ಪುರುಷರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆ ಪ್ರಮಾಣದಲ್ಲಿ ಪುರುಷರ ಸಂಖ್ಯೆ ಹೆಚ್ಚಾಗುತ್ತಿದೆ. ಪುರುಷರ ಆತ್ಮಹತ್ಯೆಗೆ ಕೌಟುಂಬಿಕ ಕಾರಣಗಳೇ ಹೆಚ್ಚಾಗಿವೆ ಎಂದವರು ತಿಳಿಸಿದರು.

ಗೃಹ ಹಿಂಸಾಚಾರದಿಂದ ಮಹಿಳೆಯರನ್ನು ರಕ್ಷಿಸಲು ಕಾಯ್ದೆಗಳಿವೆ. ಆದರೆ ಪುರುಷರನ್ನು ರಕ್ಷಿಸಲು ಕಾಯ್ದೆಗಳಿಲ್ಲ ಎಂದವರು ಹೇಳಿದರು.

ಇತ್ತೀಚಿಗೆ ಆತ್ಮಹತ್ಯೆ ಮಾಡಿಕೊಂಡ ಟೆಕಿ ಅತುಲ್ ಸುಭಾಷ್ ಪ್ರಕರಣವನ್ನು ಉದಾಹರಿಸಿದ ಸಂಸದರು, ಪುರುಷರಿಗೆ ಕಾನೂನು ಹಾಗೂ ಭಾವನಾತ್ಮಕ ಬೆಂಬಲ ಇಲ್ಲ ಎಂಬುದನ್ನು ಈ ಘಟನೆ ತೋರಿಸುತ್ತದೆ ಎಂದಿದ್ದಾರೆ. ಬಿಎಂಎಸ್ ಕಾಯ್ದೆಯ ಸೆಕ್ಷನ್ 85ರ ದುರ್ಬಳಕೆ ಆಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಎಲ್ಲರಿಗೂ ನ್ಯಾಯ ಒದಗಿಸುವ ಸಲುವಾಗಿ ಗೃಹ ಹಿಂಸಾಚಾರ ಹಾಗೂ ಪೀಡನೆ ಸಂಬಂಧದ ಕಾಯ್ದೆಗಳನ್ನು ಲಿಂಗ ತಟಸ್ಥಗೊಳಿಸಬೇಕು ಎಂದು ಶರ್ಮ ಒತ್ತಾಯಿಸಿದ್ದಾರೆ.

# ಹರಿಹರದ ಹಿರಿಯ ಸಾಹಿತಿ ಕಲೀಂಬಾಷ ನಿಧನ



ಹರಿಹರ, ಫೆ. 3 - ಇಲ್ಲಿನ ವಿದ್ಯಾನಗರದ ನಿವಾಸಿ, ಹಿರಿಯ ಸಾಹಿತಿ ಜೆ. ಕಲೀಂಬಾಷ (74) ಅವರು ಸೋಮವಾರ ಮಧ್ಯಾಹ್ನ 1.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಪುತ್ರಿಯರನ್ನು ಅಗಲಿದ್ದಾರೆ. ಇಂದು ರಾತ್ರಿ 9.30ಕ್ಕೆ ಮೃತರ ಅಂತ್ಯ ಸಂಸ್ಕಾರವನ್ನು ನಗರದ ಖಬರಸ್ತಾನ್‌ನಲ್ಲಿ ನೆರವೇರಿಸಲಾಯಿತು.

ಶಿಕ್ಷಣ ಇಲಾಖೆಯಲ್ಲಿ ಕನ್ನಡ ವಿಷಯ ಪರಿವೀಕ್ಷರಾಗಿ ಸೇವೆ ಸಲ್ಲಿಸಿದ್ದರು. ಬಂಡಾಯ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್, ಮುಸ್ಲಿಂ ಚಿಂತಕರ ಚಾವಡಿ ಸೇರಿದಂತೆ ವಿವಿಧ ಸಾಹಿತ್ಯ ಸಂಸ್ಥೆಗಳಲ್ಲಿ ಕ್ರಿಯಾಶೀಲರಾಗಿದ್ದರು.

**ಕೃತಿಗಳು:** ಶಾಹೀನಾ ಮತ್ತು ಇತರೆ ಕವಿತೆಗಳು, ಗುಜರಾತಿನಲ್ಲಿ ಗಾಂಧಿ ಆತ್ಮ, ಮನೆಯಲ್ಲಿ ಬೆಳದಿಂಗಳು, ಕಾಡ್ತಾವ ಮನದಾಗ, ಖುರಾನಿನ ಆಯ್ದ ಸೂಕ್ತಿಗಳು ಕೃತಿಗಳನ್ನು ರಚಿಸಿದ್ದ ಅವರು ಭಾರತ ಸ್ವಾತಂತ್ರ್ಯ ಹುತಾತ್ಮ ಕವಿ ಅಶ್ಫಾಖ್ ಉಲ್ಲಾ ಖಾನ್ ಮತ್ತು ಕ್ರಾಂತಿಕಾರಿ ಸ್ವಾತಂತ್ರ್ಯ ಹುತಾತ್ಮ ಕವಿ ರಾಮ್ ಪ್ರಸಾದ್ ಬಿಸ್ಮಿಲ್ ಎಂಬ ಕೃತಿಗಳನ್ನು ಹಿಂದಿ ಭಾಷೆಯಿಂದ ಕನ್ನಡಕ್ಕೆ ಭಾಷಾಂತರಿಸಿದ್ದರು.

**ಪ್ರಶಸ್ತಿಗಳು:** ಸಂಕ್ರಮಣ ಸಾಹಿತ್ಯ ಬಹುಮಾನ, ಗೊರೂರು, ರನ್ನ ಸಾಹಿತ್ಯ, ತಾಲ್ಲೂಕು ಮತ್ತು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪಡೆದಿದ್ದರು. ರಾಯಚೂರಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಈಚೆಗೆ ಆಯೋಜಿಸಿದ್ದ ಗೋಕಾಕ್ ಚಳವಳಿ ಹಿ ನ್ನೋ ಟ - ಮು ನ್ನೋ ಟ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸನ್ಮಾನಿಸಿದ್ದರು.

ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ಜಿಲ್ಲಾ ಗೌರವ ಕಾರ್ಯದರ್ಶಿ ಜಯಪ್ಪ, ಸಂಘಟನಾ ಕಾರ್ಯದರ್ಶಿ ಜಗದೀಶ್ ಕೂಲಂಬಿ, ತಾಲ್ಲೂಕು ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ, ತಾಲ್ಲೂಕು ಗೌರವ ಕಾರ್ಯದರ್ಶಿ ಬಿ.ಬಿ. ರೇವಣ್ಣ ನಾಯ್ಕ್, ಚಿದಾನಂದ ಕಂಚಿಕೇರಿ, ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ, ಜಿಗಳಿ ಪ್ರಕಾಶ್, ಸುಮತಿ ಜಯಪ್ಪ, ಪ್ರೊ. ಎ.ಬಿ. ರಾಮಚಂದ್ರಪ್ಪ, ಎಚ್. ನಿಜಗುಣ, ಎ. ರಿಯಾಜ್ ಅಹ್ಮದ್, ಎನ್.ಇ. ಸುರೇಶ್ ಸ್ವಾಮಿ, ಎಚ್.ಕೆ. ಕೊಟ್ರಪ್ಪ, ಮಾಜಿ ಶಾಸಕ ಎಸ್. ರಾಮಪ್ಪ, ನಂದಿಗಾವಿ ಶ್ರೀನಿವಾಸ್, ಬಿ. ರೇವಣಸಿದ್ದಪ್ಪ ಸೇರಿದಂತೆ ಇತರೆ ಗಣ್ಯರು ಮೃತರ ಅಂತಿಮ ದರ್ಶನ ಪಡೆದರು.

# ಹೊರಗುತ್ತಿಗೆ ಪದ್ಧತಿ ಕೈ ಬಿಡಿ, ನೇರ ಪಾವತಿ ಜಾರಿಗೆ ತನ್ನಿ

## ಕಸ ವಿಲೇವಾರಿ ಸ್ಥಗಿತಗೊಳಿಸಿ ಮಹಾನಗರ ಪಾಲಿಕೆ ಹೊರಗುತ್ತಿಗೆ ನೌಕರರ ಪ್ರತಿಭಟನೆ



ದಾವಣಗೆರೆ, ಫೆ. 4- ಹೊರಗುತ್ತಿಗೆ ನೌಕರರನ್ನು ಪೌರ ಕಾರ್ಮಿಕರೆಂದು ಪರಿಗಣಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ಹೊರಗುತ್ತಿಗೆ ನೌಕರರ ಸಂಘ, ಪಾಲಿಕೆಯ ಹೊರಗುತ್ತಿಗೆ ಘನತ್ಯಾಜ್ಯ ವಿಲೇವಾರಿ ವಾಹನ ಚಾಲಕರ ಸಂಘಗಳ ನೇತೃತ್ವದಲ್ಲಿ ಕಸ ವಿಲೇವಾರಿ ವಾಹನಗಳನ್ನು ಸ್ಥಗಿತಗೊಳಿಸಿ ನಗರದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಮಹಾನಗರ ಪಾಲಿಕೆ ಆವರಣದಲ್ಲಿ ಪ್ರತಿಭಟನೆ ನಡೆಸಿದ ಹೊರಗುತ್ತಿಗೆ ನೌಕರರು ನಂತರ ಜಿಲ್ಲಾಧಿಕಾರಿಗಳ ಕಚೇರಿಗೆ ಪ್ರತಿಭಟನಾ ಮೆರವಣಿಗೆ ಮೂಲಕ ತೆರಳಿ, ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಬಗೆಯ ಕಾರ್ಮಿಕರಿಗೆ ಗುತ್ತಿಗೆ ಪದ್ಧತಿಯನ್ನು ರದ್ದುಪಡಿಸಿ, ನೇರಪಾವತಿ ಪದ್ಧತಿ ಜಾರಿಗೆ ತರುವ ಪ್ರಸ್ತಾವನೆಯನ್ನು ಬಜೆಟ್‌ನಲ್ಲಿ ಘೋಷಿಸಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಸ್ಥಳೀಯ ಸಂಸ್ಥೆಗಳಲ್ಲಿನ ಕುಡಿಯುವ ನೀರು, ಸ್ವಚ್ಛತೆ ವಿಭಾಗದ ಸಹಾಯಕರು, ಸ್ಯಾನಿಟರಿ ಸೂಪರ್‌ವೈಜರ್‌ಗಳು, ಕಸದ ವಾಹನಗಳ ಚಾಲಕರು, ಲೋಡರ್ಸ್, ಕ್ಲೀನರ್ಸ್, ಒಳಚರಂಡಿ ಸ್ವಚ್ಛಗೊಳಿಸುವ ಕಾರ್ಮಿಕರು,ತ್ಯಾಜ್ಯ ವಿಲೇವಾರಿ ಸಹಾಯಕರು ಸೇರಿದಂತೆ ಹತ್ತು ಸಾವಿರಕ್ಕೂ ಹೆಚ್ಚು ಜನ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಸಕಾಲಕ್ಕೆ ಬಾರದ ವೇತನ, ಅಧಿಕಾರಿಗಳು, ಗುತ್ತಿಗೆದಾರರ ಕಿರುಕುಳದಿಂದ ಬೇಸತ್ತು ಹೋಗಿರುವುದಾಗಿ ಆಕ್ರೋಶ ವ್ಯಕ್ತಪಡಿಸಿದರು.

ಪೌರ ಕಾರ್ಮಿಕರೊಟ್ಟಿಗೆ ಕರ್ತವ್ಯ ನಿರ್ವಹಿಸುವ ಇನ್ನುಳಿದ ಕಾರ್ಮಿಕರನ್ನೂ ಸಹ ಗುತ್ತಿಗೆ ಪದ್ಧತಿಯಿಂದ ಬಿಡುಗಡೆಗೊಳಿಸಿ,ನೇರ ಪಾವತಿಗೆ ತರುವ ಬೇಡಿಕೆಯನ್ನು ಈ ಬಾರಿ ಈಡೇರಿಸಬೇಕು ಎಂದು ಆಗ್ರಹಿಸಿದರು.

ಹೊರಗುತ್ತಿಗೆ ಅಡಿಯಲ್ಲಿ ಕೆಲಸ ಮಾಡುತ್ತಿರುವ ಮಹಾನಗರ ಪಾಲಿಕೆಯ ಕಸದ ವಾಹನ ಚಾಲಕರು ಮತ್ತು ಎಲ್ಲಾ ಹೊರಗುತ್ತಿಗೆ ನೌಕರರಿಗೂ ಬೆಳಗಿನ ಉಪಹಾರ ಜಾರಿಗೊಳಿಸುವ ಜೊತೆಗೆ ಈವರೆಗೆ ಜಾರಿಗೊಳಿಸುವ ಅವಧಿಯ ಉಪಹಾರದ ಭತ್ಯೆಯನ್ನು ಚಾಲಕರ ಖಾತೆಗೆ ತುಂಬಬೇಕು ಎಂದು ಮನವಿ ಮಾಡಿದರು.

2023 ರಲ್ಲಿ ಪ್ರತಿಭಟನೆ ನಡೆಸಿದ ಕಸದ ವಾಹನ ಚಾಲಕರ ಮೇಲೆ ವಿಧಿಸಿದ ದಂಡದ ಮೊತ್ತ 4.5 ಲಕ್ಷ ರೂ. ಗಳನ್ನು ಹಿಂತಿರುಗಿಸಬೇಕು. ಎಲ್ಲಾ ಹೊರಗುತ್ತಿಗೆ ನೌಕರರಿಗೂ ಕಡ್ಡಾಯವಾಗಿ ಕಾರ್ಮಿಕ ಕಾಯ್ದೆಯ ಅನುಸಾರ ವಾರದ ರಜೆ ನೀಡಬೇಕು ಎಂದು ಹೇಳಿದರು.

ಜಗಳೂರು ಪಟ್ಟಣ ಪಂಚಾಯಿತಿಯ ನೀರು ಸರಬರಾಜು ಸಹಾಯಕರು ಸೇರಿದಂತೆ ಎಲ್ಲಾ ಹೊರಗುತ್ತಿಗೆ ನೌಕರರಿಗೆ ಬಾಕಿ ಉಳಿದಿರುವ 9 ತಿಂಗಳ ವೇತನವನ್ನು ಕೂಡಲೇ ಪಾವತಿಸಬೇಕು. ಸ್ವಚ್ಛತಾ ಕಾರ್ಮಿಕರನ್ನು ಗೃಹಭಾಗ್ಯ ಯೋಜನೆ ವ್ಯಾಪ್ತಿಗೆ ಸೇರ್ಪಡೆಗೊಳಿಸಲು ಸರ್ಕಾರ ಆದೇಶಿಸಿದೆ. ಜಿಲ್ಲಾಡಳಿತ ವಿಶೇಷ ಆದ್ಯತೆ ಮೇರೆಗೆ ಈ ಕಾರ್ಮಿಕರಿಗೆ ವಸತಿ ವ್ಯವಸ್ಥೆ ಕಲ್ಪಿಸಬೇಕು. ಸಫಾಯಿ ಕರ್ಮಚಾರಿ ಕಾರ್ಡ್ ವಿತರಿಸುವಂತೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘದ ಪದಾಧಿಕಾರಿಗಳಾದ ಎಂ. ವೀರೇಶ್, ಎಂ.ಬಿ. ನಾಗಣ್ಣಗೌಡ, ಎಂ.ಆರ್.ದುಗ್ಗೇಶ್, ಪಿ. ಮಂಜಪ್ಪ, ಕಿರಣ್ ಕುಮಾರ್, ಆರ್. ಮಂಜಪ್ಪ, ಸುರೇಶ್ ಬಿರಾದಾರ್, ಟಿ. ಸಂತೋಷ್, ಎನ್. ನವೀನ್ ಮತ್ತಿತರರು ಪಾಲ್ಗೊಂಡಿದ್ದರು.

# ಭರಮಸಾಗರ : ಇಂದಿನಿಂದ ತರಳಬಾಳು ಹುಣ್ಣಿಮೆ



ಚಿತ್ರದುರ್ಗ ತಾಲ್ಲೂಕು ಭರಮಸಾಗರದಲ್ಲಿ ಇಂದಿನಿಂದ ಇದೇ ದಿನಾಂಕ 12 ರವರೆಗೆ 'ತರಳಬಾಳು ಹುಣ್ಣಿಮೆ ಮಹೋತ್ಸವ' ಜರುಗಲಿದೆ.

ಇಂದು ಸಂಜೆ 6.30 ಕ್ಕೆ 'ಶಿಕ್ಷಣ-ಕಲೆ-ಸಂಸ್ಕೃತಿ' ಶೀರ್ಷಿಕೆಯಡಿ ಮೊದಲ ದಿನದ ಕಾರ್ಯಕ್ರಮ ನಡೆಯಲಿದ್ದು, ಗದಗ-ವಿಜಯಪುರದ ರಾಮಕೃಷ್ಣ-ವಿವೇಕಾನಂದಾಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ನಿರ್ಭಯಾನಂದ ಸರಸ್ವತಿ ಸ್ವಾಮಿಗಳು ಆಶೀರ್ವಚನ ನೀಡಲಿದ್ದು, ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಚಿವರಾದ ಎಂ.ಬಿ.ಪಾಟೀಲ್, ಮಧು ಬಂಗಾರಪ್ಪ, ಡಿ. ಸುಧಾಕರ್, ಶಾಸಕ ಡಾ. ಎಂ.ಚಂದ್ರಪ್ಪ, ಚಿತ್ರದುರ್ಗ ಜಿಲ್ಲಾಧಿಕಾರಿ ಟಿ. ವೆಂಕಟೇಶ್, ದಾವಣಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ್, ವಿಧಾನ ಪರಿಷತ್ ಸದಸ್ಯ ಎನ್.ರವಿ ಕುಮಾರ್, ಚಿತ್ರನಟ ಡಾಲಿ ಧನಂಜಯ, ಬೆಂಗಳೂರಿನ ಗಾಯಕಿ ಕವಿತಾ ವೆಂಕಟರಾಜು ಉಡುಪ, ಅಮೆರಿಕಾದ ಚಿಕಾಗೋ ವಿಜ್ಞಾನಿ ಅಣ್ಣಾ ಪುರ ಶಿವಕುಮಾರ್ ಭಾಗವಹಿಸಲಿದ್ದಾರೆ.

ಶಿಕ್ಷಣ ತಜ್ಞ ಡಾ. ಗುರುರಾಜ ಕರ್ಜಗಿ, ದುಬೈ ಕರ್ನಾಟಕ ಸಂಘದ ಅಧ್ಯಕ್ಷ ಶಶಿಧರ್ ನಾಗರಾಜಪ್ಪ, ಹಿರೇಮಗಳೂರಿನ ಕನ್ನಡದ ಪೂಜಾರಿ ಹಿರೇಮಗಳೂರು ಕಣ್ಣನ್, ಉಪನ್ಯಾಸಕರಾದ ನಾಗಶ್ರೀ ತ್ಯಾಗರಾಜ್ ಉಪನ್ಯಾಸ ನೀಡಲಿದ್ದಾರೆ. ಇಲಕಲ್ ಆಕಾಶವಾಣಿ ಕಲಾವಿದರೂ, ಸಂಗೀತ ಬಳಗದ ಗಣೇಶ್ ಎನ್. ರಾಯಭಾಗಿ ಅವರಿಂದ ವಚನಗೀತೆ, ಸಿರಿಗೆರೆ ತರಳಬಾಳು ಕಲಾ ಸಂ ಘದ ಕಲಾವಿದರಿಂದ ಮಲ್ಲಿಹಗ್ಗ ಜಾನಪದ ಸಿರಿ, ಸಿರಿಗೆರೆ ಬಿ.ಲಿಂಗಯ್ಯ ವಸತಿಯುತ ಪದವಿ ಪೂರ್ವ ಕಾಲೇಜಿನ ವತಿಯಿಂದ ಜಾನಪದ ನೃತ್ಯ ಹಾಗೂ ತರಳಬಾಳು ಕಲಾ ಸಂಘದಿಂದ ವಚನ ನೃತ್ಯ ಕಾರ್ಯಕ್ರಮ ನಡೆಯಲಿದೆ.

## ಇಂದು ಶ್ರೀ ಅನ್ನಪೂರ್ಣೇಶ್ವರಿ ರಥೋತ್ಸವ



ಶ್ರೀ ಡಿ. ದೇವರಾಜ ಅರಸು ಬಡಾವಣೆ ಎ ಬ್ಲಾಕ್‌ನಲ್ಲಿ ರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನ ದಲ್ಲಿ ಶ್ರೀ ದೇವಿಯ ರಥೋತ್ಸವ ಇಂದು ನಡೆಯಲಿದೆ. ಇಂದು 8ಕ್ಕೆ ಅಭಿಷೇಕ, ಮಧ್ಯಾಹ್ನ 12.05ಕ್ಕೆ ಶ್ರೀ ಮಾತಾ ಅನ್ನಪೂರ್ಣೇಶ್ವರಿ ರಥೋತ್ಸವ, ಸಂಜೆ 5ಕ್ಕೆ ಶ್ರೀ ವಾಸವಿ ಯುವತಿಯರ ಭಜನಾ ಮಂಡಳಿ ಯಿಂದ ಭಜನೆ ಜರುಗಲಿದೆ.

## ನಾಳೆ ಸವಿತಾ ಮಹರ್ಷಿ ಜಯಂತಿ ಆಚರಣೆ



ದಾವಣಗೆರೆ, ಫೆ.3- ಜಿಲ್ಲಾಡಳಿತದ ವತಿಯಿಂದ ಜಿಲ್ಲಾಧಿಕಾರಿ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ನಾಡಿದ್ದು ದಿನಾಂಕ 5ರ ಬೆಳಗ್ಗೆ 11 ಗಂಟೆಗೆ ಸವಿತಾ ಮಹರ್ಷಿ ಜಯಂತಿಯನ್ನು ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

## ನಾಡಿದ್ದು ಪಾಲಿಕೆ ಆಯವ್ಯಯ ಸಭೆ

ದಾವಣಗೆರೆ, ಫೆ.3- ಮಹಾನಗರ ಪಾಲಿಕೆಯ ಸಭಾಂಗಣದಲ್ಲಿ ಇದೇ ದಿನಾಂಕ 6ರ ಬೆಳಗ್ಗೆ 11 ಗಂಟೆಗೆ ಮಹಾಪೌರರಾದ ಕೆ. ಚಮನ್ ಸಾಬ್ ಅವರ ಅಧ್ಯಕ್ಷತೆಯಲ್ಲಿ ಆಯವ್ಯಯ ಸಭೆ ಆಯೋಜಿಸಲಾಗಿದೆ ಎಂದು ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ತಿಳಿಸಿದ್ದಾರೆ.





## ಸ್ಯಾಮ್‌ಸಂಗ್ ಗ್ಯಾಲಕ್ಸಿ ಪ್ಯಾರಡೈಮ್ ಎಸ್. 25 ಸೀರೀಸ್ ಲೋಕಾರ್ಪಣೆ

ದಾವಣಗೆರೆ, ಫೆ.3- ನಗರದ ಗುಪ್ತಾ ಶಾಪೆಯಲ್ಲಿ ಸೋಮವಾರ ಸ್ಯಾಮ್‌ಸಂಗ್ ಗ್ಯಾಲಕ್ಷಿ ಪ್ಯಾರಡೈಮ್ ಎಸ್-25 ಸೀರೀಸ್ ಹೊಸ ಸ್ಮಾರ್ಟ್ ಫೋನ್ ಲೋಕಾರ್ಪಣೆ ಮಾಡಲಾಯಿತು. ಇದೇ ವೇಳೆ ಗ್ರಾಹಕರಾದ ದರ್ಶನ್, ಪ್ರಸನ್ನ ಆರಾಧ್ಯ, ಕೋಗುಂಡೆ ಕೊಟ್ರೇಶ್, ಐರಣಿ ತುಕಾರಾಮ್ ಅವರು ಹೊಸ ಸ್ಮಾರ್ಟ್ ಫೋನ್ ಖರೀದಿಸುವ ಮೂಲಕ ಸಂತಸ ಹಂಚಿಕೊಂಡರು. ಗುಪ್ತಾ ಶಾಪೆ ಮಾಲೀಕರಾದ ಪ್ರಶಾಂತ್ ಗುಪ್ತಾ, ಸ್ಯಾಮ್‌ಸಂಗ್ ಏರಿಯಾ ಮ್ಯಾನೇಜರ್ ವಿನಯಕುಮಾರ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ತಂದೆಯ ಅಂತ್ಯಕ್ರಿಯೆಗಾಗಿ ಸಹೋದರರ ಕಲಹ

# ಅರ್ಧ ದೇಹ ಕೊಡುವಂತೆ ಕೇಳಿದ ಮಗ

ಟಿಕಮ್‌ಘರ್, ಫೆ. 3 - ತಂದೆಯ ಅಂತ್ಯಕ್ರಿಯೆಗೆ ಸಂಬಂಧಿಸಿದಂತೆ ಸಹೋದರನ ಜೊತೆ ಕಲಹ ನಡೆಸಿದ ವ್ಯಕ್ತಿಯೋರ್ವ, ತಂದೆಯ ಮೃತ ದೇಹದಲ್ಲಿ ಅರ್ಧಭಾಗ ತನಗೆ ನೀಡುವಂತೆ ವಿಚಿತ್ರ ಬೇಡಿಕೆ ಮುಂದಿಟ್ಟ ಘಟನೆ ಮಧ್ಯಪ್ರದೇಶದ ಟಿಕಮ್‌ಘರ್ ಜಿಲ್ಲೆಯಲ್ಲಿ ನಡೆದಿದೆ.

ಲಿಧೊರತಾಲ್ ಎಂಬ ಹಳ್ಳಿಯಲ್ಲಿ ಸಹೋದರರ ನಡುವೆ ಕಲಹ ನಡೆದಿತ್ತು. ಈ ಬಗ್ಗೆ ಪೊಲೀಸರಿಗೆ ಗ್ರಾಮಸ್ಥರು ಮಾಹಿತಿ ನೀಡಿದರು. ನಂತರ ವಿಷಯ ಬಗೆಹರಿಸಲಾಗಿದೆ ಎಂದು ಜಟಾರ ಪೊಲೀಸ್ ಠಾಣಾಧಿಕಾರಿ ಅರವಿಂದ್ ಸಿಂಗ್ ಡಂಗಿ ತಿಳಿಸಿದ್ದಾರೆ.

ಧ್ಯಾನಿ ಸಿಂಗ್ ಘೋಷ್ (84) ಅವರು ತಮ್ಮ ಕಿರಿಯ ಮಗ ದೇಶರಾಜ್ ಮನೆಯಲ್ಲಿ ನೆಲೆಸಿದ್ದರು. ದೀರ್ಘಕಾಲದ ಅಸ್ವಸ್ಥತೆಯಿಂದ ಅವರು ನಿಧನರಾಗಿದ್ದರು.

ಅವರ ಹಿರಿಯ ಮಗ ಕಿಶನ್ ಹಳ್ಳಿಯ ಹೊರ ಭಾಗದ ಮನೆಯಲ್ಲಿದ್ದರು. ತಂದೆಯ ಸಾವಿನ ಸುದ್ದಿ ಕೇಳಿ ತಮ್ಮನ ಮನೆಗೆ ಬಂದ ಕಿಶನ್, ನಾನೇ ಅಂತ್ಯಕ್ರಿಯೆ ನಡೆಸುತ್ತೇನೆ ಎಂದು ತಗಾದೆ ತೆಗೆದರು.

ತಂದೆಯ ಇಚ್ಛೆಯಂತೆ ತಾನೇ ಅಂತ್ಯಕ್ರಿಯೆ ನಡೆಸುವುದಾಗಿ ದೇಶರಾಜ್ ಹೇಳಿದರು.

ಪಾನಮತ್ತ ಸ್ಥಿತಿಯಲ್ಲಿದ್ದ ಹಿರಿಮಗ ತಂದೆಯ ದೇಹದ ಅರ್ಧ ಭಾಗವನ್ನು ತನಗೆ ನೀಡಬೇಕು ಎಂದು ತಗಾದೆ ತೆಗೆದ. ಸ್ಥಳಕ್ಕೆ ಧಾವಿಸಿದ ಪೊಲೀಸರು ಕಿಶನ್ ಮನವೊಲಿಸಿದ್ದಾರೆ. ನಂತರ ಕಿರಿಯ ಮಗ ಅಂತ್ಯಕ್ರಿಯೆ ನಡೆಸಿದ್ದಾನೆ.

Aaraike Hospitals
HCG The Specialist in Cancer Care adding life to years
HCG ಕ್ಯಾನ್ಸರ್ ಕೇರ್‌ನಿಂದ ನಮ್ಮ ಅನುಭವಿ ಆಂಕೊಲಾಜಿಸ್ಟ್ ಅನ್ನು ನಿಮ್ಮ ನಗರದಲ್ಲಿ ಭೇಟಿ ಮಾಡಿ
ಆರೈಕೆ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್



ವಿಳಾಸ
ಆರೈಕೆ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್
ಕ್ರೀಡಾಂಗಣದ ಎದುರು, ಹವಾಯಿ ರಸ್ತೆ.
ದಾವಣಗೆರೆ - 577001
ಭೇಟಿ ಸಮಯ
DATE : 5 Feb 2025, Wednesday
TIME : 10:30 AM - 01:00 PM
Dr Krithikaa Sekar
Consultant Radiation Oncologist
HCG Cancer Centre, KR Road
Bangalore, Karnataka
For Appointment, Contact
7829434249
www.hcgoncology.com
AHMEDABAD | BENGALURU | BHAVNAGAR | CHENNAI | CUTTACK | HUBBALLI | INDORE | JAIPUR | KALABURAGI | KENYA | KOLKATA | MUMBAI | MYSORE | NAGPUR | NASHIK | ONGOLE | RAJKOT | RANCHI | SHIMOGA | VADODARA | VIJAYAWADA | VIZAG

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು ಶೃಂಗಾರ ತೋಟದ ವಾಸಿ
**ಪಿ. ಸುಭಾಷ್**
ನಿವೃತ್ತ ಡೆ. ತಹಶೀಲ್ದಾರ್, ಮೈಸೂರು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 27.01.2025ನೇ ಸೋಮವಾರ ನನ್ನ ಧರ್ಮಪತ್ನಿ
**ಶ್ರೀಮತಿ ಯು. ಜಾನಕಿ**
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಸಮಾರಾಧನೆ'ಯನ್ನು**
ದಿನಾಂಕ : 04.02.2025ನೇ ಮಂಗಳವಾರ ಬೆಳಿಗ್ಗೆ 10.30 ಗಂಟೆಗೆ ಮೃತರ ಸ್ವಗೃಹ ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಶೃಂಗಾರ ತೋಟದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು :
ಪತಿ : **ಪಿ. ಸುಭಾಷ್** ನಿವೃತ್ತ ಡೆ. ತಹಶೀಲ್ದಾರ್, ಮೈಸೂರು , **ಮಕ್ಕಳು, ಮೊಮ್ಮಕ್ಕಳು ಹಾಗೂ ಬಂಧು ಮಿತ್ರರು, ಶೃಂಗಾರ ತೋಟ**
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು, ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಪ್ರಥಮ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಅಜ್ಜಂಪುರ ಶೆಟ್ರು ಶಾರದಮ್ಮನವರು**
(ಲಿಂ. ಅಜ್ಜಂಪುರ ಶೆಟ್ರು ಮುರಿಗೆಪ್ಪ ಇವರ ಧರ್ಮಪತ್ನಿ)
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು, ನೀವು ಹಾಕಿಕೊಟ್ಟ ಮಾರ್ಗದರ್ಶನ ನಮಗೆ ದಾರಿದೀಪ ಸದಾ ನಿಮ್ಮ ಸ್ಮರಣೆಯಲ್ಲಿರುವ...
ನಿಮ್ಮ ಆಶೀರ್ವಾದವೇ ನಮಗೆ ಶ್ರೀ ರಕ್ಷೆ
ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಮರಿ ಮೊಮ್ಮಕ್ಕಳು...
ಅಜ್ಜಂಪುರ ಶೆಟ್ರು ಕುಟುಂಬದವರು ಹಾಗೂ ಬಂಧು-ಮಿತ್ರರು.

ನಂಜಪ್ಪ ಲೈಫ್ ಕೇರ್ ಶಿವಮೊಗ್ಗ
ನಂಜಪ್ಪ ಹಾಸ್ಪಿಟಲ್ಸ್ ದಾವಣಗೆರೆ
ವಿಶ್ವ ಕ್ಯಾನ್ಸರ್ ದಿನ ಫೆಬ್ರವರಿ 4
ಕ್ಯಾನ್ಸರ್ ಗುಣಪಡಿಸಲು ಆರಂಭಿಕ ಪತ್ತೆಯೇ ಕೀಲಿಕೈ



• ಕುಟುಂಬದಲ್ಲಿ ಕ್ಯಾನ್ಸರ್‌ನ ಇತಿಹಾಸವಿದ್ದಲ್ಲಿ • 40ನೇ ವಯಸ್ಸಿನ ನಂತರ ನಿಯಮಿತ ತಪಾಸಣೆ ನಿಮ್ಮ ಜೀವ ಉಳಿಸಬಲ್ಲದು.
08182-267300
ಗಾಡಿಕೊಪ್ಪ , ಸಾಗರ ರಸ್ತೆ, **ಶಿವಮೊಗ್ಗ**
08192-260111
ಮಾಗನೂರು, ಬಸಪ್ಪ ರಸ್ತೆ (ಹದಡಿ ರಸ್ತೆ), **ದಾವಣಗೆರೆ**

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas